ಆಧುನಿಕ ಕನ್ನಡ ಸಾಹಿತ್ಯಃ ಪರಿಸರ ಪ್ರಜ್ಞೆ ಮತ್ತು ಜೀವನ ದರ್ಶನ

ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕ
ಬಿ.ಸಿ. ಕುಶಾಲ

ಮಾರ್ಗದರ್ಶಕರು
ಡಾ॥ ರಹಮತ್ ತರೀಕೆರೆ

ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ
ಹಂಪಿ

ಅಕ್ಟೋಬರ್ ೩೧.೧೦.೧೯೯೬

ಆಧುನಿಕ ಕನ್ನಡ ಸಾಹಿತ್ಯ: ಪರಿಸರ ಪ್ರಜ್ಞೆ ಮತ್ತು ಜೀವನ ದರ್ಶನ

ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕ
ಬಿ.ಸಿ. ಕುಶಾಲ

ಮಾರ್ಗದರ್ಶಕರು
ಡಾ|| ರಹಮತ್ ತರೀಕೆರೆ

ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ
ಹಂಪಿ

ಅಕ್ಟೋಬರ್ ೩೧.೧೦.೧೯೯೬

ಪ್ರಮಾಣ ಪತ್ರ

"ಆಧುನಿಕ ಕನ್ನಡ ಸಾಹಿತ್ಯಃ ಪರಿಸರ ಪ್ರಜ್ಞೆ ಮತ್ತು ಜೀವನ ದರ್ಶನ" ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವ ವಿದ್ಯಾಲಯಕ್ಕೆ ಡಾ|| ರಹಮತ್ ತರೀಕೆರೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ.

ಬಿ.ಸಿ. ಕುಶಾಲ
ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ
ಹಂಪಿ.

ದಿನಾಂಕ ಃ ೩೧. ೧೦. ೯೬

ಸ್ಥಳ ಃ ವಿದ್ಯಾರಣ್ಯ

: ದೃಢೀಕರಣ ಪತ್ರ :

ಶ್ರೀ ಬಿ.ಸಿ. ಕುಶಾಲ ಅವರು "ಆಧುನಿಕ ಕನ್ನಡ ಸಾಹಿತ್ಯ : ಪರಿಸರ ಪ್ರಜ್ಞೆಮತ್ತು ಜೀವನ ದರ್ಶನ" ಎಂಬ ಶೀರ್ಷಿಕೆಯ ಈ ಸಂಶೋಧನಾ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಅಥವಾ ಪ್ರಬಂಧದ ಯಾವುದೇ ಭಾಗವನ್ನು ಬಿ.ಸಿ. ಕುಶಾಲ ಅವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ.

ಡಾ॥ ರಹಮತ್ ತರೀಕೆರೆ
ರೀಡರ್
ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ.

ದಿನಾಂಕ : ೩೧.೧೦.೧೯೯೬

ಸ್ಥಳ : ವಿದ್ಯಾರಣ್ಯ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನ ಮಾಡುವುದಕ್ಕೆ ಅವಕಾಶ ನೀಡಿದ ಮಾನ್ಯ ಕುಲಪತಿಗಳಾದ ಡಾ॥ ಚಂದ್ರಶೇಖರ ಕಂಬಾರ ಅವರಿಗೆ,

ಕುಲಸಚಿವರಾದ ಶ್ರೀ ಕರಿಗೌಡ ಬೀಚನಹಳ್ಳಿಯವರಿಗೆ, ಹಾಗೂ ಕುಲಸಚಿವರಾಗಿದ್ದ ಡಾ॥ಕೆ.ವಿ. ನಾರಾಯಣ ಪ್ರೊ॥ ಹಿ.ಚಿ. ಬೋರಲಿಂಗಯ್ಯ ಅವರಿಗೆ,

ತಾಯಿಯಾಗಿ, ಗುರುವಾಗಿ, ಗೆಳೆಯರಾಗಿ ಸಂಯಮ, ಪ್ರೀತಿಯಿಂದ, ನನ್ನ ಅಸ್ಪಷ್ಟತೆಯನ್ನು ತಪ್ಪುಗಳನ್ನು ತಿದ್ದಿ ಅರಿವಿಗೆ ತಂದು ಮಾರ್ಗದರ್ಶನ ಮಾಡಿದ ನನ್ನ ಪ್ರೀತಿಯ ಗುರುಗಳಾದ ಡಾ॥ ರಹಮತ್ ತರೀಕೆರೆ ಅವರಿಗೆ,

ನನ್ನ ಅಧ್ಯಯನಕ್ಕೆ ಸಹಕರಿಸಿದ ಪ್ರೀತಿಯ ಗುರುಗಳಾದ ಪ್ರೊ॥ ಓ.ಎಲ್. ನಾಗಭೂಷಣ ಸ್ವಾಮಿ, ಪ್ರೊ॥ ಸತ್ಯನಾಥ್ , ಪ್ರೊ॥ ಶೇಷಾದ್ರಿ, ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ್, ಪ್ರೊ॥ ಲಕ್ಷ್ಮಣ ತೆಲಗಾವಿ, ಡಾ॥ ಪುರುಷೋತ್ತಮ ಬಿಳಿಮಲೆ, ಪ್ರೊ॥ ಎ.ವಿ. ನಾವಡ ಅವರಿಗೆ.

ಪ್ರೀತಿಯಿಂದ ಪ್ರೋತ್ಸಾಹಿಸಿ ಮಾಹಿತಿ ನೀಡಿದ ವೆಂಕಟೇಶ ಇಂದ್ವಾಡಿ, ಅಂಬರೀಶ್ ನೂಗಡೂಣೆ, ಅಶೋಕ್ ಕುಮಾರ ರಂಜರೇ, ಇತರ ಅಧ್ಯಪಕರುಗಳಿಗೆ,

ಈ ಅಧ್ಯಯನಕ್ಕಾಗಿ ಮೊದಲಿನಿಂದಲೂ ನಿರ್ದೇಶಿಸಿ, ಸಹಕರಿಸಿದ ಮೈಸೂರು ವಿಶ್ವವಿದ್ಯಾಲಯದ ರೀಡರ್ ನೀಲಗಿರಿ, ಎಂ. ತಳವಾರ ಅವರಿಗೆ,

ನನ್ನ ಅಧ್ಯಯನಕ್ಕೆ ಪ್ರೀತಿಯಿಂದ ಗ್ರಂಥಗಳನ್ನು ಒದಗಿಸಿಕೊಟ್ಟ ಮಲ್ಲಿಕಾರ್ಜುನ ಮತ್ತು ಗ್ರಂಥಾಲಯದ ಸಿಬ್ಬಂದಿ ವರ್ಗಕ್ಕೆ

ಅಧ್ಯಯನದ ಕೆಲವು ತುಣುಕುಗಳನ್ನು ಹಂಚಿಕೊಂಡು ಸಹಕರಿಸಿದ ಎಂ.ಫಿಲ್., ಪಿ.ಎಚ್.ಡಿ. ಒಡನಾಡಿಗಳಿಗೆ,

ಈ ನನ್ನ ಅಧ್ಯಯನಕ್ಕೆ ಪ್ರೀತಿಯಿಂದ ಪ್ರತ್ಯಕ್ಷ, ಪರೋಕ್ಷವಾಗಿ ಸಹಾಯ, ಸಹಕಾರ ನೀಡಿದ ಗಂಗಾಧರ ದೈವಜ್ಞಾ, ಗೀತಾಂಜಲಿ, ಪ್ರಿ. ಮಂಜುಳಾ, ಶಿವಕುಮಾರ್ , ಹನುಮಂತಪ್ಪ ಮೊಗಡರ್ , ಅಜೀತ್ ಇತರ ಗೆಳೆಯರಿಗೆ,

ಸದಾ ನನ್ನ ಮತ್ತು ಓದಿನ ಬಗ್ಗೆ ಕಾಳಜಿ, ಕಳಕಳಿಯನ್ನು ಹೊತ್ತಿರುವ ನನ್ನ ಅವ್ವ- ಅಪ್ಪನಿಗೆ ಸದಾ ನನ್ನಲ್ಲಿ ಸ್ಫೂರ್ತಿ ತುಂಬಿ ಪ್ರೋತ್ಸಾಹಿಸುತ್ತಾ; ನನ್ನ ಅಧ್ಯಯನ ಕಂಡು ಆನಂದಿಸುವ ನನ್ನ ಪ್ರೀತಿಯ ಅಣ್ಣ-ಅತ್ತಿಗೆ, ಅಕ್ಕ-ಭಾವ, ತಮ್ಮಂದಿರಿಗೆ ಮತ್ತು ಬಂಧುಗಳಿಗೆ,

ತೀರಾ ಕಡಿಮೆ ಸಮಯದಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಹರ್ಷ ವರ್ಷ ಕಂಪ್ಯೂಟರ್ ನ ಯೋಗಾನಂದ ಹಾಗೂ ಪ್ರೀತಿ ಸಂಯಮದಿಂದ ಅಚ್ಚು ಮಾಡಿದ ಮೀನಾಕ್ಷಿ ಅವರಿಗೆ.

ಬಿ.ಸಿ. ಕುಶಾಲ
ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಿವಿಡಿ

ಪೀಠಿಕೆ

ಪೀಠಿಕೆ

20ನೇ ಶತಮಾನ ಕೊನೆಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಪರಿಸರ ಕುರಿತಾದ ವಾಗ್ವಾದಗಳು ಪತ್ರಿಕೆಗಳಲ್ಲಿ ಸಾಹಿತ್ಯ ಕೃತಿಗಳಲ್ಲಿ ಪ್ರಮುಖಸ್ಥಾನ ಪಡೆಯುತ್ತಿವೆ. ಪರಿಸರ ಕುರಿತಾದ ಚಳುವಳಿಗಳಂತೂ ಅತ್ಯಂತ ಗಮನ ಸೆಳೆದಿವೆ. ಸರ್ಕಾರಗಳು ಇದರ ಬಗ್ಗೆ ತಲೆ ಕೆಡಿಸಿಕೊಂಡಿವೆ. ಲೇಖಕರು ಕಲಾವಿದರು ಬುದ್ಧಿಜೀವಿಗಳು ಇದಕ್ಕೆ ಸ್ಪಂದಿಸುತ್ತಿದ್ದಾರೆ. ಬೇರೆ ಬೇರೆ ನೆಲೆಗಳಲ್ಲಿ ಜನಸಮುದಾಯಗಳು ಪ್ರತಿಕ್ರಿಯಿಸುತ್ತಿವೆ. ಶಿಕ್ಷಣದ ಪಠ್ಯಕ್ರಮದಲ್ಲಿ ಕೂಡ ಈ ವಿಷಯವನ್ನು ಅಳವಡಿಸಲಾಗಿದೆ.

ಈ ದೇಶದಲ್ಲಿ ಅನೇಕ ಬಗೆಯ ಸಮಸ್ಯೆಗಳಿವೆ. ಇವುಗಳಲ್ಲಿ ಕೆಲವು ತುರ್ತು ಗಮನ ಸೆಳೆಯುವಂತಹವು. ಉದಾಃ ಕೋಮುವಾದ, ಬಡತನ, ನಿರುದ್ಯೋಗ, ರಾಜಕೀಯದೊಳಗಿನ ಭ್ರಷ್ಟಚಾರ ಇತ್ಯಾದಿ. ಪಂಜಾಬ್, ಕಾಶ್ಮೀರ, ಆಂಧ್ರ, ಅಸ್ಸಾಂ ಮುಂತಾದ ಕಡೆ ತಲೆ ಎತ್ತುತ್ತಿರುವಂತಹ ಜನ ಹೋರಾಟಗಳಿವೆ. ಇಂತಹ ನಾನ ಸಮಸ್ಯೆಗಳ ನಡುವೆ 'ಪರಿಸರ' ಸಮಸ್ಯೆ ಕೂಡ ಒಂದು ಪ್ರಮುಖ ಸಮಸ್ಯೆ ಎಂಬಂತೆ ಮೂಡುತ್ತಿದೆ. ಒಂದು ಬಗೆಯಲ್ಲಿ ಇದು ಸ್ಥಳೀಯ ಸಮಸ್ಯೆ ಹೌದು, ಅಂತರಾಷ್ಟ್ರೀಯ ಸಮಸ್ಯೆಯು ಹೌದು. ರೈತರಿಂದ ಹಿಡಿದು. ಪರಿಸರವಾದಿಗಳ ತನಕ, ನಕ್ಸಲಿಯರಿಂದ ಹಿಡಿದು ಮಧ್ಯಮವರ್ಗಗಳ ತನಕ ಈ ಸಮಾಜದ ಅನೇಕ ವರ್ಗಗಳ ಜನ ಪರಿಸರದ ಬಗ್ಗೆ ತಮ್ಮ ಕಾಳಜಿಯನ್ನು ತೋರಿಸುತ್ತಿದ್ದಾರೆ. ಎಂತಲೇ ಸಹಜವಾಗಿ ಸಾಹಿತ್ಯ ಇದರಿಂದ ದೂರವಾಗಿರಲಿಕ್ಕೆ ಸಾಧ್ಯವಿಲ್ಲ. ನಿಧಾನವಾಗಿ ಆಧುನಿಕ ಕನ್ನಡ ಸಾಹಿತ್ಯದ ಒಳಗೆ. ಈ ಪರಿಸರ ಸಂವೇದನೆ ಅನೇಕ ರೂಪಗಳಲ್ಲಿ ಅನೇಕ ಪ್ರಕಾರಗಳಲ್ಲಿ ಒಳಪ್ರವೇಶ ಮಾಡುತ್ತಿದೆ. ಇದಕ್ಕೆ ಕಾರಣ ಲೇಖಕರಿಗೆ ಬಹಳ ಪ್ರಿಯವಾದ ನಿಸರ್ಗ ಪರಿಸರ ನಾಶಗೊಳ್ಳುತ್ತಿರುವುದು - ಎಂದರೆ ಅದು ತೋರಿಕೆಯ ಕಾರಣ. ಅರ್ಥಾತು ಯಾಕೆಂದರೆ ನಿಸರ್ಗ ಪರಿಸರ ಒಂದೆ ಅಲ್ಲ; ಅದರೊಳಗೆ ಬದುಕುತ್ತಿರುವ ಸಮುದಾಯಗಳು ತಲ್ಲಣಗೊಂಡಿವೆ ಎಂಬುದು ಇದಕ್ಕೆ ನಿಜವಾದ ಕಾರಣವಾಗಿದೆ. ನಿಸರ್ಗದೊಳಗೆ ವಿರೂಪವಾಗುತ್ತಿದೆ ಎಂದು ಬಿಟ್ಟರೆ ಅದು ಒಂದು ರೋಮ್ಯಾಂಟಿಕ್ ಕಾರಣ ನಿಸರ್ಗ ಪರಿಸರ ಮತ್ತು ಜನ ಸಮುದಾಯಗಳು ಒಟ್ಟಿಗೆ ಆತಂಕಕ್ಕೊಳಗಾಗಿವೆ ಎಂಬುದು ನಿಜವಾದ ಕಾರಣ. ಗುಳುಮಾವಿನ ಒಂದು ಮರ ತನ್ನ ಚಕ್ಕೆಯನ್ನು ಕಳೆದುಕೊಳ್ಳುವುದು, ಒಂದು ಮರದ ಅಸ್ತಿತ್ವದ ಪ್ರಶ್ನೆಮಾತ್ರವಾಗಿಲ್ಲ. ಒಂದು ಹಳ್ಳಿಯ ಒಂದು ಅಸಹಾಯಕ ಕುಟುಂಬ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿರುವುದು ಇದರ ಜತೆಗೆ ಸೇರುತ್ತದೆ. ಹೀಗಾಗಿಯೇ ಪರಿಸರ ಸಮಸ್ಯೆ ಏಕ ಕಾಲಕ್ಕೆ ಸ್ಥಳೀಯವೂ; ಜಾಗತಿಕವೂ ಆಗುವುದು. ಯಾಕೆಂದರೆ ಪ್ರಪಂಚೀಕರಣ ಪ್ರಕ್ರಿಯೆಯಲ್ಲಿ ಸ್ಥಳೀಯವಾದುದರ ಮೇಲೆ ಜಾಗತಿಕ ಆರ್ಥಿಕ-ರಾಜಕೀಯ ಚಲನೆಗಳ ವಿಚಿತ್ರರೀತಿಯಲ್ಲಿ ಪರಿಣಾಮ ಬೀರುತ್ತಿರುವ ಸಂದರ್ಭವಿದು ಹೀಗಾಗಿ ಸಂವೇದನೆಯು ಅನಿವಾರ್ಯವಾಗಿ ಅಂತಾರಾಷ್ಟ್ರೀಯ ಚೌಕಟ್ಟಿನ ಒಳಗೆ ನಿಲ್ಲುವ ಸಂಗತಿಯಾಗಿದೆ. ಅದರಲ್ಲೂ ಭಾರತದಂಥ ದೇಶದಲ್ಲಿ ಬರೆಯುತ್ತಿರುವಂತಹ ಲೇಖಕರಿಗೆ ಪರಿಸರ ಪ್ರಶ್ನೆ ಒಂದು ಜೀವನ್ಮರಣದ ಪ್ರಶ್ನೆಯಾಗುತ್ತಲಿದೆ. ಯಾಕೆಂದರೆ ಕಚ್ಚಾ ಸಾಮಗ್ರಿ ಹಾಗೂ ಹೊಸ ಹೊಸ ಮಾರುಕಟ್ಟೆ ಹುಡುಕಿಕೊಂಡು ಇಂತಹ ದೇಶಗಳಿಗೆ ಬಂಡವಾಳ ಶಾಹಿ ರಾಷ್ಟ್ರಗಳು ಪ್ರವೇಶಿಸುತ್ತಿವೆ. ಆಳುವ ದೇಶಿಯ ಪ್ರಭುತ್ವಗಳು ಇದಕ್ಕೆ ಮಣಿಯುತ್ತಿವೆ. ಭವಿಷ್ಯದಲ್ಲಿ ಇದರ ಪರಿಣಾಮ ಏನಾಗುತ್ತದೆ ಎಂಬ ಪರಿವೆ ಇಲ್ಲದೆ, ಬಹುಪ್ಯ ಜನಗಳ ಬದುಕು ಏನಾಗುತ್ತದೆ ಎಂಬ ಆಲೋಚನೆ ಮಾಡದೆ ಈ ಆರ್ಥಿಕ ರಾಜಕಾರಣಕ್ಕೆ ಕೆಂಪು ಹಾಸು ಹಾಸುತ್ತಿವೆ. ಹೀಗೆ ಪರಿಸರ ಈಗ ಇಕಾಲಾಜಿ ಅಸಮತೋಲನದ ಪ್ರಶ್ನೆಯಾಗಿ ಉಳಿದಿಲ್ಲ. ಅದೊಂದು ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಸಮಸ್ಯೆ ಕೂಡ ಆಗಿ ಮಾರ್ಪಟ್ಟಿದೆ. ಆದ್ದರಿಂದ ಅನಿವಾರ್ಯವಾಗಿ ಲೇಖಕರು ತಮ್ಮ ಕೃತಿಗಳ ಒಳಗೆ ಈ ಸಂವೇದನೆಗೆ ಅವಕಾಶ ಮಾಡಿಕೊಡುತ್ತಿದ್ದಾರೆ ಮತ್ತು ತಮ್ಮ ಕೃತಿಗಳಲ್ಲಿ ಈ ಸಂವೇದನೆಗೆ ಬೇರೆ ಬೇರೆ ಆಯಾಮವನ್ನು ಆಕಾರವನ್ನು ಕೊಡುತ್ತಿದ್ದಾರೆ. ಕನ್ನಡದ ಸಾಹಿತ್ಯವು ಒಳಗೊಳ್ಳುತ್ತಿರುವ ಈ ಹೊಸ ವಸ್ತು, ಹೊಸ ಸಂವೇದನೆ, ಹೊಸ ಆಕಾರಗಳನ್ನು ಕುರಿತು ಆಲೋಚಿಸುವುದು ತುಂಬ ಉಪಯುಕ್ತವಾಗಿದೆ.

ಪರಿಸರ ಸಂವೇದನೆಯನ್ನು ಕನ್ನಡ ಸಾಹಿತ್ಯವು ಯಾವ ಬಗೆಯಲ್ಲಿ ಹೊಸ ಜೀವನಮೌಲ್ಯಗಳ ಹುಡುಕಾಟಕ್ಕೆ ಒಂದು ನೆಪವನ್ನಾಗಿ ಮಾಡಿಕೊಳ್ಳುತ್ತ ಇದೆ ಎಂಬುದನ್ನು ಗುರುತಿಸುವುದು ಕೂಡ ಇಂತಹ ಅಧ್ಯಯನದ ಮುಖ್ಯ ಆಶಯವಾಗಿದೆ. ಹೀಗೆ, ಪರಿಸರ ಸಂವೇದನೆಯು ಕನ್ನಡದ ಸಾಹಿತ್ಯ ಕೃತಿಗಳ ಮೂಲಕ ಅನಂತ ಹಲವು ರೂಪದಲ್ಲಿ , ಹಲವು ಆಕಾರಗಳಲ್ಲಿ ಮೈ ಪಡೆಯುತ್ತ ವಿಶಿಷ್ಟ ಜೀವನದರ್ಶನವನ್ನು ಹೊಮ್ಮಿಸುತ್ತ ಇರುವುದನ್ನು ಕಂಡುಕೊಳ್ಳಲು ವಿನಮ್ರವಾಗಿ ಪ್ರಯತ್ನಿಸಲಾಗಿದೆ.

ಅಧ್ಯಾಯ 1

ಪರಿಸರ ಮತ್ತು ಚಾರಿತ್ರಿಕತೆ

1.'ಪರಿಸರ' 'Environment' ಪರಿಕಲ್ಪನೆಯು ಬೆಳೆದು ಬಂದ ಚರ್ಚೆಃ

ಯಾವುದು 'ಪರಿಸರ' ಎಂಬ ಪ್ರಶ್ನೆಯೊಡನೆ ಪರಿಸರದ ಚರ್ಚೆಯನ್ನು ಪ್ರಾರಂಭಿಸಬಹುದು. ಇಂಗ್ಲೀಷ್ ನ Environment ಸಂವಾದಿಯಾಗಿ 'ಪರಿಸರ' ಎಂಬ ಪದ ಬಳಕೆಯಾಗಿರುತ್ತದೆ. 'ಪರಿಸರ' ಪದ ಕನ್ನಡಕ್ಕೆ ಹೊಸತಲ್ಲ. ಮೊದಲ ಪರಿಸರದ ಅರ್ಥ ಮತ್ತು ಪರಿಕಲ್ಪನೆ ಕೂಡ ಪರಿಮಿತವಾದ ಕಲ್ಪನೆಯಾಗಿತ್ತು. ಪರಿಸರ ಅಂದರೆ ಹಸಿರಾಗಿರುವ ಗಿಡ ಮರಗಳುಳ್ಳ ಅರಣ್ಯ ಕಾಡುಗಳೆಂಬ ಅರ್ಥ ರೂಢಿಯಿತ್ತು. ಆದರೆ ಪರಿಸರ ಪದದ ಪರಿಮಿತ ಅರ್ಥ ಬದಲಾಗಿ ಈಗ ಅದರ ಅರ್ಥ ವಿಸ್ತಾರವಾಗಿದೆ. ಈ ಪದದ ಪರಿಕಲ್ಪನೆಯೇ ಅಮೇಯವಾದ್ದದ್ದಾಗಿವೆ. ಹೀಗೆ ಈ ಪರಿಸರವೆಂಬ ಪರಿಕಲ್ಪನೆಯು ಪರಿಮಿತತೆಯಿಂದ ವಿಸ್ತೃತವಾಗಿ ಬೆಳೆದು ಬಂದ ಬಗೆಯನ್ನು ಗಮನಿಸಬಹುದು.

ಒಂದು ಕಾಲಕ್ಕೆ 'ಕಾಡು' ಎಂಬ ಅರ್ಥವನ್ನಷ್ಟೆ ನೀಡುತ್ತಿದ್ದ ಪರಿಸರದ ಪರಿಕಲ್ಪನೆ; ಮಾನವನ ನಾಗಕರಿತೆ ವಿಕಾಸವಾದಂತೆ ವಿಕಾಸವಾಯಿತು. ಏನೆಲ್ಲವನ್ನು ತನ್ನೊಳಗೆ ಸೇರಿಸಿಕೊಳ್ಳುತ್ತ ಹೋಗಿ, ಈಗ ಈ ಪರಿಸರದ ಪರಿಕಲ್ಪನೆ ಅನನ್ಯವಾಗಿದೆ. ಮನುಷ್ಯ ಕೇಂದ್ರಿತ ಎಂಬಂತಾಗಿದ್ದ ಈ ಪರಿಸರ ಜಗತ್ತು; ಸರಪಳಿಯಂತೆ ಒಂದರಿಂದ ಒಂದು ಅವಲಂಬಿಸಿ ಬದುಕುತ್ತಿದ್ದ ಜೀವಿಗಳ ವಿಶಿಷ್ಟ ಬದುಕನ್ನು ಅರಿಯದಾಗಿತ್ತು. ಅವಲಂಬಿತ ಪ್ರಾಣಿ ಬದುಕು ಎಂದರೆ -ಹುಲಿ ಸಿಂಹ ಬದುಕಲು ಜಿಂಕೆ, ಮೊಲ ಮುಂತಾದ ಪ್ರಾಣಿಗಳನ್ನು ಅವಲಂಬಿಸಿರುವುದು. ಈ ಮೊಲ ಜಿಂಕೆಗಳು ಸಸ್ಯಗಳನ್ನು ಅವಲಂಬಿಸಿರುತ್ತವೆ. ಆದರೆ ಈ ಮೊಲ ಜಿಂಕೆಗಳನ್ನು ಮನುಷ್ಯನೆ ತಿಂದದ್ದರಿಂದ ಆಹಾರಕ್ಕಾಗಿ ಹುಲಿ ಸಿಂಹಗಳು ಊರು ನುಗ್ಗಿ ಮನುಷ್ಯ ಮತ್ತು ಅನ ಅವಲಂಬಿ ಪ್ರಾಣಿ ದನ ಕರುಗಳನ್ನು ತಿನ್ನಲು ಬಂದವು. ಸೊಪ್ಪುಸದೆ ತಿಂದು ಬದುಕುತ್ತಿದ್ದ ಸಸ್ಯಾಹಾರಿ ಪ್ರಾಣಿಗಳ ಆಹಾರವಾದ ಗಿಡ ಮರಗಳನ್ನು ಮನುಷ್ಯ ಕುಡಿದು ಹಾಳು ಮಾಡಿದ್ದರಿಂದ ಮನುಷ್ಯನ ಹೊಲಗದ್ದೆಗಳನ್ನು ತಿನ್ನ ಬಂದವು ಮತ್ತು ಹಾವು; ಇಲಿಕಪ್ಪೆಯನ್ನು, ಇಲಿಕಪ್ಪೆ; ಕ್ರಿಮಿ ಕೀಟಗಳನ್ನು, ಕ್ರಿಮಿ ಕೀಟಗಳು; ಇರುವೆ, ಗೆದ್ದಲು ಹುಳುಗಳನ್ನು, ಈ ಹುಳುಗಳು ಮಣ್ಣನ್ನು ತಿಂದು ಬದುಕುತ್ತಿದ್ದ ಸರಪಳಿಯಂತಹ ಅವಲಂಬಿತ ಜೈವಿಕ ಪರಿಸರವನ್ನು ಮನುಷ್ಯ ಅರಿತೋ ಅರಿಯದೆಯೋ ನಾಶಮಾಡಿದಾಗ ಕಾಡಿನಲ್ಲಿದ್ದ ಹಾವ ಹಲ್ಲಿಗಳು ನಾಡಿಗೆ ಒಂದು ಮನುಷ್ಯನ ಮನೆ ಸೇರಿದವು. ಆಗ ಇದು ಯಾಕೆ ಹೀಗೆಂದು ಚಿಂತಿಸಿದಾಗ ಮಾನವನ ಆಧುನಿಕತೆ ಬೆಳೆದು ಈ ಇರುವೆ, ಜೇಡ, ಹಲ್ಲಿಗಳಂತಹ 'ತಿರಸ್ಕೃತ' ಜೀವಿಗಳನ್ನು ಪರಿಸರ ಪರಿಕಲ್ಪನೆ ತನ್ನೊಳಗೆ ಸೇರಿಸಿಕೊಳ್ಳುತ್ತ ಹೋಯಿತು. ಹಾಗಾಗಿ ಮಾನವನ ಎಲ್ಲ ಚಟುವಟಿಕೆಗಳಿಂದಾದ ಜೀವ ನಿರ್ಜೀವ ಕ್ರಿಯೆಗಳಿಂದಾದ ವಾತಾವರಣ ಸ್ಥಿತಿಗತಿಗಳನ್ನು ಪರಿಸರ ಆವರಿಸಿಬಿಟ್ಟಿತು. ಹಾಗಾಗಿ ಮಾನವನಿಗೆ ತನ್ನ ಸುತತ ಮುತ್ತಲ ಜೀವ ಜಗತ್ತಿನೊಡನೆ ಸಂವಾದಗೊಳ್ಳುವುದು ಅನಿವಾರ್ಯವೆನಿಸಿತು. ಇದರಿಂದ ಮಾನವ ಕೇಂದ್ರಿತ ಪರಿಸರ ಹುಲಿ, ಸಿಂಹ, ಆನೆಗಳಿಂದ, ಗಾಳಿ, ನೀರು, ಗಿಡಮರಗಳಿಂದ ಹಿಡಿದು ಹಲ್ಲಿ, ಜೇಡ, ಇರುವೆ, ಹುಳು ಹುಪ್ಪೆಗಳಂತ ತಿರಸ್ಕೃತ ಜೀವಿಗಳ ವರೆಗಲ್ಲದೆ; ಆಗಚರವಾದ 'ಶಬ್ದ' ದವರೆಗೆ ಆವರಿಸಿದೆ. ಹೀಗೆ ಏನೆಲ್ಲ ಸೇರಿದಂತೆ ಪರಿಸರ ಸೇರಿಸಿಕೊಳ್ಳುತ್ತಾ ಸಾಗುತ್ತಿದೆ. ಹಾಗಾಗಿ ಮೊದಲಿನ ಈ ಪರಿಸರದ ಪರಿಮಿತ ಪರಿಕಲ್ಪನೆ ಇಂದು ವಿಸ್ತೃತ ಪರಿಕಲ್ಪನೆಯಾಗಿ ಬೆಳೆದಿದೆ. ಈ ಪರಿಕಲ್ಪನೆಯೊಳಗೆ ಸ್ವಾಭಾವಿಕ ಸೃಷ್ಟಿ ಸಂಪನ್ಮೂಲಗಳು ಸೇರಿದಂತೆ; ಮಾನವ ನಿರ್ಮಿತ ಮಾಲಿನ್ಯ ಸೃಷ್ಟಿ ಸಂಸ್ಕೃತಿಗಳು ಸೇರಲ್ಪಟ್ಟಿವೆ.

ಈ ಮೇಲಿನ ಚರ್ಚೆಯಿಂದ 'ಪರಿಸರ' 'ENVIRONMENT'ಎಂದರೆ -ಜೀವ-ನಿರ್ಜೀವ, ಭೌತ-ಅಭೌತ, ನಿರ್ಮಿತ -ಸ್ವಾಭಾವಿಕವಾದ ಎಲ್ಲ ವಸ್ತು ಸಂದರ್ಭ ಸ್ಥಿತಿಗತಿಗಳನ್ನೊಳಗೊಂಡದ್ದು 'ಪರಿಸರ' ಎನ್ನ ಬಹುದಾಗಿದೆ. ಆದರೆ ಪರಿಸರ ಯಾವುದು ಎಂಬ ನಿರ್ದಿಷ್ಟ ಪ್ರಶ್ನೆಗೆ ನಿರ್ದಿಷ್ಟ ಉತ್ತರವಿಲ್ಲ. ಯಾಕೆಂದರೆ ಪರಿಸರವನ್ನು ನಿರ್ದಿಷ್ಟ ಅರ್ಥದಲ್ಲಿ ವಿವರಿಸುವಂತಹದ್ದಲ್ಲ ಎಂಬುದನ್ನು ಮೇಲಿನ ಚರ್ಚೆಯೊಳಗೊಂಡಿದೆ.

ಮುಂದುವರಿಸುವುದಾದರೆ; ಇಂದು ವೈಜ್ಞಾನಿಕ ದೃಷ್ಟಿಕೋನಗಳಿಂದ, 'ಪರಿಸರ' ಗುರುತಿಸುವುದನ್ನು ಕಾಣುತ್ತೇವೆ. ಅದರಂತೆ 'ಪರಿಸರ' ಎಂಬುದು ಖಗೋಳವೊ, ವಿಜ್ಞಾನವೊ, ಸಮಾಜವೊ, ಸಾಹಿತ್ಯವೊ ಇಲ್ಲಿ ಇತರ ಇನ್ನಾವುದು? ಎಂಬ ಪ್ರಶ್ನೆ ಹಾಕಿಕೊಂಡು ಚರ್ಚಿಸ ಹೊರಟರೆ ಉತ್ತರ ಸಿಗುವುದು ಕಷ್ಟಕರ. ಯಾಕೆಂದರೆ ಪರಿಸರ ಸಂವೇದನೆಯ ಯಾವುದೇ ಒಂದು ನಿರ್ದಿಷ್ಟ ಸ್ವರೂಪವಿಲ್ಲದ್ದು ಅಂದರೆ ಇದನ್ನು ಯಾವುದೊ ಒಂದು ವಿಭಾಗಕ್ಕೆ ಸೇರಿಸಿ ಸೀಮಿತಗೊಳಿಸಿ ಗೆರೆ ಹಾಕಿಡುವಂತಿಲ್ಲ. ಹಾಗಾಗಿ 'ಯಾವುದೆ ಒಂದಲ್ಲದ ಹಲವು ಹೌದಾದ' ವ್ಯಾಪಕತೆಯನ್ನು ಈ ಪರಿಪರ ಪರಿಕಲ್ಪನೆ ಪಡೆದುಕೊಂಡಿದೆ. ಪರಿಸರದ ವೈವಿದ್ಯಗಳ ಅಧ್ಯಯನ ಜೀವಶಾಸ್ತ್ರವೆನಿಸುತ್ತದೆ. ಜೀವಶಾಸ್ತ್ರವೆಂದೊಡನೆ ವಿಜ್ಞಾನದ ಪರಿಕಲ್ಪನೆ ಬಂದು ಬಿಡುತ್ತದೆ. ಹಾಗಾಗಿ ಪರಿಸರದೊಳಗಿರುವ ಜೀವಿಗಳ ಬಗ್ಗೆ ಮತ್ತು ಅವುಗಳ ವ್ಯಕ್ತಿತ್ವದ ಬಗೆಗೆ ಯಾರಾದರೂ ಬರೆದರೆ ಅದು ವಿಜ್ಞಾನ ಎನಿಸಿದರೂ, ಇನ್ನೊಂದು ಕಡೆ ವಿಜ್ಞಾನ ಎನಿಸದೆ ಮತ್ತೇ ನೇನೋ ಆಗಿರುತ್ತದೆ. ಇದಕ್ಕೆ ಪೂರ್ಣ ಚಂದ್ರತೇಜಸ್ವಿಯವರ ಕೃತಿಗಳೇ ಸಾಕ್ಷಿ. ಹೀಗೆ ಪರಿಸರದ ಸಂಕೀರ್ಣ ಪರಿಕಲ್ಪನೆಯು Environment ನ ಸಂವಾದಿ ಪರಿಕಲ್ಪನೆಯಾಗಿ ಬೆಳೆದು ಬಂದಿದೆ.

ಈ ಪರಿಸರ ಪರಿಕಲ್ಪನೆಯನ್ನು ತಾತ್ವಿಕವಾಗಿ ಎರಡು ರೀತಿಯಲ್ಲಿ ವಿಭಾಗ ಮಾಡಿ ಗುರುತಿಸಬಹುದಾಗಿದೆ.

ಅ) ನಿಸರ್ಗ ಅಥವಾ ಪ್ರಕೃತಿ ಪರಿಸರ

ಆ) ಮಾನವ ನಿರ್ಮಿತ ಸಮಾಜ ಪರಿಸರ

ಅ) ನಿಸರ್ಗ ಅಥವಾ ಪ್ರಕೃತಿ ಪರಿಸರಃ

ಈ ಪರಿಸರದಲ್ಲಿ ಸ್ವಾಭಾವಿಕವಾಗಿ ಸೃಷ್ಟಿಗೊಂಡ ಭೂಮಿ ಮತ್ತು ಅದರ ಮೇಲಿನ ಜೀವ ನಿರ್ಜೀವ ಪರಿಸರವನ್ನು ನಾವು 'ಪ್ರಕೃತಿ ಪರಿಸರ' ಎಂದು ಕರೆಯಬಹುದು, ಭೂಮಿಯ ಒಳಗಡೆ ಇರುವ ಆಗೋಚರ ಖನಿಜ ಸಂಪತ್ತುಗಳನ್ನು ನಾವು ಪ್ರಕೃತಿ ಎಂಬ ಅರ್ಥದಲ್ಲಿ ಕರೆಯವುದಿಲ್ಲ. ಯಾಕೆಂದರೆ ಭೂಗರ್ಭದೊಳಗೆ ಇರುವ ನಿರ್ಜೀವ ಖನಿಜ ಸಂಪತ್ತನ್ನು ಆಗೆದು ತೆಗೆದು ಮುಗಿಸಬಹುದು. ಮುಗಿದ ಮೇಲೆ ಮತ್ತೆ ಅಲ್ಲೆ ಸೃಷ್ಟಿಯಾಗಲಾರದು. ಆದರೆ ಭೂಮಿಯ ಮೇಲಿನ ಪ್ರಕೃತಿ ಪರಿಸರ ಹಾಳಾದರೆ ಮತ್ತು ಸೃಷ್ಟಿಯಾಗುತ್ತದೆ. ಭೂಮಿ ಒಳಗಿನ ಸಂಪತ್ತು ಸೃಷ್ಟಿಸಲಾಗದ ಮುಗಿದು ಹೋಗುವ ಸಂಪತ್ತಾಗಿದೆ ಹಾಗಾಗಿ ಇಂತಹ ನಾನಾ ಸಂಪತ್ತುಗಳನ್ನು ಒಟ್ಟಿಗೆ ಸೇರಿಸಿ ಕರೆಯಲು ಅನುಕೂಲವಾಗುವಂತೆ "ನಿಸರ್ಗ" ಪದ ಬಳಸಬಹುದು. ಪ್ರಕೃತಿಯಲ್ಲಿ ಸೇರುವ ಸೇರದಿರುವ ಎಲ್ಲವೂ ನಿಸರ್ಗ ಪರಿಸರದಲ್ಲಿ ಸೇರುತ್ತವೆ. ಹಾಗಾಗಿ ನಿಸರ್ಗ ಪರಿಸರದ ಪರಿಕಲ್ಪನೆ ಅನನ್ಯವಾದದ್ದು ಸಂಕೀರ್ಣವಾದುದು ಎನಿಸಿದರೆ ಪ್ರಕೃತಿ ಪರಿಸರದ ಪರಿಕಲ್ಪನೆ ಪರಿಮಿತ ಎನಿಸುತ್ತದೆ. ಅಂದರೆ ನಾವು ಇಲ್ಲಿ ನಿಸರ್ಗ ಪರಿಸರ, ಪ್ರಕೃತಿ ಪರಿಸರ ಬೇರೆಬೇರೆ ಎಂದು ಒಡೆದು ಅಧ್ಯಯಿನಿಸುತ್ತಿಲ್ಲ ಕೆಲವು ಸಂದರ್ಭಕ್ಕೆ ಅನುಸಾರವಾಗಿ ಪ್ರಕೃತಿ ನಿಸರ್ಗ ಪದಗಳನ್ನು ಪರಿಕಲ್ಪನಾತ್ಮಕವಾಗಿ ಆಯಾ ಪರಿಸರಕ್ಕೆ ಸಂಬಂಧಿಸಿದಂತೆ ಅನ್ವಯಿಸಿ ಚರ್ಚೆ ಮಾಡಲೆತ್ನಿಸಿದೆ.

ಆ. ಮಾನವ ನಿರ್ಮಿತ ಸಮಾಜ ಪರಿಸರಃ

ಮಾನವನಿಂದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಂಸ್ಥೆಗಳು, ವೈಜ್ಞಾನಿಕ ಶೋಧನೆಗಳು, ಸಾಹಿತ್ಯ ಇತರ ನಾನಾ ವಿಷಯಗಳು ಸೃಷ್ಟಿಸಲ್ಪಟ್ಟಿವೆ. ಈ ಪರಿಸರವನ್ನು ನಾವು ಮಾನವ ನಿರ್ಮಿತ ಸಮಾಜ ಪರಿಸರ ಎಂದು ಕರೆಯಬಹುದು. ಈ ಮಾನವನಿಂದ ನಿರ್ಮಿತವಾದ ಸಾಮಾಜಿಕ ಆರ್ಥಿಕ, ರಾಜಕೀಯ ಸಂಸ್ಥೆಗಳು. ನಿಸರ್ಗ ಸಂಪತ್ತನ್ನು ಬಳಸುವುದರ ಮೂಲಕ ಪರಿಸರ ಏನಾಗುತ್ತಿದೆ ಮತ್ತು ಸಮಾಜ ಪರಿಸರದ ಬೆಳವಣಿಗೆಯ ಮೇಲೆ ಇದರ ಪರಿಣಾಮ ಏನಾಗುತ್ತಿದೆ ಎಂಬುದನ್ನು ತೇಜಸ್ವಿಯವರ 'ಜುಗಾರಿ ಕ್ರಾಸ್' ಕಾದಂಬರಿಯ ಮುನ್ನುಡಿಯಿಂದ ಸ್ಪಷ್ಟಪಡಿಸಬಹುದು.

"ಕಾಡುಗಳು ಇವತ್ತು ಬಾಗಿಲು ತೆರೆದಿಟ್ಟ ಖಜಾನೆಗಳಾಗಿವೆ. ಈ ಕಾಡುಗಳ ಒಂದೊಂದೇ ಮರ ಎರಡು ಮೂರು ಲಕ್ಷ ಬೆಲೆಬಾಳುತ್ತದೆ. ಕಲ್ಲು ಕಳ್ಳರಿಗೆ, ಮರಗಳ್ಳರಿಗೆ, ಗಂಧದ ಚಕ್ಕೆ ಕಳ್ಳಸಾಗಣಿಕೆ ಮಾಡುವ ಖದೀಮರಿಗೆ ಕಣ್ಣು ಹರಸಿದಲ್ಲೆಲ್ಲಾ ಹಣ ರಾಶಿ ಬಿದ್ದಿರುವಂತೆ ಕಾಣುತ್ತದೆ. ದುಡ್ಡು ಈ ರೀತಿ ಕೋಡಿ ಬಿದ್ದಿರುವಲ್ಲೆಲ್ಲಾ ಏನೇನು ರೂಪುಗೊಳ್ಳುತ್ತದೆಯೋ ಅದೆಲ್ಲ ಸಹ್ಯಾದ್ರಿಯ ಕಾಡಿನೊಳಗೆ ಶುರುವಾಗಿದೆ. ಕಾಡು ಕಾಳದಂಧೆಗಳ ತವರುಮನೆಯಾಗುತ್ತಿದೆ. ಕಾಡಿನಿಂದ ಉತ್ಪತ್ತಿಯಾಗುತ್ತಿರುವ ಕಾಳಧನ ನಮ್ಮ ದೇಶದ ಅತ್ಯುನ್ನತ ರಾಜಕೀಯವನ್ನು ಸಹ ನಿಯಂತ್ರಿಸುತ್ತಿದೆ. ಇಲ್ಲಿ ಕಟ್ಟುವ ಅಣೆಕಟ್ಟುಗಳಾಗಲಿ, ಮುಳುಗಡೆಯಾಗುವ ಕಾಡುಗಳಾಗಲಿ, ಕಲ್ಲು, ಅದುರುಗಳನ್ನು ತೆಗೆಯುವುದಾಗಲೀ ಜನಗಳಿಗಿಂತ ಹೆಚ್ಚಾಗಿ ರಾಜಕಾರಣಿಗಳಿಗೂ ರಾಜಕೀಯಕ್ಕೂ ಅಗತ್ಯವಾಗತೊಡಗಿದೆ. ಕಾಳ ವ್ಯವಹಾರಗಳ ವಿಷವೃತ್ತ ಈ ಮಟ್ಟ ತಲುಪಿದ ಮೇಲೆ ಕಾನೂನು ಮತ್ತು ನ್ಯಾಯಾಲಯಗಳು ಇದನ್ನು ಪ್ರತಿರೋಧಿಸಲಾರವು"."1"

ಊರುಗಳ್ಳರಿಂದ ಅಂತಾರಾಷ್ಟ್ರೀಯ ಕಳ್ಳರವರೆಗೆ ಈ ನಿಸರ್ಗ ಸಂಪತ್ತನ್ನು ಲೂಟಿ ಮಾಡುವ ಕಾಳದಂಧೆಯ ಒಂದು ವಿಷವೃತ್ತವಿದೆ. ಈ ವೃತ್ತವನ್ನು "ಕಾನೂನು ಮತ್ತು ನ್ಯಾಯಾಲಗಳೇ ಪ್ರತಿರೋಧಿಸಲಾರವು" ಎಂದು ಹೇಳುತ್ತ ತೇಜಸ್ವಿಯವರು ಒಂದು ಬಗೆಯ ಹತಾಶೆಯನ್ನು ಸೂಚಿಸುತ್ತಿದ್ದಾರೆಯೋ ಪ್ರತಿರೋಧ ಮಾಡುವ . ಬೇರೆ ದಾರಿಯನ್ನು ಹುಡುಕಿಕೊಳ್ಳಲು ಸೂಚಿಸುತ್ತಿದ್ದಾರೆಯೋ? ಒಟ್ಟಿನಲ್ಲಿ ನಾಗರಿಕ ಸಮಾಜ ಪರಿಸರವು ಸೃಷ್ಟಿಸುವ ವ್ಯವಹಾರದ ಸಂಕೀರ್ಣ ಜಾಲವನ್ನು ಅವರು ಬಿಚ್ಚಿಡುತ್ತಾರೆ.

2. ಪರಿಸರ ಮಾಲಿನ್ಯ : ಚಾರಿತ್ರಿಕ ಹಿನ್ನೆಲೆ

ಅ] ವೈಜ್ಞಾನಿಕ, ಆರ್ಥಿಕ, ರಾಜಕೀಯವಾದ ಬೆಳವಣಿಗೆಗಳು:

ಪರಿಸರ ಮಾಲಿನ್ಯಕ್ಕೆ ವೈಜ್ಞಾನಿಕ, ಆರ್ಥಿಕ, ರಾಜಕೀಯವಾದ ಬೆಳವಣಿಗೆಗಳು ಮುಖ್ಯ ಕಾರಣವಾಗಿವೆ. ಈ ಮೂರು ಅಂಶಗಳು ಮೂರು ಎಳೆಯ ಸರಪಳಿಗಳು. ಇವುಗಳಲ್ಲಿ ಒಂದು ಎಳೆ ತಪ್ಪಿದರೂ ಸರಪಳಿ ಅಪೂರ್ಣ. ಹಾಗಾಗಿ ಈ ಮೂರು ಅಂಶಗಳು ಇಂದು ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ ಮುನ್ನಡೆಯುತ್ತಿವೆ. ವಿಜ್ಞಾನ ಹೊಸ ಹೊಸ ತಂತ್ರಜ್ಞಾನವನ್ನು ಕಂಡು ಹಿಡಿಯುತ್ತದೆ. ಆರ್ಥಿಕತೆ ಆ ದಾರಿಯಲ್ಲಿ ನಡೆಯುತ್ತದೆ. ಈ ದಾರಿಗೆ ರಾಜಕೀಯ ಅನುಮತಿ ಸಹಕಾರ ದೊರಕಿ ಆರ್ಥಿಕತೆ ಮತ್ತು ವೈಜ್ಞಾನಿಕತೆ ಬೆಳೆಯುತ್ತ ಹೋಗುತ್ತದೆ. ಹಾಗಾಗಿ ಇವು ತ್ರಿವಳಿಗಳಾಗಿರುವುದನ್ನು ಕಾಣುತ್ತೇವೆ.

ವಿಜ್ಞಾನ ಮತ್ತು ಆರ್ಥಿಕತೆಯಿಂದಾಗಿ ಆಧುನಿಕರಣವಾಗಿದೆ. ಈ ಆಧುನಿಕರಣವು ಈ ಸಮಾಜಕ್ಕೆ ವರವೂ ಹೌದು. ಶಾಪವೂ ಹೌದು ಸಮಾಜಕ್ಕೆ ವರ ಹೇಗೆಂದರೆ ಅಭಿವೃದ್ಧಿ ಬೆಳವಣಿಗೆಯ ಸಾಧನೆ; ಭೂಮಿಯ ಕಾಲ್ನಡಿಗೆಯಿಂದ ಗಗನದ ವಾಯು ನಡಿಗೆವರೆಗೆ ಸಾಗುವಂತಾಗಿರುವುದು ಮತ್ತು ನದಿ ಸಾಗರಗಳನ್ನು ದಾಟಲು ಬೆಂಡು ಮತ್ತು ತೆಪ್ಪಗಳನ್ನು ಬಳಸುತ್ತಿದ್ದ ಮಾನವ ಇಂದು ಹಡಗುಗಳನ್ನು ಬಳಸುವಂತಾಗಿರುವುದು ಇಂತಹ ನಾನಾ ಸಾಧನೆಗಳು ಈ ಸಮಾಜಕ್ಕೆ ಆಧುನಿಕರಣದ ವರಗಳಾಗಿವೆ. ಈ ಸಾಧನೆಗಳೆ ವಿಜ್ಞಾನ ತಂತ್ರಜ್ಞಾನಗಳಿಂದ ಆರ್ಥಿಕತೆಯ ಸಾಧನೆಗಾಗಿ ನಡೆದ ಬೆಳವಣಿಗೆಗಳು. ಈ ಬೆಳವಣಿಗೆ ಈಗ ಸರಕು ಸಂಸ್ಕೃತಿಯೂ ಆಗಿದೆ. ಈ ಸಂಸ್ಕೃತಿಯ ಮಿತಿ ಮೀರಿದ ನಿಸರ್ಗ ಸಂಪತ್ತಿನ ಬಳಕೆಯಿಂದ ಪರಿಸರ ಅಸಮತೋಲನವಾಗಿದೆ. ಈ ನಿಸರ್ಗ ನಾಶದ ಬಿಕ್ಕಟ್ಟನ್ನು ಭೋಗ ಸಂಸ್ಕೃತಿ ಹಿಂತಿರುಗಿ ನೋಡದಾಗಿದೆ. ಹಾಗಾಗಿ ಇಂದು ಪರಿಸರದ ಸಮಸ್ಯೆ ವಿಕೋಪಕ್ಕೆ ತುತ್ತಾಗಿದೆ. ಹಾಗೆಯೇ ಸಂಪತ್ತಿನ ಅಸಮಾನ ಹಂಚಿಕೆಗೆ ಕಾರಣವಾಗಿದೆ. ಇದು ಅಭಿವೃದ್ಧಿಯ ಬೆನ್ನ ಹಿಂದೆ ಸುಪ್ತವಾಗಿರುವ ಸಾವು . ಇದೆ ಆಧುನಿಕರಣದ ಶಾಪ.

ಅಣುವಿದ್ಯುತ್ ಕೇಂದ್ರಗಳಾಗಲಿ, ನಾನಾ ಕೈಗಾರಿಕಾ ಕೇಂದ್ರಗಳಾಗಲಿ ಸ್ಥಾಪನೆಯಾದದ್ದು ಈ ವಿಜ್ಞಾನ ಮತ್ತು ತಾಂತ್ರಿಕತೆಗಳ ಮುನ್ನಡೆಯಿಂದ ಇಂಗ್ಲೆಂಡಿನ ಲೇಖಕ ಫ್ರಾನ್ಸಿಸ್ ಬೇಕನ್ "ವಿಜ್ಞಾನದಿಂದ ಮನುಷ್ಯ ಪ್ರಕೃತಿಯ ಮೇಲೆ ಪ್ರಭುತ್ವವನ್ನು ಸಾಧಿಸಿಕೊಳ್ಳಬಲ್ಲ" ಎನ್ನುತ್ತಾನೆ. ಇದು ಇವನಿಗಷ್ಟೆ ಅಲ್ಲ ಅಂದಿನ ಎಲ್ಲ ಜನರಿಗೂ ಇಷ್ಟವಾದ ವಾದವಾಗಿತ್ತು. ಹಾಗಾಗಿ ಈ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮಹತ್ವವನ್ನು ಕಂಡುಕೊಂಡ ಮಾನವ ಆರ್ಥಿಕಾಭಿವೃದ್ಧಿಯ ರಂಗಕ್ಕೆ ಕಾಲಿಟ್ಟಾಗ ಲಾಭ ಕೇಂದ್ರಿತ ಉಪಭೋಗದ ಸಂಸ್ಕೃತಿಯು ಹುಟ್ಟತೊಡಗಿತು ತಂತ್ರಜ್ಞಾನದ ಗತಿಯ ಈ ಮುಖವನ್ನು ಕಂಡು ಅಂದೇ ಅನೇಕ ಚಿಂತಕರು ಇದರ ವಿರುದ್ಧ ಸೊಲ್ಲೆತ್ತಿದ್ದರು. ಆದರೂ "ಪ್ರಕೃತಿಯನ್ನು ಮನುಷ್ಯನ ಅನುಕೂಲಕ್ಕೆ ತಕ್ಕಂತೆ ಪಳಗಿಸಲು ಆಧುನಿಕ ವೈಜ್ಞಾನಿಕ ಉತ್ಪಾದನೆ ಮಾತ್ರ ಮಾರ್ಗ" ಎಂಬ ಧೋರಣೆ ಹೆಚ್ಚು ಹೆಚ್ಚು ಪ್ರಚಲಿತವಾಯಿತು. ಇದರಿಂದ ಮಿತಿಮೀರಿದ ಆರ್ಥಿಕ ಹಪಾಪಿತನವು ಸುತ್ತಮುತ್ತಲ ನಿಸರ್ಗವನ್ನೆಲ್ಲ ಕಬಳಿಸತೊಡಗಿತು ಈ ಕಬಳಿಕೆ ಈಗಲೂ ನಡೆದಿದೆ. ಇದರಿಂದ ಇಡೀ ಪರಿಸರ ಅಸಮತೋಲನವಾಗಿ ಕಲುಷಿತವಾಗಿ ಜೀವಜಗತ್ತು ಇಂದು ವಿನಾಶದಂಚಿನಲ್ಲಿದೆ. ಈ ಸ್ಥಿತಿ ಆಳುವ ರಾಜಕಾರಣಕ್ಕೆ ತಿಳಿದಿದೆ. ಆದರೂ ಅದು ತಿಳಿಯದಂತೆ ವಿಜ್ಞಾನ, ತಾಂತ್ರಿಕತೆಯ ಆರ್ಥಿಕತೆಯ ಸಲುವಾಗಿ ವಿದೇಶಿ ಬಂಡವಾಣಶಾಹಿಗಳಿಗೆ ಅನುಮತಿ, ಸಹಾಯ ಸಹಕಾರಗಳನ್ನು ನೀಡುತ್ತಿದೆ. ಇದು ತಮ್ಮ ಸ್ವಾರ್ಥಶಕ್ತಿಗಾಗಿ ಜನ ಸಮೂಹಗಳ ಹಿತಾಸಕ್ತಿಯನ್ನು ಬಲಿಗೊಡುವ ನೀತಿಯಾಗಿದೆ. ಇದಕ್ಕೆ ಸಾಕ್ಷಿ ಕೈಗಾ, ಕೊಜೆಂಟ್ರಿಕ್ಸ್ ನಂತಹ ಅಣುವಿದ್ಯುತ್ ಸ್ಥಾವರ ಸ್ಥಾಪನೆ. ಹಾಗಾಗಿ ಇಂದು ರಾಜಕೀಯ, ನೀತಿ, ಮತ್ತು ಆರ್ಥಿಕ ಬೆಳವಣಿಗೆಗಳು ಪರಿಸರ ಅಸಮತೋಲನದ ಬಹುಮುಖ್ಯ ಕಾರಣಕರ್ತವಾಗಿವೆ.

ತಾಂತ್ರಿಕತೆ ಬೆಳವಣಿಯು ಪರಿಸರ ಅಸಮತೋಲನಕ್ಕೆ ವಿಚಿತ್ರ ರೀತಿಯಲ್ಲಿ ಕಾರಣವಾಗಿದೆ ರಾಸಾಯನಿಕ ವಸ್ತುಗಳು, ಅಣುಶಕ್ತಿ ಇತ್ಯಾದಿಗಳನ್ನು ಕಂಡು ಹಿಡಿಯುವುದರ ಮೂಲಕ, ಇವುಗಳನ್ನು ಉದ್ದಿಮೆಗಳಲ್ಲಿ ಯುದ್ಧಗಳಲ್ಲಿ ಪರಿಸರ ಕಲುಷಿತಗೊಂಡಿದೆ. ತಾಂತ್ರಿಕತೆಯುಳ್ಳ ವೈಜ್ಞಾನಿಕತೆ ಆರ್ಥಿಕತೆಗೆ ಪೂರಕವಾಗಿ ಬೆಳೆಯುತ್ತದೆ. ಇದರಿಂದ ದೊಡ್ಡ ದೊಡ್ಡ ಉದ್ದಿಮೆಗಳು ಸ್ಥಾಪನೆಯಾಗುತ್ತವೆ. ಇಂತಹ ಉದ್ದಿಮೆಗಳು ಬಹುರಾಷ್ಟ್ರೀಯ ಉದ್ದಿಮೆಗಳಾಗಿ ಅಂತಾರಾಷ್ಟ್ರೀಯ ಬಂಡವಾಳಶಾಹಿಗಳಾಗುತ್ತವೆ. ಇವುಗಳ ಪ್ರಭಾವ ನಮ್ಮ ಸರ್ಕಾರ ಪ್ರಭುಗಳ ಮೇಲೆ ಗಾಢವಾಗಿರುತ್ತದೆ. ಹೀಗೆ ದೇಶ ದೇಶಗಳ ನಡುವಿನ ಆರ್ಥಿಕ ಅಸಮಾನತೆಗಳಿಂದ ಮತ್ತು ರಾಷ್ಟ್ರ ರಾಷ್ಟ್ರಗಳ ನಡುವಿನ ಯುದ್ಧದ ಭಯದಿಂದ ಆರ್ಥಿಕ ಪೈಪೋಟಿ ಬೆಳೆಯುತ್ತದೆ. ಈ ಪೈಪೋಟಿ ಪೀಠಿಕೆ ಹಾಕುತ್ತದೆ. ವಿನಾಶವನ್ನು ಲೆಕ್ಕಿಸದೆ ಅಣು ಯುದ್ಧಕ್ಕೆ ನಿಸರ್ಗ ಪರಿಸರ, ದುರಂತದ ತುಟ್ಟತುದಿಗೆ ತಲುಪುತ್ತದೆ. ಹೀಗಾಗಿ ತಾಂತ್ರಿಕತೆಯನ್ನು ಮೊಟಕು ಮಾಡಬೇಕೋ? ಇಲ್ಲ ಆರ್ಥಿಕತೆ ಬೆಳವಣಿಗೆಯನ್ನು ಸ್ಥಗಿತಗೊಳಿಸಬೇಕೋ?; ಸರ್ಕಾರ ತನ್ನ ಆರ್ಥಿಕ ನೀತಿಗಳನ್ನು ಬದಲಿಸಿಕೊಳ್ಳಬೇಕೋ? ಎಂಬ ಪ್ರಶ್ನೆಗಳು ನಮ್ಮನ್ನು ಕಾಡುವಂತಹ ಸಂಕೀರ್ಣ ಸ್ಥಿತಿ ಉತ್ಪನ್ನವಾಗಿದೆ. ಹೀಗೆ ಪರಿಸರ ಮಾಲಿನ್ಯ ಮತ್ತು ಅಸಮತೋಲನ ಸ್ಪರ್ಧೆಯಲ್ಲಿ ವೈಜ್ಞಾನಿಕ, ಆರ್ಥಿಕ, ರಾಜಕೀಯ ಬೆಳವಣಿಗೆಗಳು ಜಯಗೊಳಿಸುವ ಹಂತದಲ್ಲಿವೆ. ಇವುಗಳ ಜಯ ಪರಿಸರದ ಜೀವ ವೈವಿಧ್ಯಗಳ ಸರ್ವನಾಶದ ಕ್ಷಣ. ಈ ಜಯಾಪಜಯದ ಫಲಾಪೇಕ್ಷಕರು ಯಾರು? ಈ ಜಯಾಪಜಯದ ಪೂರ್ವ ಯೋಜಿತ ಸಿದ್ಧತೆ ಯಾರದು? ಹೇಗೆ? ಈ ಸ್ಪರ್ಧೆಯ ಚರಿತ್ರೆಯನ್ನು ಮೂರು ಘಟ್ಟಗಳಲ್ಲಿ ವಿವರಿಸಬಹುದು.

ಅ] ವಸಾಹತು ಘಟ್ಟ:

16-17ನೆ ಶತಮಾನದ ಯೂರೋಪಿಯನ್ನರ ಆಗಮನದಿಂದ ಭಾರತದಲ್ಲಿ "ಈಸ್ಟ ಇಂಡಿಯಾ ಕಂಪನಿ" ಅಸ್ತಿತ್ವ ಪಡೆದು ವಸಾಹತು ಸ್ಥಾಪನೆಗೆ ನಾಂದಿಯಾಯಿತು. 17-18ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ವೈಜ್ಞಾನಿಕ ಸಂಶೋಧನೆ ಬೆಳೆಯುತ್ತಿತ್ತು. ಆ ಕಾಲದಲ್ಲಿ ಇಂಗ್ಲೆಂಡಿನ ಚಕ್ರವರ್ತಿಗಳು ವೈಜ್ಞಾನಿಕ ಶೋಧನೆಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಿದ್ದರು ಇದರಿಂದ ಸಂಶೋಧನೆಗಳ ಜತೆಯಲ್ಲೇ, ಉದ್ಯಮಗಳು ಬೆಳೆದವು. ಈ ಬೃಹತ್ ಪ್ರಮಾಣದ ಉತ್ಪಾದನೆಯಿಂದ, ವ್ಯಾಪಾರದ ಅವಶ್ಯಕತೆಯಾಯಿತು. ಮತ್ತು ಈ ಉತ್ಪಾದನೆಗೆ ತಮ್ಮ ದೇಶದಲ್ಲಿ ಕಚ್ಚಾವಸ್ತುಗಳು ಇಲ್ಲದಿರುವುದರ ಅರಿವಾದಾಗ ಕಚ್ಚಾ ವಸ್ತುಗಳಿಗಾಗಿ ಬೇರೆ ಬೇರೆ ದೇಶಗಳ

ಸಂಶೋಧನೆಗೆ ಯುರೋಪಿಯನರು ಹೊರಟರು. ಭಾರತಕ್ಕೆ ಬ್ರಿಟಿಷರು ಬಂದರು. ಇವರ ಜೊತೆ ವೈಜ್ಞಾನಿಕತೆ, ಆರ್ಥಿಕತೆಗಳೂ ಒಟ್ಟೊಟ್ಟಿಗೆ ಬಂದವು. ಇದರಿಂದ ಆರ್ಥಿಕತೆಗಾಗಿ ಪಶ್ಚಿಮ ಘಟ್ಟಗಳನ್ನು ಕಡಿದು ರಬ್ಬರ್, ತಂಬಾಕು, ಕಾಫಿ, ಟೀಯಂತಹ ವಾಣಿಜ್ಯ ಬೆಳೆ ಬೆಳೆಯುವ ಪ್ರವೃತ್ತಿ ಸುರುವಾಯಿತು. ಹಾಗಾಗಿ ವ್ಯಾಪಾರ ವಹಿವಾಟು ಅನಿವಾರ್ಯವಾಗಿ ಆರಂಭವಾಗಬೇಕಾಯಿತು. ಇಂತಹ ಆರ್ಥಿಕ ಬೆಳವಣಿಗೆಯಿಂದ 'ಪರಿಸರದ ಮೇಲೆ ಉದ್ಯಮಗಳ ಪ್ರಭುತ್ವ ' ಆರಂಭವಾಯಿತು.

18-19ನೆ ಶತಮಾನಗಳ ಕಾಲದಲ್ಲಿ ನಾವಿರುವ ಸಮಾಜ ಮತ್ತು ನಮ್ಮ ಅಸ್ತಿತ್ವಕ್ಕೆ ಅವಶ್ಯವಾದ ಪರಿಸರಗಳ ಮೇಲೆ ಆಗಬಹುದಾದ ಯಾವುದೇ ಪರಿಣಾಮಗಳ ಕುರಿತು ಚಿಂತೆ ಇರಲಿಲ್ಲ. ಬರೀ ತಮ್ಮ ಆರ್ಥಿಕ ಅಭ್ಯುದಯದ ಬಗೆಗಷ್ಟೇ ಚಿಂತಿಸುವ ವ್ಯಕ್ತಿಗಳು, ಕಂಪನಿಗಳು ಮತ್ತು ಏಕಸ್ವಾಮ್ಯ ಸಂಸ್ಥೆಗಳೂ ಕ್ರಿಯಾಶೀಲವಾಗಿದ್ದವು. ಆರ್ಥಿಕ ಶಕ್ತಿಗಳ ಸಾಮೂಹಿಕ ಛಲ ಮತ್ತು ಸಾಮರ್ಥ್ಯಗಳಿಂದ ರೂಪುಗೊಂಡ ಆರ್ಥಿಕ ವ್ಯವಸ್ಥೆ ಇದಾಗಿತ್ತು. ಆಗಿನ್ನೂ ತಾರುಣ್ಯದಲ್ಲಿದ್ದ ಬಂಡವಾಳಶಾಹಿ ಉತ್ಪಾದನಾ ಪದ್ಧತಿಯ ಶಕ್ತಿ ಸಾಧನೆಗಳ ಬಗ್ಗೆ ಮಾರ್ಕ್ಸ್ ಮತ್ತು ಏಂಗೆಲ್ಸ್ ಈಗ್ಗೆ ನೂರೈವತ್ತು ವರ್ಷಗಳ ಹಿಂದೆಯೇ ತಮ್ಮ ಕಮ್ಯುನಿಷ್ಟ ಮ್ಯಾನಿಫೆಸ್ಟೋದಲ್ಲಿ ಬಹಳ ಅರ್ಥಪೂರ್ಣವಾಗಿ ಬರೆದಿದ್ದಾರೆ.

> "ತನ್ನ ನೂರು ವರ್ಷಗಳ ಆಳ್ವಿಕೆಯಲ್ಲಿಯೇ ಬಂಡವಾಳಿಗರ ವರ್ಗ ಹಿಂದಿನೆಲ್ಲ ಪೀಳಿಗೆಗಳೂ ಒಟ್ಟಾಗಿ ಸೃಷ್ಟಿಸವುದಕ್ಕಿಂತ ಹೆಚ್ಚು ಅಗಾಧವೂ ಬೃಹತ್ ಪ್ರಮಾಣದ್ದೂ ಆದ ಉತ್ಪಾದನಾ ಶಕ್ತಿಗಳನ್ನು ಹುಟ್ಟುಹಾಕಿದೆ. ನಿಸರ್ಗದತ್ತ ಶಕ್ತಿಗಳನ್ನು ಮನುಷ್ಯನ ಮತ್ತು ಯಂತ್ರಗಳ ಅಧೀನಕ್ಕೆ ಒಳಪಡಿಸಿದ್ದು; ರೈಲ್ವೆಯ ಪ್ರವೇಶ; ವಿದ್ಯುತ್ ಟೆಲಿಗ್ರಾಫನ ಪ್ರಾರಂಭ; ಇಡೀ ಭೂ ಪ್ರದೇಶಗಳನ್ನೇ ಬೇಸಾಯಕ್ಕಾಗಿ ತೆರವುಗೊಳಿಸಿದ್ದು; ನದಿಗಳನ್ನು ನೀರಾವರಿಗೆ ಬಳಸಿಕೊಂಡದ್ದು ಹೀಗೆ ಸಾಮಾಜಿಕ ಶ್ರಮದ ಮಡಿಲಲ್ಲಿ ಈ ಎಲ್ಲ ಶಕ್ತಿಗಳು ಸುಪ್ತಾವಸ್ಥೆಯಲ್ಲಿ ಅಡಗಿದ್ದವು ಎಂದು ಈ ಮೊದಲಿನ ಶತಮಾನಗಳಲ್ಲಿ ಊಹಿಸುವುದೂ ಸಾಧ್ಯವಿತ್ತೆ?""2"

ಈ ಮಾತು 1847ರದ್ದು ಆಗಿನ್ನು ಬಂಡವಾಳಿಗ ವರ್ಗವು ಜಗತ್ತಿನ ಕೆಲವೇ ಭಾಗಗಳಿಗಷ್ಟೇ ವಿಸ್ತರಿಸಿತ್ತು; ವಿಜ್ಞಾನ ಮತ್ತು ತಂತ್ರಜ್ಞಾನ ಬಳಸಿ ನಿಸರ್ಗದತ್ತ ಶಕ್ತಿಗಳನ್ನು ತನ್ನ ಉದ್ದೇಶಗಳಿಗೆ ಬಳಸುವುದನ್ನು ಮನುಷ್ಯ ಆಗಷ್ಟೆ ಶುರುಮಾಡಿದ್ದ; ಇದೆಲ್ಲ ಅಂದಿನ ಜನಕ್ಕೆ ಸಾಹಸ ಪೂರ್ಣ ಯಾತ್ರೆಯಾಗಿತ್ತು. ಯಾಕೆಂದರೆ ರೈಲ್ವೆ ವಿದ್ಯುತ್, ಟೆಲಿಗ್ರಾಫ್ ನಂತಹ ನಾನಾ ತಂತ್ರಜ್ಞಾನ ಬಳಕೆಯಾಗಿ, ಬೆರಗುಂಟು ಮಾಡಿದ ಆಕರ್ಷಣೀಯವಾಗಿತ್ತು. ಔದ್ಯಮಿಕ, ಆರ್ಥಿಕತೆಯ ಆರಂಭದ ಈ ಕಾಲದಲ್ಲಿ, ಪರಿಸರವು ಸಮಸ್ಯೆ ಎನ್ನುವ ಮಟ್ಟಕ್ಕೆ ಬದಲಾಗಿರಲಿಲ್ಲ ಕಾರಣ ವಿಸ್ತಾರವಾದ ಭೂಮಿ ಮತ್ತು ನೈಸರ್ಗಿಕ ಪರಿಸರದಲ್ಲಿ ಆರ್ಥಿಕತೆಯ ಕೈಗಾರಿಕೆಗಳು ಅಲ್ಲೊಂದು ಇಲ್ಲೊಂದು ಹುಟ್ಟುತ್ತಿದ್ದವು. ಹಾಗಾಗಿ ಇವುಗಳಿಂದ ಪರಿಸರಕ್ಕೆ ಮಾಲಿನ್ಯ ಅಥವಾ ಹಾನಿ ಇದೆ ಎಂಬ ಚಿಂತನೆ 'ಪ್ರಗತಿವಿರೋಧಿ' ಯಾಗಿ ಬಿಡುತ್ತಿದ್ದ ಘಟ್ಟ ಅದಾಗಿತ್ತು.

ಆ]ವಸಾಹತೋತ್ತರ ಘಟ್ಟ:

ವಸಾಹತು ಘಟ್ಟದಲ್ಲಿ ಪ್ರಾರಂಭವಾದ ಆರ್ಥಿಕ ನೀತಿ, ಬೆಳೆದು, ವಸಾಹತೋತ್ತರ ಘಟ್ಟದಲ್ಲಿ ಭದ್ರವಾಗಿ ಬೇರೂರಿತು. ಈ ಘಟ್ಟ ಸ್ವತಂತ್ರ ಭಾರತದ ಕಾಲ ಘಟ್ಟ ಇದು 'ಮಿಶ್ರ ಆರ್ಥಿಕನೀತಿ' ಯಿಂದ ಗಾಂಧಿ ಕಾಲದ ಗುಡಿ ಕೈಗಾರಿಕೆ ನೀತಿ ಹೋಗಿ ಬೃಹತ್ ಯಂತ್ರಾರಿಕೆ ಕೈಗಾರಿಕೆ ನೀತಿ ಪ್ರಚುರಗೊಂಡ ಕಾಲವಿದು. ಈ ಘಟ್ಟದ ಮಾರ್ಕ್ಸ್‌ವಾದಿ ಬರಹಗಳಲ್ಲಿ 'ಪ್ರಕೃತಿ ಮೇಲೆ ಪ್ರಭುತ್ವ', 'ನಿಸರ್ಗಶಕ್ತಿ ಮಣಿಸುವುದು' ಮುಂತಾದ ನುಡಿಗಟ್ಟುಗಳು ಸಹಸವಾಗಿದ್ದವು ವಾಸ್ತವದಲ್ಲಿ ಪ್ರಕೃತಿಯನ್ನು ಮಣಿಸುವುದೆಂದರೆ ಕಾಡು ಗುಡ್ಡಗಳಲ್ಲಿ ತಮ್ಮ ಪಾಡಿಗೆ ತಾವು ಇರುವ ಅಮಾಯಕ ಜನರನ್ನು ಬಲಾತ್ಕಾರವಾಗಿ ನೆಲೆ ತಪ್ಪಿಸುವುದು, ತಮಗೆ ಬೇಕಾದ್ದನ್ನು ಹುಡುಕಿಕೊಂಡು ದಯೆ ದಾಕ್ಷಿಣ್ಯವಿಲ್ಲದೆ, ಎಲ್ಲೆಂದರೆ ಅಲ್ಲಿಗೆ ಹೋಗುವುದು, ಹಿಮ್ಮೆಟ್ಟಿಸುವುದು, ವಶಪಡಿಸಿಕೊಳ್ಳುವುದು ಮತ್ತು ಜಯ ಸಾಧಿಸುವುದು. ಹೀಗೆ ಎಲ್ಲೆಡೆ ವ್ಯಾಪಿಸಿಕೊಂಡ ಸಾಮ್ರಾಜ್ಯ ಶಾಹಿಗೆ ಈ ರೂಪಕಗಳಲ್ಲಿ ಅಂತರ್ಗತವಾಗಿರುವ ವೈಚಾರಿಕ ನಿಲುವು ಒಂದು ಬೌದ್ಧಿಕ ಸಮರ್ಥನೆಯಾಗಿತ್ತು.

ಪ್ರಕೃತಿಯನ್ನು ಮೆಟ್ಟಿ ತುಳಿದು ಮಣಿಸಿ ಮನಸೋ ಇಚ್ಛೆಪ್ಪೆ ಬಳಸಿಕೊಳ್ಳುವುದು, ಬೆಳೆಯುತ್ತಿದ್ದ ಬಂಡವಾಳಶಾಹಿಯ ಒಂದು ನೈತಿಕತೆಯೇ ಆಗಿತ್ತು. ಈ ನೈತಿಕತೆಯನ್ನು ಎತ್ತಿಹಿಡಿಯುತ್ತಿದ್ದ ಏಂಗೆಲ್ಸ್ ಕೂಡ ತನ್ನ ತಪ್ಪು ಅರಿತು ಹೀಗೆ ಹೇಳುತ್ತಾನೆ.

> "ಸ್ವತಃ ನಾವೇ ಪ್ರಕೃತಿಯ ಒಂದು ಭಾಗವಾಗಿರುವುದರಿಂದ ನಾವು ಅದನ್ನು ಮಣಿಸಿ ಸಾಧಿಸುವ ವಿಜಯದ ಪರಿಣಾಮಗಳು ನಮ್ಮ ಮೇಲೆ ಆಗಿಯೇ ತೀರುತ್ತವೆ. ಇದ್ದಕ್ಕಿದ್ದಂತೆ ಎರಗಿ ಕೊಳ್ಳೆ ಹೊಡೆದು ಓಡಿ ಹೋಗುವ ಆಕ್ರಮಣಕಾರರಂತೆ, ನಾವು ಈ ಪರಿಣಾಮಗಳಿಂದ ತಪ್ಪಿಸಿಕೊಂಡು ಓಡಲಾಗುವುದಿಲ್ಲ. ಇದನ್ನು ನಾವು ಮರೆತರೆ ನಮಗೆ ಈ ಪ್ರಕೃತಿಯ ಮೇಲೆ ಪ್ರಭುತ್ವದ ರೂಪಕದ ನಿಜವಾದ ಅರ್ಥ ಹೊಳೆಯುವುದು ಸಾಧ್ಯವೇ ಇಲ್ಲ"."3"

ಹೀಗೆ ಹೇಳಿದರೂ 'ಪ್ರಕೃತಿ ಪ್ರಭುತ್ವದ' ನೀತಿ ಅಂದು ಎಲ್ಲರತ್ತು ರಕ್ತಗತವಾಗಿ ಬೇರೂರಿಲ್ಲೂ ಆದ ಏಂಗಲ್ಸ್ ಕೂಡ ಅದರಿಂದ ಬಿಡಿಸಕೊಳ್ಳದವನಾಗಿದ್ದ. ಇಂತಹ ನೀತಿಗೆ ಭಾರತವು ಬಲಿಯಾಗಿ 'ಮಿಶ್ರ ಆರ್ಥಿಕ ನೀತಿ'ಯನ್ನು ಜಾರಿಗೊಳಿಸಿತು. ಆದರೆ ಭಾರತದಲ್ಲಿ ಕೈಗಾರಿಕೆಗಳು ಜಾಸ್ತಿ ಇಲ್ಲದ್ದರಿಂದ ಎಲ್ಲರೂ ಅವನ್ನು ಬಯಸುತ್ತಿದ್ದರು. "ಕೈಗಾರಿಕರಣ ಇಲ್ಲ ನಾಶ"[Industrialise or Perish] ಎಂಬ ವಾದ ಮಂತ್ರದಂತೆ ಪ್ರಭಾವಶಾಲಿಯಾಗಿತ್ತು. ಹಸಿರು ಕ್ರಾಂತಿಯು ಆರಂಭವಾಯಿತು. ಇದರಿಂದ ಭೂಮಿ;ಮೇಲೆ ಹಸಿರಾಯಿತು. ಭೂಮಿ ಒಳಗೆ ಏನಾಯಿತು ಎಂದು ಕಂಡುಕೊಳ್ಳಲು ದಶಕಗಳು ಬೇಕಾದವು. ಕೀಟನಾಶಕ ಔಷಧಿ, ರಸಗೊಬ್ಬರಗಳ ಹಾವಳಿಯಿಂದ, ಭೂಫಲವಂತಿಕೆ ಮಾತ್ರವಲ್ಲ, ಹಕ್ಕಿಗಳ ಸಂತತಿಯು ಸೂಕ್ಷ್ಮವಾಗಿ ನಶಿಸುತ್ತ ಹೋಯಿತು. ಔದ್ಯಮಿಕ, ಆರ್ಥಿಕತೆ ಬೆಳೆಯುತ್ತ ಹೋದಪ್ಪು ಪ್ರತಿಯಾಗಿ ಪರಿಸರ ಸಂರಕ್ಷಣೆಯ ಕ್ರಮಗಳ ಹುಡುಕಾಟ ಆಗಲೇ ಇಲ್ಲ. ಹಾಗಾಗಿ ಪರಿಸರದ ಸ್ಥಿತಿ ಬದಲಾಗಲೇ ಇಲ್ಲ. ಆದರೆ ಕೈಗಾರಿಕರಣದ ದಾಹ ಬೆಳೆಯುತ್ತಲೇ ಹೋಯಿತು. ಈ ಕಾಲದಲ್ಲಿ ಕೈಗಾರಿಕೆಗಳು ವಿರಳವಾಗಿ ಬೆಳೆಯುತ್ತಿದ್ದ ಕಾರಣ ಪರಿಸರ ಹಾಳಾಗುವ ಸ್ಥಿತಿ ಮತ್ತು ತಿಳುವಳಿಕೆ ಇರಲಿಲ್ಲ. ಆದರೆ ಇವುಗಳ ಬೆಳವಣಿಗೆ ಮಿತಿ ಮೀರಿದ ಬಳಿಕ ಬೃಹತ್ ಉದ್ಯಮಗಳು ನಮಗೆ ಬೇಕೆ? ಎಂಬ ವಾದ ಹುಟ್ಟಿಕೊಂಡಿದೆ. ಈ ವಾದವನ್ನು ಮುಂದಿನ ಘಟ್ಟದಲ್ಲಿ ಪರಿಶೀಲಿಸಬಹುದು.

ಇ] ನವ ವಸಾಹತುಶಾಹಿ ಘಟ್ಟ:

ಈ ಘಟ್ಟವನ್ನು 20ನೇ ಶತಮಾನದ ಕೊನೆಯಲ್ಲಿ ನಡೆದ ಜಾಗತಿಕ ಬೆಳವಣಿಗೆಗಳಲ್ಲಿಟ್ಟು ಪರಿಶೀಲಿಸಬಹುದು. 1944ರ ಆಗಸ್ಟ್ ತಿಂಗಳಲ್ಲಿ ನಡೆದ ಅಣುಬಾಂಬಿನ ಸ್ಫೋಟದೊಂದಿಗೆ ಪರಿಸರದ ಕುರಿತು ಇದುವರೆಗಿನ ಚಿಂತನಾಕ್ರಮ ಬದಲಾಗಲು ಶುರುವಾಯಿತು. ಈ ಘಟನೆಗೆ ಪೂರಕವಾಗಿ ನಡೆದ ಘಟನಾವಳಿಗಳು ಮಾತ್ರ ಜನರ ಅರಿವನ್ನೇ ತಳಮಟ್ಟ ಬದಲಾಯಿಸಿಬಿಟ್ಟವು. ರಷ್ಯಾ ಎಲ್ಲರ ಎಣಿಕೆಗೂ ಮೊದಲು ತಾನು ಅಣು ಬಾಂಬನ್ನು ತಯಾರಿಸಿತು. ಇದರ ಹಿಂದೆಯೇ ಅಣುಬಾಂಬಿಗಿಂತಲೂ ಹೆಚ್ಚಿನ ವಿನಾಶಕಾರೀ ಸಾಮರ್ಥ್ಯದ ಹೈಡ್ರೋಜನ್ ಬಾಂಬು ಬಂದಿತು. ಎರಡು ಜಾಗತಿಕ ಶಕ್ತಿಗಳ [ಅಮೇರಿಕ ಮತ್ತು ಸೋವಿಯತ್ ಬಣಗಳ] ನಡುವಿನ ತೀವ್ರಗತಿಯ ಶಸ್ತ್ರಾಸ್ತ್ರ ಪೈಪೋಟಿಯ ಹೊಸಬೆಳವಣಿಗೆಗೆ ನಾಂದಿ ಹಾಡಿತು. ಆದರೆ 80ರ ದಶಕದಲ್ಲಿ ಸೋವಿಯತ್ ರಷ್ಯಾದ ಛಿದ್ರೀಕರಣ [Disintigration] ಆಯಿತು. ಇದರಿಂದ ರಷ್ಯಾದ ಗಣರಾಜ್ಯ ಒಕ್ಕೂಟವನ್ನು ಛಿದ್ರಗೊಳಿಸಲು ಹೊಂಚು ಹಾಕುತ್ತಿದ್ದ ಅಮೇರಿಕದ ಆಸೆ ನೆರವೇರಿದಂತಾಯಿತು.

ಗೊರ್ಬಚೇವ್ ತಂದ 'ಉದಾರೀಕರಣ ನೀತಿ' ಮತ್ತು ಅಮೇರಿಕ ಮಾಡಿಟ್ಟ ಗ್ಯಾಟ್ ಡಂಕಲ್ ನಂತಹ ನವವಸಾಹತುಶಾಹಿ ನೀತಿಗಳು ಅಮೇರಿಕದಂತಹ ಬಂಡವಾಳಶಾಹಿ ರಾಷ್ಟ್ರಗಳ ಮತ್ತು ವಿಶ್ವಬ್ಯಾಂಕ್ ಗಳ ಪರವಾದ ನೀತಿಗಳಾಗಿದ್ದವು. ಇದರಿಂದ ಭಾರತದಂತಹ ದೇಶಗಳು ಬಂಡವಾಳಶಾಹಿ ರಾಷ್ಟ್ರಗಳ ಹಿಡಿತಕ್ಕೊಳ ಪಡಬೇಕಾಯಿತು. ಗ್ಯಾಟ್ ಒಪ್ಪಂದದಿಂದ ಅನ್ಯ ದೇಶದ ವಸ್ತುಗಳು ನಮ್ಮ ಮಾರುಕಟ್ಟೆಯನ್ನು ಎಗ್ಗಿಲ್ಲದೆ ಪ್ರವೇಶಿಸುವಂತಾಗಿ ಪರಿಣಾಮದಲ್ಲಿ ಏಕಮುಖಿ ಪ್ರಯೋಜನ ಶಕ್ತ ದೇಶಗಳದ್ದಾಯಿತು. ಡಂಕಲ್

ನೀತಿಯಿಂದ ಬಂಡವಾಳಶಾಹಿ ರಾಷ್ಟ್ರಗಳು ಭಾರತದಂತಹ ಸಂಪದ್ಭರಿತ ರಾಷ್ಟ್ರಗಳಿಗೆ ಮುತ್ತಿಗೆ ಹಾಕುವಂತಾಯಿತು. ಅಂದರೆ ಇದರಿಂದ ಬಂಡವಾಳ ಶಾಹಿ, ಉದ್ಯಮಿಗಳು ನಮ್ಮಲ್ಲಿಗೆ ಬಂದು ಅವರ ಉದ್ಯಮಗಳನ್ನು ತೆರೆಯಲು ಅವಕಾಶ ನೀಡಿಕೆಯ ನೀತಿ ಇದು. ಇದನ್ನು ಸ್ವೀಕರಿಸಿದ ನಮ್ಮ ಸರ್ಕಾರಗಳ ರಾಜಕೀಯ ಧೋರಣೆಯಿಂದ ನಮ್ಮ ಪರಿಸರ ಸಮಸ್ಯೆ ಜಟಿಲವಾಗುವ ಆರ್ಥಿಕ ನೀತಿಯಾಯಿತು. ಹೀಗಾಗಿ 'ಪ್ರಜಾ ರಕ್ಷಕ'ಸರ್ಕಾರ ಬಂಡವಾಳಗಾರರ ಕೈಗಾರಿಕೆಗಳ ರಕ್ಷಕನಾಗಿ ಉಳಿಯುವಂತಾಗಿದೆ. ಇದರಿಂದ ಕರ್ನಾಟಕ ಪರಿಸರ; ಕೈಗಾ, ಕೊಜೆಂಟ್ರಿಕ್ಸ್ ಯೋಜನೆಗಳಿಗೆ ಬಲಿಯಾಗುವಂತೆ; ನಾನಾ ರಾಜ್ಯಗಳ ಪರಿಸರ, ಇಂತಹ ನಾನಾ ಯೋಜನೆಗಳ ಅಸ್ತಿತ್ವದಿಂದ ಆತಂಕಿತಗೊಂಡಿದೆ. ಈ ಆರ್ಥಿಕ ನೀತಿ 'ಏನಾದರಾ ಮಾಡು ಆದರೆ ಸ್ಪರ್ಧೆಯಲ್ಲಿ ಜಯಶಾಲಿಯಾಗು' ಎಂಬ ನೀತಿಯಾಗಿದೆ. ಇಂತಹ ಆರ್ಥಿಕತೆಯ ವಾರಸುದಾರರಾದ ಬಂಡವಾಳಶಾಹಿಗಳು, ಆಳುವ ಪ್ರಭುತ್ವವನ್ನು ತಮ್ಮ ಅನುಕೂಲಕ್ಕೆ ಮಣಿಸುವಂತಹ ರೀತಿ ಎಲ್ಲರಿಗೂ ಗೊತ್ತಿದೆ. ಹೀಗಾಗಿ 'ಯಾರಾದರೂ ಏನಾದರೂ ಮಾಡಲು ಕಡಿವಾಣವಿದ್ದ ಸ್ಥಿತಿಯಿಂದ; ಯಾರೂ ಏನನ್ನೂ ಬೇಕಾದರೂ ಮಾಡುವ ಸ್ಥಿತಿ ಬಂದಿದೆ. " ಇದು ನಿಸರ್ಗಕ್ಕೊದಗಿದ ಸ್ಥಿತಿ ಮಾತ್ರವಲ್ಲ. ಒಂದು ದೇಶದ ಸಮುದಾಯಗಳ ಬಾಳನ್ನು ಬದಲಿಸಬಲ್ಲ ಸ್ಥಿತಿ. ಹೀಗೆ ನಿಸರ್ಗ ಪರಿಸರದ ಮೇಲೆ ಆಕ್ರಮಣಕಾರಿ ಚಟುವಟಿಕೆ ನಡೆಸುತ್ತಿರುವ ಪ್ರಭುತ್ವ ಸರ್ಕಾರಗಳ ಈ ಕ್ರಮವೇ ಪರಿಸರದ ಹಾಗೂ ಸಮುದಾಯಗಳ ಮೇಲಿನ ವಿನಾಶಕಾರಿ ಕ್ರಮವಾಗಿದೆ. ಇದೇ ಇಂದಿನ ನವ ವಸಾಹತುಶಾಹಿಗಳ ತಾತ್ವಿಕ ನಿಲುವಿರುವಂತಿದೆ.

3.ಪರಿಸರ ಚಳುವಳಿಗಳುಃ ಹುಟ್ಟು/ಹಿನ್ನೆಲೆ/ಅದರ ಸ್ವರೂಪ

ಪರಿಸರ ಚಳುವಳಿಗಳು ನಿಸರ್ಗದ ಮೇಲಾಗುತ್ತಿರುವ ಭೀಕರ ಪರಿಣಾಮಗಳಿಂದ ಆಘಾತಗೊಂಡು ಹೊಸ ಸನ್ನಿವೇಶವನ್ನು ಎದುರಿಸಿ ಸಿಡಿದು ಪ್ರತಿಭಟಿಸುವಂತಾದವು. ಅಣೆಕಟ್ಟು, ಕಾರ್ಖಾನೆಗಳಿಂದ ಕಾಡಿನಾಶ್ರಯದ ಜನ ನಿರಾಶ್ರಿತರಾಗಿ ಬೀದಿ ಪಾಲಾದದ್ದರಿಂದ, ಬಂಡವಾಳಶಾಹಿಗಳು ಸ್ವಾರ್ಥ ಸಾಧನೆಗಾಗಿ ಅರಣ್ಯ ನಾಶ ಮಾಡಿದ್ದರಿಂದ ಹೀಗೆ ಮಾಡುವುದು ಅನಿವಾರ್ಯವಾಗಿತ್ತು. ಹೊಸ ಶೈಲಿಯ ಮತ್ತು ಆರ್ಥಿಕತೆಯಿಂದಾದ ಪರಿಸರ ಮಾಲಿನ್ಯದ ಹಿನ್ನೆಲೆಯಲ್ಲಿ ಪರಿಸರ ಚಳುವಳಿಗಳು ಹುಟ್ಟಿಕೊಂಡವು. ರಾಜಕೀಯ ಶಕ್ತಿಯ, ಬಂಡವಾಳಶಾಹಿ ಶಕ್ತಿಯ, ಅಂತಾರಾಷ್ಟ್ರೀಯ ರಾಜಕೀಯ ವಿರುದ್ಧ ಮಧ್ಯಮವರ್ಗ ಒಂದು ಭಾಗವು ತನ್ನ ವೈಚಾರಿಕ ಆಲೋಚನೆಯಿಂದ ಪ್ರಶ್ನಿಸುವಂತಾಗಿ ಪರಿಸರ ಚಳುವಳಿಗೆ ದುಮುಕಿತು. ಇದು ಜನತೆಯ ಪರವಾಗಿದ್ದರೂ ತನ್ನ ಚಿಂತನೆ ಕ್ರಿಯೆಗಳಲ್ಲಿನ ಬೆರಾಜಕೀಯತನದಿಂದ ಯಾವ ತಾತ್ವಿಕ ತೊಡಕುಗಳನ್ನೆದುರಿಸ ಬೇಕಾಗಿದೆ ಎಂಬುದು ಬೇರೆ ಪ್ರಶ್ನೆ.

ಪರಿಸರ ಚಳುವಳಿಗಳು 17-18 ನೇ ಶತಮಾನದಲ್ಲೇ ಪ್ರಾರಂಭವಾದಂತಿವೆ. ಸುಮಾರು 350 ವರ್ಷಗಳ ಹಿಂದೆ ರಾಜಸ್ಥಾನದ ಜೋಧಪುರ ಜಿಲ್ಲೆಯ 'ಅಮೃತಾದೇವಿ' ವೃಕ್ಷ ರಕ್ಷಣೆಯ ಪಣ ತೊಟ್ಟಳು. "ಮರ ಕಡಿಯುವುದಾದರೆ ನನ್ನನ್ನು ಮೊದಲು ಕಡಿಯಿರಿ" ಎಂದು ಅಸಂಖ್ಯ ಅನುಯಾಯಿಗಳ ಜತೆ ಮರವನ್ನು ತಬ್ಬಿ ಮರ ಕಟುಕರ ಕೊಡಲಿಗೆ 363 ಮಂದಿ ಹಳ್ಳಿಗರೊಡನೆ ಬಲಿಯಾದಳು.

19ನೇ ಶತಮಾನದ ಮಧ್ಯಾವಧಿಯ ತನಕ ಆದಿವಾಸಿಗಳು ತಂತಮ್ಮ ಕಾಡುಗಳಲ್ಲಿ ನಿಶ್ಚಿಂತ ಬಾಳ್ವೆ ಮಾಡಿಕೊಂಡಿದ್ದರು. ಯಾವಾಗ ಈ ದೇಶಕ್ಕೆ ಬ್ರಿಟಿಷರ ಆಳ್ವಿಕೆ ಬಂದಿತೋ ಆಗ ಅವರ ಕ್ಷೇತ್ರ ಸರ್ಕಾರಗಳ ಆಡಳಿತೆಗೆ ಒಳಗಾದವು. ಬ್ರಿಟಿಷರ ಆಡಳಿತದ ಕಾಲದಲ್ಲಿ ಆದಿವಾಸಿಗಳಲ್ಲದ ಹೊರಗಿನ ಜನರೂ ಅರಣ್ಯಗಳಲ್ಲಿಗೆ ಬಂದು ನೆಲೆಸಿ, ಆದಿವಾಸಿಗಳದ್ದಾಗಿದ್ದ ವಿಶಾಲ ಪ್ರದೇಶಗಳನ್ನು ಪಡೆದುಕೊಂಡರು. ಈ ಪರಿಸ್ಥಿತಿ ಅವರ ಬದುಕನ್ನು ಕಂಗೆಡಿಸಿದ್ದರಿಂದ 19ನೇ ಶತಮಾನದಲ್ಲಿ ಮುಗ್ಧ ಸ್ವಭಾವದ ಈ ಜನರು ಸರಕಾರದ ವಿರುದ್ಧ ದಂಗೆಯೇಳುವಂತಾಯಿತು. 1855-56 ರಲ್ಲಿ ಬಿಹಾರದ ಸಂತಾಲರು ಹಾಗೆ ದಂಗೆಯೆದ್ದರು; ಮುಂದೆ 1879 ರಲ್ಲಿ ಖಾಂದೇಶದಲ್ಲಿ ಭಿಲ್ಲರು ದಂಗೆಯೆದ್ದರು; ಪೂರ್ವ ಗೋದಾವರಿ ಜಿಲ್ಲೆಯಲ್ಲಿ

ಕೊಡಂರೆಡ್ಡಿ ಬುಡಕಟ್ಟಿನವರು ದಂಗೆಯೆದ್ದರು. ಬುಡಕಟ್ಟು ಜನರು ನಾವು ಕಾಡಿನ ಮಕ್ಕಳು ಇದು ನಮ್ಮ ಹಕ್ಕು ಇಲ್ಲಿಂದ ಓಡಿಸಲು ನೀವ್ಯಾರು ಎಂದು ನ್ಯಾಯಕ್ಕಾಗಿ ಪ್ರತಿಭಟಿಸಿದರು. ಹೀಗೆ ಆದಿವಾಸಿ ಬುಡಕಟ್ಟು ಜನರು ಸರ್ಕಾರದ ಅನೀತಿಯುತ ಧೋರಣೆಗಳ ವಿರುದ್ಧ ದಂಗೆಯೆದ್ದು ಪರಿಸರ ಚಳುವಳಿಯ ಹುಟ್ಟಿಗೆ ಬೇರೊಂದು ನೆಲೆಯಲ್ಲಿ ಕಾರಣರಾದರು. ಅಣೆಕಟ್ಟುಗಳು ಪ್ರಾರಂಭವಾದಾಗ ಬುಡಕಟ್ಟುಗಳು ಅಷ್ಟೆ ಅಲ್ಲ. ಉಳಿದ ಜನ ಸಮುದಾಯ ಕೂಡ ಬಲಿಯಾಗಬೇಕಾಗಿ ಇದರ ವಿರುದ್ಧ ಧ್ವನಿ ಎದ್ದವು. ಬಂಡವಾಳಶಾಹಿ ಉದ್ಯಮಿಗಳು ಕಾಡು ನಾಶಮಾಡಿ ರಬ್ಬರ್ ತಂಬಾಕಿನಂತಹ ಕೃಷಿ ಬೆಳೆಯಲು ಪ್ರಾರಂಭಿಸಿದ್ದರ ವಿರುದ್ಧ ಹಾಗು ಪರಿಸರ ಮಾಲಿನ್ಯಗೊಳಿಸಿದ ಕಾರ್ಖಾನೆಗಳ ವಿರುದ್ಧ 'ಚಿಪ್ಕೋ' ಮೊದಲಾದ ನಾನಾ ಪರಿಸರ ಚಳುವಳಿಗಳು ಹುಟ್ಟಿಕೊಂಡವು. ಇವಷ್ಟೆ ಅಲ್ಲದೆ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕೂಡ ಪರಿಸರ ರಕ್ಷಣೆಗಾಗಿ 'ಗ್ರೀನ್ ಪೀಸ್' ನಂತಹ ಅನೇಕ ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳು ಹುಟ್ಟಿಕೊಂಡವು.

ಪರಿಸರ ರಕ್ಷಣೆಯ ಧ್ವನಿ ಎತ್ತುವ ಜನ ಮುಖ್ಯವಾಗಿ ಮಧ್ಯಮವರ್ಗವಾಗಿದೆ. ಈ ವರ್ಗ ನಿಸರ್ಗ ಪರಿಸರವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಅದರ ಉಳಿವಿಗಾಗಿ ಹೋರಾಟ ಮಾಡುತ್ತಿದೆ. ಇಂದು ಸುಂದರ್ ಲಾಲ್ ಬಹುಗುಣರಂತ ಚಳುವಳಿನಾಯಕರು. ಶಿವರಾಮ ಕಾರಂತ, ತೇಜಸ್ವಿಯವರಂತಹ ಲೇಖಕರು, ವಿಜ್ಞಾನಿಗಳು, ರೈತರು ಇತರ ನಾನಾ ಬಗೆಯ ಜನರು ಈ ಚಳುವಳಿಯಲ್ಲಿದ್ದಾರೆ.

ಈ ಚಳುವಳಿಗಾರರು ಕೊಜೆಂಟ್ರಿಕ್ಸ್, ಎನ್‌ರಾನ್ ನಂತಹ ಯೋಜನೆಗಳು ಜಾರಿಗೊಂಡಾಗ ಮಾತ್ರ ನೂರಾರು, ಸಾವಿರಾರು ಎಕರೆ ಕಾಡು, ನಾಶವಾಗುತ್ತದೆಂದು ಎಚ್ಚರಿಕೆಯ ಹೋರಾಟಕ್ಕಿಳಿಯುತ್ತಾರೆ. ಆದರೆ ಪ್ರತಿದಿನ ಮಣ್ಣಿನ ಸಾರ ಸತ್ವವನ್ನು ಹಾಳುಮಾಡುತ್ತಿರುವ ರಾಸಾಯನಿಕ ಗೊಬ್ಬರ ಬಳಸುವ ಕೃಷಿಯ ವಿರುದ್ಧ ಕೀಟ ನಾಶಕ ಔಷಧದಿಂದ ಹಕ್ಕಿ ಪಕ್ಷಿಗಳು ನಾಶವಾಗುತ್ತಿರುವುದರ ವಿರುದ್ಧ ಇಂತಹ ಪರಿಸರ ಚಳುವಳಿಗಳು ಇಷ್ಟೇ ಪ್ರಬಲ ಧ್ವನಿ ಎತ್ತದಿರುವುದು ಉಂಟು ಹಾಗೂ ಮಾನವ ನಿರ್ಮಿತ ಸಾಮಾಜಿಕ, ರಾಜಕೀಯ ಪರಿಸರಕ್ಕೆ ಇವರು ತೀವ್ರವಾಗಿ ಸ್ಪಂದಿಸುವುದಿಲ್ಲ. ಹಾಗಾಗಿ ಈ ಚಳುವಳಿಗಳ ನೀತಿಯು ನಿಸರ್ಗ ಪರಿಸರದ ಕಡೆಗಿರುವ ಏಕಮುಖ ಸ್ವರೂಪದ್ದಾಗಿದೆ.

ಇಂದು ಈ ಚಳುವಳಿಯ ಹೆಸರಿನಿಂದ ಕೆಲವರು ರಾಜಕೀಯಲಾಭ ಪಡೆಯುತ್ತಿರುವುದರಿಂದ ಚಳುವಳಿಯ ಸ್ವರೂಪ ದುರ್ಬಲವಾಗುತ್ತಿದೆ. [ಉದಾಃ ಮಹಾರಾಷ್ಟ್ರ ಸರ್ಕಾರ ಎನ್‌ರಾನ್ ಯೋಜನೆಯಿಂದ ಪರಿಸರ ಚಳುವಳಿಗಾರರ ಓಟಿನ ಲಾಭ ಪಡೆದು ಅಧಿಕಾರ ಗದ್ದುಗೆಗೆ ಬಂದಿತು. ಆದರೆ ಅಂತಾರಾಷ್ಟ್ರೀಯ ರಾಜಕೀಯ ಒತ್ತಡಕ್ಕೆ ಮಣಿದು ಮತ್ತು ಏನ್‌ರಾನ್ ಯೋಜನೆ ಜಾರಿಗೊಳಿಸಿತು] ಇಂತಹ ದೌರ್ಬಲ್ಯಗಳು ಗ್ಯಾಟ್, ಡಂಕಲ್, ಕೊಜೆಂಟ್ರಿಕ್ಸ್ ಎನ್‌ರಾನ್ ನಂತಹ ಇತರ ರಾಜಕೀಯ ಆರ್ಥಿಕ ಯೋಜನೆಗಳು ಯಶಸ್ವಿಯಾಗಲು ಕಾರಣವಾಗಿವೆ. ಅಂತಾರಾಷ್ಟ್ರೀಯ ಹಣಕಾಸುನಿಧಿಗಳ, ಬಂಡವಾಳಶಾಹಿಗಳ ಕಾವಲುಗಾರಾಗಿರುವ ನಮ್ಮ ಪ್ರಭುತ್ವ ಸರಕಾರಗಳು ವಿರುದ್ಧ ಧ್ವನಿ ಎತ್ತಿದವರ್‍ನು ಬಗ್ಗು ಬಡಿಯುತ್ತಿವೆ. ಈ ಪರಿಸರ ಸಂವೇದನೆಯ ಜನ, ವಿಜ್ಞಾನಿ, ಲೇಖಕ, ಚಳುವಳಿಗಾರ, ಸಂಘ-ಸಂಸ್ಥೆಗಳನ್ನೊಳಗೊಂಡ ಮಧ್ಯಮವರ್ಗದ ಅಸಹಾಯಕತೆ ಪರಿಸರ ಚಳುವಳಿಗಳ ದುಸ್ಥಿತಿಗೆ ಕನ್ನಡಿಯಾಗಿದೆ.

4. ಸಾಹಿತ್ಯಃ ಪರಿಸರ ಪ್ರಜ್ಞೆ ಮತ್ತು ಜೀವನದರ್ಶನ

ಮಾನವ ಚರಿತ್ರೆ, ಮನಃಶಾಸ್ತ್ರ, ಸಮಾಜಶಾಸ್ತ್ರಗಳಂತಹ ಅನೇಕ ಜ್ಞಾನಶಿಸ್ತುಗಳನ್ನು ನಿರ್ಮಿಸಿಕೊಂಡಿದ್ದಾನೆ. ಇವುಗಳಲ್ಲಿ ಪರಿಸರ ವಿಜ್ಞಾನವೂ ಒಂದು ಈಗ ಪರಿಸರದ ಪರಿಕಲ್ಪನೆಯಲ್ಲಿ ತನ್ನ ಜೀವನ ದೃಷ್ಟಿಯನ್ನು ಹೇಗೆ ಕಂಡುಕೊಳ್ಳಬೇಕು? ಎಂಬ ಪ್ರಶ್ನೆ ಎದುರಾಗುತ್ತದೆ. ಅನ್ಯಜ್ಞಾನಗಳು ಸೃಜನಶೀಲ ಮನಸ್ಸಿನ ಮೂಲಕ ಬರುವಾಗ ರೂಪಾಂತರವಾಗುತ್ತವೆ. ಅಂದರೆ ಮರು ಸೃಷ್ಟಿ ಪಡೆಯುತ್ತವೆ. ಈ ಮರು ಸೃಷ್ಟಿಯೇ ಜೀವನ ದೃಷ್ಟಿ. ನಾವು ಯಾವುದೇ ಒಂದು ಕೃತಿಯನ್ನು ಒಂದು ಸೃಜನ ಶೀಲ ಕೃತಿ

ಎಂದು ನಿರ್ಧರಿಸುವಾಗ ಅದರಲ್ಲಿರುವ ಮಾನವೀಯ ಅಂಶಗಳ ಆಧಾರದ ಮೇಲೆ ನಿರ್ಧರಿಸುತ್ತೇವೆ. ಉದಾಹರಣೆಗೆ ತೇಜಸ್ವಿಯವರ 'ಅಕ್ಕಮ್ಮ ಹೇಳಿದ ಕಥೆ' ಯಲ್ಲಿ ಅಕ್ಕಮ್ಮನ ಕಥೆ ಇದೆ. ಜಿಂಕೆಯ ಕಥೆಯೂ ಇದೆ. ಸಿದ್ದೇಗೌಡ ಮಂಜಮ್ಮರ ಕಥೆ ಕೂಡ ಇದೆ. ಇನ್ನು ಏನೇನೋ ಇದೆ. ಇದರಲ್ಲಿ ಮಂಜಮ್ಮ ತನ್ನ ಮನೆಗೆ ಬಂದ ಜಿಂಕೆಯನ್ನು ಶಿಕಾರಿಯವರ ಮೇಲೆ ಕತ್ತಿ ಹಿಡಿದು ಬೆದರಿಸಿ ಓಡಿಸಿ ರಕ್ಷಿಸುತ್ತಾಳೆ. ಇಲ್ಲಿ ಮಂಜಮ್ಮನ ತಿಳುವಳಿಕೆಯು ಮಾನವೀಕರಣಗೊಂಡು ಜೀವನ ದೃಷ್ಟಿಯು ಆಗುತ್ತದೆ.

ಕರೀಗೌಡ ಬೀಚನಹಳ್ಳಿಯವರ 'ವಿಯೋಗ' ಕಥೆಯಲ್ಲಿ ಲೇಖಕರ ತಾಯಿ ತಾನು ನೆಟ್ಟು ಬೆಳಸಿದ ಮರವನ್ನು ಕಡಿದಾಗ ಅವಳಿಗಾಗುವ ಆಘಾತ, ಹಾಗೂ ಅವಳು ಬದುಕಿನ ಅನ್ಯ ಮೌಲ್ಯಕ್ಕಾಗಿ ನಡೆಸುವ ಹೋರಾಟವೂ ಆಗಿದೆ. ಪರಿಸರದ ಮೇಲಿನ ತಿಳುವಳಿಕೆಯಾಗಿದೆ. ರಾಘವೇಂದ್ರ ಪಾಟೀಲರ 'ದೇಸಗತಿ' ಕಥೆಯ ಲಂಗಟದ ಸ್ವಾಮಿಗಳ ಪರಿಸರ ಸಂವೇದನೆ. ಅವರು ಕಂಡುಕೊಂಡ ಜೀವನ ದೃಷ್ಟಿಯ ಮಾನವೀಕರಣವಾಗಿದೆ. ಹೀಗೆ ಒಂದು ಕೃತಿಯು ಒಂದೇ ಆಯಾಮವನ್ನು ಪಡೆದುಕೊಂಡಿರುವುದಿಲ್ಲ. ಒಂದು ಸೃಜನಶೀಲ ಕೃತಿ ನಾನಾ ಆಯಾಮಗಳನ್ನುಳ್ಳದ್ದಾಗಿರುತ್ತದೆ. ಈ ಮಾತಿಗೆ ತೇಜಸ್ವಿಯವರ 'ಜುಗಾರಿ ಕ್ರಾಸ್' 'ಕರ್ವಾಲೊ' ಕಾದಂಬರಿಗಳನ್ನು ನೋಡಬಹುದು. 'ಜುಗಾರಿ ಕ್ರಾಸ್' ಆಧುನಿಕ ಕಾಲದ ವ್ಯಕ್ತಿಗಳಾದ ಸುರೇಶ ಗೌರಿಯರ ಸಾಹಸ ಕಥೆಯನ್ನು, ದೋಣಿ ಹೊಳೆ, ಜುಗಾರಿಕ್ರಾಸ್ ಗಳ ಪರಿಸರದ ಚರಿತ್ರೆಯನ್ನು ಹೇಳುತ್ತದೆ. 'ಕರ್ವಾಲೊ' ಕಾದಂಬರಿಯಲ್ಲಿ ಕರ್ವಾಲೋರಿಗೆ ಮಂದಣ್ಣನ ಪರಿಸರ ತಿಳಿವಳಿಕೆ ಹಾಗೂ ಹಾರುವ ಓತಿಗಳು ಮುಖ್ಯವಾಗಿದ್ದರೆ, ಮಂದಣ್ಣನಿಗೆ ಪರಿಸರದ ತಿಳುವಳಿಕೆ ಇದ್ದು ಅವನ ಬದುಕಿನಲ್ಲಿ ಕಾಡು ತಿರುಗುವುದು ಹವ್ಯಾಸವಾಗಿದೆ. ಇದು ಮಂದಣ್ಣನ ಜೀವನ ದೃಷ್ಟಿ. ಕುವೆಂಪುರವರ 'ಕಾನೂರು ಹೆಗ್ಗಡತಿ' ಕೃತಿಯ ಹೂವಯ್ಯ ಕಾಣುವ ಪರಿಸರದ ಆರಾಧನೇ ದೃಷ್ಟಿಗೂ 'ಕರ್ವಾಲೊ' ನ ಮಂದಣ್ಣನ ದೃಷ್ಟಿಗೂ ಮತ್ತು ಜುಗಾರಿ ಕ್ರಾಸ್ ನ ದೌಲತರಾಮ್‌ನ, ಪರಿಸರದ ಮೇಲಿನ ದೃಷ್ಟಿಗೂ ಅಜಗಜಾಂತರ ವ್ಯತ್ಯಾಸವಿದೆ. ತೇಜಸ್ವಿಯವರ ಕೃತಿಗಳಲ್ಲಿ ಪರಿಸರದ ಮಾನವೀಕರಣ ಅಂಶಗಳನ್ನು ಹೆಚ್ಚಾಗಿ ನೋಡಬಹುದು. ಕಂಬಳಿ ಹುಳು, ಇರುವೆಗಳ ಚಟುವಟಿಕೆಗಳನ್ನು ದಾಖಲಿಸುವ ಇವರ ದೃಷ್ಟಿ ವಿಶಿಷ್ಟವಾದುದ್ದಾಗಿದೆ. ಅವುಗಳ ಮೂಲಕ ಮಾನವ ತಾನು ಕಲಿಯ ಬೇಕಾದದ್ದು ಅಪಾರ ಇದೆ. ಆದರೆ ಇವುಗಳು ಮಾನವನಿಂದ ಕಲಿಬೇಕಾದದ್ದು ಏನೇನು ಇಲ್ಲ ಎಂದು ಅವರು ತಮ್ಮ ಕೃತಿಗಳ ಮೂಲಕ ಧ್ವನಿಸುತ್ತಾರೆ. ಇದೇ ಅವರು ಕಾಣಿಸುವ ಅನಂತ ಬಗೆ ವಿಸ್ಮಯ. ಪ್ರಕೃತಿಯಲ್ಲಿ ಮಂಗಟ್ಟೆ ಹಕ್ಕಿ ಸಂಬಂಧ ಹೇಗೆಂದರೆ ಹೆಣ್ಣು ಹಕ್ಕಿಗೆ ಗಂಡುಹಕ್ಕಿ ಆಹಾರ ತಂದು ಕೊಡುತ್ತದೆ. ಇದು ಮರಿಯನ್ನು ಪೋಷಿಸಿ ರಕ್ಷಿಸಲು ಹಕ್ಕಿ ಪ್ರೀತಿಯಿಂದ ಮಾಡುವ ಕರ್ತವ್ಯದ ಚಟುವಟಿಕೆ ಆಗಿದೆ. ಆದರೆ ಮಾನವ ಗಂಡು ಹಕ್ಕಿಯನ್ನು ಮಾಂಸಕ್ಕಾಗಿ ಕೊಂದರೆ, ಆಹಾರವಿಲ್ಲದೆ, ತಾಯಿ ಹಕ್ಕಿ ಮರಿಹಕ್ಕಿ ಎರಡೂ ಸಾಯುತ್ತವೆ. ಮಾನವ ತಾನು ಪ್ರಜ್ಞಾವಂತನೆಂದು ಹೇಳಿಕೊಳ್ಳುತ್ತಾನೆ. ಈ ಮಾತು ಅವನದೆ. ಆದರೆ ಹೀಗೆ ಪ್ರಾಣಿ ಪಕ್ಷಿಗಳ ಸಂತತಿ ನಾಶ ಮಾಡಿದವನು ಇವನೆ. ಇವುಗಳ ಸಂತತಿ ನಾಶ ಮಾಡಲಿಕ್ಕೆ ಇವನಿಗೆ ಹಕ್ಕನ್ನು ಕೊಟ್ಟವರು ಯಾರು? ಎಂಬ ಪ್ರಶ್ನೆ ನಮ್ಮನ್ನು ಕಾಡದಿರದು. ಮಾನವ ಮಾಂಸ ತಿನ್ನದೆ ಬದುಕ ಬಹುದು. ಹುಲಿ, ಸಿಂಹಗಳು ಮಾಂಸ ತಿನ್ನದೆ ಬದುಕಲಾರವು. ಇದು ಪ್ರಕೃತಿಯ ನಿಯಮವಾಗಿದೆ. ಇಂತಹ ಪ್ರಕೃತಿಯ ಸಾಮರಸ್ಯ ಪಾಠವನ್ನು ನಾವು ಇರುವೆಯಿಂದ ತಿದ್ದಿಕೊಳ್ಳುವಂತಾಗಿದೆ. ಕಂಬಾರರ 'ಪುಷ್ಪರಾಣಿ' ನಾಟಕದ ಪ್ರಾಣಿ-ಪಕ್ಷಿ, ಗಿಣಿಗಳಿಂದ ಕಲಿಯುವುದಾಗಿದೆ. ಹೀಗೆ ಪರಿಸರಸಂವೇದನೆ ಕಲಿಸಬಲ್ಲ ತಿಳುವಳಿಕೆ ಮತ್ತು ಜೀವನ ದೃಷ್ಟಿಗಳನ್ನು ಸಾಹಿತ್ಯ ಕೃತಿಗಳು ಸೂಕ್ಷ್ಮವಾಗಿ ವಿವರಿಸುತ್ತವೆ. ಈ ಬಗೆಯ ನಾನಾ ಕೃತಿಗಳನ್ನು ಮುಂದೆ ಚರ್ಚಿಸಲಾಗಿದೆ.

5.ಅಧ್ಯಯನದ ಸಮಸ್ಯೆಗಳು:

ಸಾಹಿತ್ಯ ಕೃತಿಗಳ ಅಧ್ಯಯನದಲ್ಲಿ ನಾನಾ ಸಮಸ್ಯೆಗಳು ಉದ್ಭವವಾಗುತ್ತವೆ. ಅವುಗಳಲ್ಲಿ ಮುಖ್ಯವಾದ ಒಂದೆರಡನ್ನು ಇಲ್ಲಿ ಚರ್ಚಿಸಬಹುದು. ಇಲ್ಲಿಯ ಮೊದಲ ಮುಖ್ಯ ಸಮಸ್ಯೆ ಎಂದರೆ; ಒಬ್ಬ ಓದುಗ ಒಂದು ಕೃತಿಯನ್ನು ಓದಿ ತನ್ನಲ್ಲಿಯೇ ರೂಪಾಂತರವಾಗುವ ಪ್ರಕ್ರಿಯೆ ಯಾವುದು? ಅಂಥ ಕೃತಿಯನ್ನು ಹೇಗೆ ನೋಡಬೇಕು ಎಂಬುದು.

ಮಾನವನ ಜ್ಞಾನ ಶಾಸ್ತ್ರಗಳು ಇಂದು ಹಲವಾರಿವೆ. ಅವುಗಳೆಂದರೆ ಚರಿತ್ರೆ, ಸಮಾಜ ಶಾಸ್ತ್ರ ಮನಃಶಾಸ್ತ್ರ, ವಿಜ್ಞಾನ, ಖಗೋಳಶಾಸ್ತ್ರ ಭೂಗೋಳಶಾಸ್ತ್ರ ಇತ್ಯಾದಿ. ಇವುಗಳು ಅನ್ಯಜ್ಞಾನ ಶಿಸ್ತುಗಳು. ಇವುಗಳನ್ನು ಹೇಗೆ ನೋಡಬೇಕೆಂಬ ಬಗ್ಗೆ ಒಂದು ದಾರಿ ನಿರ್ಮಾಣವಾಗಿದೆ. ಹಾಗಾಗಿ ಇವುಗಳನ್ನು ಪ್ರತ್ಯೇಕ ಜ್ಞಾನ ಶಿಸ್ತಿಗೆ ಒಳಪಡಿಸಿ ಅಧ್ಯಯನ ಮಾಡುತ್ತೇವೆ. ಆದರೆ ಸಾಹಿತ್ಯ ಕೃತಿಗಳಲ್ಲಿ ಅನ್ಯ ಜ್ಞಾನಶಿಸ್ತೊಂದು ಬಂದರೆ ನಾವು ಹೇಗೆ ನೋಡಬೇಕೆಂದು ಮುಖ್ಯ ಸಮಸ್ಯೆ ಅಂದರೆ 'ಶಿಕಾರಿ' ಕಾದಂಬರಿಯನ್ನು ಮನಃಶಾಸ್ತ್ರವನ್ನಾಗಿ ನೋಡುವುದೆ? 'ಚಿಕ್ಕವೀರ ರಾಜೇಂದ್ರ' ಕೃತಿಯಲ್ಲಿ ಚಾರಿತ್ರಿಕತೆಯನ್ನು ಹೇಗೆ ನೋಡುವುದು? 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಸಮಾಜ ಶಾಸ್ತ್ರವನ್ನು ತೇಜಸ್ವಿಯವರ ಕೃತಿಗಳಲ್ಲಿ ಪರಿಸರ ಶಾಸ್ತ್ರವನ್ನು ಹೇಗೆ ನೋಡುವುದು? ಇಂತಹ ಪ್ರಶ್ನೆಗಳಿಗೆ ಉತ್ತರ ಜಟಿಲವಾದದ್ದು. ಯಾಕೆಂದರೆ 'ಚಿಕ್ಕವೀರ ರಾಜೇಂದ್ರ' ಕೃತಿ ಚರಿತ್ರೆಯ ವಿಷಯ ವಸ್ತುಗಳನ್ನೊಳಗೊಂಡಿದೆ ನಿಜ ಹಾಗೆಂದು ಅದರಲ್ಲಿ ಚರಿತ್ರೆಯ ಆಧಾರ ದಾಖಲೆಗಳನ್ನು ಹುಡುಕುವುದಲ್ಲ ಇದು, ಸಾಹಿತ್ಯ ಕೃತಿಯಾಗಿ ಚರಿತ್ರೆ ಹೇಳಲಾಗದ ಸತ್ಯವನ್ನು ಹೇಳುತ್ತಿರುತ್ತದೆ. 'ಶಿಕಾರಿ' ಕಾದಂಬರಿಯಲ್ಲಿ ಮನಶಾಸ್ತ್ರಿಯ ಅಂಶಗಳನ್ನು ತೇಜಸ್ವಿ ಕೃತಿಗಳಲ್ಲಿ ವಿಜ್ಞಾನ ಪರಿಸರದ ಅಂಶಗಳನ್ನು ಅರಸುತ್ತ ಹೋಗುವುದಲ್ಲ. ಇಂತಹ ಕೃತಿಗಳನ್ನು ಒಂದು ಸೃಜನ ಶೀಲ ಕೃತಿ ಎಂದು ನೋಡಬೇಕು. ಹೀಗೆ ನೋಡದಿದ್ದರೆ ತೇಜಸ್ವಿಯವರ 'ಕರ್ವಾಲೋ' ಕಾದಂಬರಿಯನ್ನು ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರೊಬ್ಬರು ಓದಿ, 'ಹಾರುವ ಓತಿಗಾಗಿ ಇಷ್ಟೊಂದು ಸಂಶೋಧಿಸಿ ನಿರಾಶರಾಗಬೇಕಿತ್ತೆ? ಈ ಪ್ರಾಣಿ ಮನೆನಾಡಿನ ಕಾಡುಗಳಲ್ಲಿ ಸುಲಭವಾಗಿ ಕಾಣಬರುತ್ತದೆ' ಎಂದು ಪ್ರತಿಕ್ರಿಯಿಸಿದಂತಾಗುತ್ತದೆ. ಹಾಗಾಗಿ ಇದನ್ನು ಒಂದು ಸಾಹಿತ್ಯ ಸೃಜನ ಶೀಲ ಕೃತಿಯನ್ನಾಗಿ ನೋಡಿದರೆ ಈ ಓತಿಯ ಸಾಂಕೇತಿಕತೆಯನ್ನು ಅರಿಯಬಹುದು. ಓತಿಯ ಹುಡುಕಾಟದ ಹಿಂದಿರುವ ಮಾನವ ಜೀವನದ ನಿಗುಢ ಹುಡುಕಾಟಗಳನ್ನು ಅರಿಯಬಹುದು. ಇದರಿಂದ ಪರಿಸರದ ವಿವರಗಳನ್ನು ದಾಟಿ ಅದರ ಆಚೆಯ ಯಾವ ಸತ್ಯವನ್ನು ಕೃತಿ ಹೇಳುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ನಾಗೇಶ ಹೆಗ್ಗಡೆಯವರ ' ಇರುವುದೊಂದೆ ಭೂಮಿ' ಕೃತಿಯನ್ನು ನೋಡುವ ಹಾಗೆ 'ಕರ್ವಾಲೊ' 'ಕಾನೂರು ಹೆಗ್ಗಡತಿ' ಗಳನ್ನು ನೋಡಲಾಗುವುದಿಲ್ಲ. ಯಾಕೆಂದರೆ 'ಇರುವುದೊಂದೇ ಭೂಮಿ' ಒಂದು ನಿರ್ದಿಷ್ಟ ನಿಲುವನ್ನು ಖಚಿತವಾಗಿ ಮಂಡಿಸುವ ಕೃತಿ ಆದರೆ 'ಕರ್ವಾಲೊ', 'ಕಾನೂರು ಹೆಗ್ಗಡತಿ' ಯಂತಹ ಕೃತಿಗಳಿಗೆ ನಾನಾವತಾರದ ಮುಖಗಳಿವೆ. ಇವು ಓದುಗನ ದೃಷ್ಟಿಯಂತೆ ಸೃಷ್ಟಿಯಾಗುವ ಮುಖಗಳು

ಯಾವುದೋ ಒಂದು ಶಾಸ್ತ್ರದ ತಿಳುವಳಿಕೆಯಿಂದ ಸಾಹಿತ್ಯಕೃತಿಯನ್ನು ಪರಿಶೀಲಿಸುವುದಲ್ಲ. ಆಯಾಯಾ ವಸ್ತುವನ್ನು ಆಯಾಯಾ ದೃಷ್ಟಿಕೋನದಲ್ಲೆ ನೋಡುವ, ತಿಳಿಯುವ ಕೆಲಸವಾಗಬೇಕು. ಈ ಮಾತನ್ನು ತೇಜಸ್ವಿಯವರ " ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು" ಪುಸ್ತಕದ ಮುನ್ನುಡಿಯಿಂದ ಸ್ಪಷ್ಟಪಡಿಸಬಹುದು.

> "ನಾನು ವಿಜ್ಞಾನ ಪದವೀಧರನಲ್ಲ, ವಿಜ್ಞಾನಿಯೂ ಅಲ್ಲ. ನಾನು ಉಚ್ಚ ಶಿಕ್ಷಣಪಡೆದಿದ್ದು ಸಾಹಿತ್ಯದಲ್ಲಿ. ಆದರೆ ಹಳ್ಳಿಗೆ ಬಂದ ಮೇಲೆ ಸುತ್ತ ಮುತ್ತಲ ಆನೇಕ ಕೌತುಕಮಯ ವಿದ್ಯಮಾನಗಳನ್ನು ನೋಡುತ್ತಾ ಅವುಗಳ ಬಗ್ಗೆ ತಿಳಿದುಕೊಳ್ಳುತ್ತಾ ಬಂದೆ. ನಾನು ಕಂಡ ಪಶು, ಪಕ್ಷಿ, ಕ್ರಿಮಿ ಕೀಟಗಳ ವ್ಯಕ್ತಿತ್ವವನ್ನು ತಿಳಿದುಕೊಳ್ಳಲಷ್ಟೇ ನಾನು ಅವುಗಳ ಬಗ್ಗೆ ಅಭ್ಯಾಸ ಮಾಡಿದವನು. ನಾನು ಜ್ಞಾನೋಪಾಸಕನಾಗಲಿ, ವಿದ್ವಾಂಸನಾಗಲಿ ಅಲ್ಲ. ಸಾಹಿತ್ಯವೇ ನನ್ನ ಸ್ವಧರ್ಮ. ನಾನು ಏನನ್ನು ಬರೆದರೂ ಅದಕ್ಕೆ ಸಾಹಿತ್ಯದ ಪರಿವೇಷ, ಕಥೆ ಕಾದಂಬರಿಗಳ ಛಾಯೆ ಇರುತ್ತದೆ. ಆದ್ದರಿಂದಲೇ ಈ ಪುಸ್ತಕದ ಹೆಸರು 'ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು' ಎಂದು ಇಟ್ಟಿದ್ದು. ಸಾಹಿತಿ ತನ್ನ ಅನುಭವವನ್ನು ಸಮರ್ಥವಾಗಿ ಹೇಳಲು ಅನೇಕ ವೇಳೆ ತತ್ವಶಾಸ್ತ್ರ, ಪುರಾಣ, ಮನಃಶಾಸ್ತ್ರಗಳನ್ನು ಉಪಯೋಗಿಸುವಂತೆ ಈ ಕಥೆಗಳಲ್ಲಿ ಕೀಟಶಾಸ್ತ್ರ, ಪಕ್ಷಿಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದವುಗಳ ಉಪಯೋಗ ಆಗಿದೆಯಷ್ಟೆ, ಸ್ವಾನುಭವದ ಎಲ್ಲೆಯನ್ನು ಮೀರದೆ ನಿರೂಪಿಸಿರುವ ಇವನ್ನು ಕಥೆಗಳೆಂದೇ ಪರಿಗಣಿಸಿಬಹುದು ಅಥವಾ ಇವನ್ನು ಏನೆಂದು ಪರಿಗಣಿಸುವ ಅಗತ್ಯವಾದರೂ ಏನಿದೆ? ಓದಿ ಸಂತೋಷ ಪಡುವ ಸಂಗತಿಗಳಾದರೆ ಸಾಕಲ್ಲವೆ!"."4"

ಒಬ್ಬ ಸಾಹಿತಿಯಾದವನು ಕೇವಲ ಪ್ರಾಣಿ, ಪಕ್ಷಿ, ಕೀಟಗಳ ಬಗ್ಗೆ ಬರೆಯಲು ಸಾಧ್ಯವೆ? ಬರೆದರೆ ಇದು ಪ್ರಾಣಿ, ಪಕ್ಷಿ, ಕೀಟಶಾಸ್ತ್ರಗಳಾಗುತ್ತವೆ ಎಂದು ಅಧ್ಯಯನದಲ್ಲಿ ತೊಡಗುವವರಲ್ಲಿ ಉಂಟಾಗುವ ಸಮಸ್ಯೆಗೆ ಪರಿಹಾರವಾಗಿ ತೇಜಸ್ವಿ ಈ ಮಾತನ್ನಾಡಿದ್ದಾರೆ. "ನಾನು ವಿಜ್ಞಾನ ಪದವೀಧರನಲ್ಲ, ವಿಜ್ಞಾನಿಯೂ ಅಲ್ಲ; ನಾನು ಜ್ಞಾನೋಪಾಸಕನಾಗಲಿ, ವಿದ್ವಾಂಸನಾಗಲಿ ಅಲ್ಲ. ಸಾಹಿತ್ಯವೇ ನನ್ನ ಸ್ವಧರ್ಮ ಹಾಗಾಗಿ ನಾನು ಏನನ್ನು ಬರೆದರೂ ಅದಕ್ಕೆ ಸಾಹಿತ್ಯದ ಪರಿವೇಷ, ಕಥೆ ಕಾದಂಬರಿಗಳ ಛಾಯೇ ಇರುತ್ತದೆ" ಎಂದು ಸಾಹಿತ್ಯ ಕೃತಿಯ ಅನನ್ಯತೆಯನ್ನು ಸ್ಪಷ್ಟಪಡಿಸುತ್ತಾರೆ.

ಒಬ್ಬ ಲೇಖಕ ತನ್ನ ಅನುಭವವನ್ನು ಸಮರ್ಥವಾಗಿ ಹೇಳಲಿಕ್ಕೆ ತತ್ವಶಾಸ್ತ್ರ, ಪುರಾಣ ಮನಃಶಾಸ್ತ್ರಗಳಂಥ ಶಾಸ್ತ್ರಗಳನ್ನು ಬಳಸುತ್ತಾನೆ. ಅದರಂತೆ ಇವರು ಕೀಟಶಾಸ್ತ್ರ, ಪ್ರಾಣಿಶಾಸ್ತ್ರ, ಪಕ್ಷಿ ಶಾಸ್ತ್ರಗಳನ್ನು ಉಪಯೋಗಿಸಿಕೊಂಡಿದ್ದಾರೆ. ಕೃತಿಯ ಯಶಸ್ಸಿಗೆ ಅನುಭವದ ಎಲ್ಲೆ ತುಂಬ ಮುಖ್ಯವಾದದ್ದು. ಶಾಸ್ತ್ರತನ ಮೀರಿ ಮಾನವೀಯ ಮೌಲ್ಯವನ್ನು ಕಾಪಾಡಿಕೊಳ್ಳುವ ಕೃತಿಯನ್ನೆ ನಾವು ಸೃಜನಶೀಲ ಕೃತಿ ಎಂದು ಕರೆಯಬಹುದು. ಹಾಗೂ ಯಾವುದೇ ಒಂದು ಕೃತಿ ದುರ್ಬಲವಾಗುವುದಾದರೆ, ಅದು ಕಲಾಕಾರನ ದುರ್ಬಲತೆಯಾಗಿರುತ್ತದೆ. ಉದಾಹರಣೆಗೆ ಚರಿತ್ರೆಯ ಆಕರವುಳ್ಳ 'ಚಿಕ್ಕವೀರ ರಾಜೇಂದ್ರ' ಕೃತಿಯನ್ನು ಸಮಾಜದ ಆಕರವುಳ್ಳ'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ' ಕೃತಿಗಳನ್ನು ಒಬ್ಬ ದುರ್ಬಲ ಕಲಾಕಾರ ರಚಿಸಿದ್ದರೆ ಅವು ಚರಿತ್ರೆಯ, ಸಮಾಜದ ಆಕರ ಕೃತಿಗಳಾಗುತ್ತಿದ್ದವು. ಆದರೆ ಈ ಕೃತಿಗಳು ಹಾಗಾಗದೆ ಮಾಸ್ತಿ, ಕುವೆಂಪುರಂತಹ ಸಮರ್ಥ ಕಲಾಕಾರರಿಂದ; ಬೇರೊಂದು ಜೀವನದರ್ಶನ ಹೊಮ್ಮಿಸುವ ಕೃತಿಗಳಾಗಿವೆ. "ಇವನ್ನು ಕಥಗಳೆಂದೇ ಪರಿಗಣಿಸಬಹುದು ಅಥವಾ ಇವನ್ನು ಏನೆಂದು ಪರಿಗಣಿಸುವ ಅಗತ್ಯವಾದರೂ ಏನಿದೆ? ಓದಿ ಸಂತೋಷ ಪಡುವ ಸಂಗತಿಗಳಾದರೆ ಸಾಕಲ್ಲವೆ!" ಎಂದು ತೇಜಸ್ವಿ ಕೇಳುವುದು ಮಾರ್ಮಿಕವಾಗಿದೆ.

6. ಅಧ್ಯಯನದ ವ್ಯಾಪ್ತಿಃ

ಈ ಅಧ್ಯಯನವು ತನ್ನ ಮಿತಿಯಲ್ಲಿ ಕಲಾಕೃತಿಗಳು ಹಾಗೂ ಕಲಾಕೃತಿಗಳಲ್ಲದ ಬರಹಗಳು ಕಟ್ಟಿಕೊಡುವ ಅನುಭವ ಹಾಗೂ ದರ್ಶನಗಳನ್ನು ಹುಡುಕುವ ಪ್ರಯತ್ನ ಮಾಡುತ್ತದೆ. ಅಧ್ಯಯನಕ್ಕಾಗಿ ಇಲ್ಲಿ ಆಯ್ದುಕೊಂಡಿರುವ ಕೃತಿಗಳು 20ನೇ ಶತಮಾನದ ಆಧುನಿಕ ಸಾಹಿತ್ಯ ಕೃತಿಗಳು. ಇಲ್ಲಿ ಕುವೆಂಪು ಅವರ 'ಕಾನೂರು ಹೆಗ್ಗಡತಿ' ಕೃತಿಯಿಂದ ಇವತ್ತಿನ ಚಂದ್ರಶೇಖರ ತಾಳ್ಯ ಬಂಜಗೆರೆ ಜಯಪ್ರಕಾಶರ ಅವರ ಕೃತಿಗಳವರೆಗೆ ಇವುಗಳಲ್ಲಿರುವ ಪರಿಸರ ತಿಳುವಳಿಕೆ, ಜೀವನ ಮೌಲ್ಯವನ್ನು ವಿಶ್ಲೇಷಿಸಲಾಗಿದೆ. ಇಲ್ಲಿಯ ಕೃತಿಗಳು ಅರ್ಧಶತಮಾನದ ಆಚೆ ಈಚೆಯಲ್ಲಿ ರಚಿಸಲ್ಪಟ್ಟವು. ಇವುಗಳಲ್ಲಿ 'ಕಾನೂರು ಹೆಗ್ಗಡತಿ' 'ಜುಗಾರಿ ಕ್ರಾಸ್' ಎಚ್.ಎಸ್.ಶಿವಪ್ರಕಾಶರ 'ಮಂಟೇಸ್ವಾಮಿ ಕಥಾ ಪ್ರಸಂಗ', 'ಮಾದಾರಿ ಮಾದಯ್ಯ' ಕೃತಿಗಳು ಕಾಣಿಸುವ ಪರಿಸರ ಸಂವೇದನೆಯ ವ್ಯತ್ಯಾಸವನ್ನು ಸೂಕ್ಷ್ಮವಾಗಿ ನೋಡಲೆತ್ನಿಸಿದೆ.

ನಮ್ಮ ಸಾಹಿತ್ಯಕ ಅಧ್ಯಯನಗಳಲ್ಲಿ ಇಂದಿನ ಸಮಸ್ಯೆಗಳ ಪರಿಕಲ್ಪನೆಯನ್ನು ಹಿಂದಿನ ಸಾಹಿತ್ಯ ಕೃತಿಗಳಲ್ಲಿ ನೋಡುವ ಪರಿಪಾಠ ಬೆಳೆದಿದೆ ಉದಾಹರಣೆಗೆ 'ಪರಿಸರ ಪ್ರಜ್ಞೆ ಮತ್ತು ಬಸವಣ್ಣ' ಎಂಬ ಪ್ರಭುಸ್ವಾಮಿ ಮಠ ಅವರು ಬಸವಣ್ಣನವರ ಒಂದು ವಚನವನ್ನು ವಿಶ್ಲೇಷಿಸುವ ರೀತಿಯನ್ನು ಗಮನಿಸಬೇಕು.

ಮರಗಿಡಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತಣಿತಣಿದು
ಪ್ರಾಣವ ಕೊಂಡುಂಡು ಶರೀರವ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯಾ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ
ಅದು ಕಾರಣ
ಕೂಡಲಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವ
ಕೊಂಡು ನಿರ್ದೋಷಿಗಳಾಗಿ ಬದುಕಿದರು."5"

ಇದು ಅವರ ಪ್ರಕಾರ ಪರಿಸರ ಪ್ರಜ್ಞೆಯನ್ನು ಸೂಚಿಸುವ ವಚನ. ಈ ವಚನದಲ್ಲಿ ಬಸವಣ್ಣನವರು, ಇಡೀ ಪರಿಸರವನ್ನು ಅಸಮತೋಲನಗೊಳಿಸುವುದರಿಂದಾಗುವ ಜೀವ ವಿರೋಧಿ ಪರಿಣಾಮವನ್ನು ಸೂಚಿಸುತ್ತಿದ್ದಾರೆಂದು ಪ್ರಭು ಸ್ವಾಮಿ ವಿಶ್ಲೇಷಣೆ ಮಾಡುತ್ತಾರೆ. ಆದರೆ ಈ ವಚನ ಪರಿಸರ ಪ್ರಜ್ಞೆಯಿಂದ ಬರೆದದ್ದು ಎಂಬ ನಿರ್ಧಾರಕ್ಕೆ ಬರುವುದಾದರೆ 12ನೇ ಶತಮಾನದಲ್ಲಿ ಇಂದಿನ ಯಾವುದೇ ವೈಜ್ಞಾನಿಕ, ತಾಂತ್ರಿಕತೆಯ ಬೆಳವಣಿಗೆಯಾಗಿರಲಿಲ್ಲ. ಕಾರ್ಖಾನೆಗಳಿರಲಿಲ್ಲ. ಹಾಗಾಗಿ ದಿನನಿತ್ಯ ಜೀವನಾಧಾರ ಚಟುವಟಿಕೆಗಳಿಗೆ ಮರಗಿಡಗಳನ್ನು ಕಡಿಯುವುದು ಸಹಜವಾಗಿತ್ತು. ಒಂದು ಜೀವಿ ಮತ್ತೊಂದು ಜೀವಿಯನ್ನು ತಿಂದು ಬದುಕುವ ಅವಲಂಬನೆ ಪ್ರಕೃತಿಯಲ್ಲಿ ಸಹಜವಾದುದು. ಇಂತಹ ಅವಲಂಬನೆಗಾಗಿ ಆ ಕಾಲದ 'ಮರಗಿಡಬಳ್ಳಿಗಳನ್ನು ಬೆಳಸೆಲ್ಲವ ತಣಿಸಿದುದು' ಎಂಬ ಮಾತನ್ನು ಇಂದಿನ ನಿಸರ್ಗಅಸಮತೋಲನಕ್ಕೆ ಬಳಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಇದೇ ತರಹ 'ಪಂಪನಲ್ಲಿ ಪರಿಸರ ಪ್ರಜ್ಞೆ' ಎಂದು ಶಿವರಾಮಯ್ಯನವರು ಬರೆದ ಲೇಖನವು ಸಹ ಇಂತಹ ದೂರಾನ್ವಯದೋಷದ ಒಂದು ಲೇಖನ. ಹಾಗಾಗಿ 20ನೇ ಶತಮಾನದ ಸಮಸ್ಯೆಯನ್ನು 10-12ನೇ ಶತಮಾನದ ಕೃತಿಗಳಲ್ಲಿ ನೋಡುವುದರಲ್ಲಿ ಅರ್ಥವಿಲ್ಲ. ಈ ಶತಮಾನದ ಸಮಸ್ಯೆಯನ್ನು ಈ ಶತಮಾನದ ಕೃತಿಗಳಲ್ಲೆ ನೋಡುವುದು ಮುಖ್ಯವೆನಿಸಿದೆ. ಎಂತಲೇ ಆಧುನಿಕ ಕನ್ನಡ ಸಾಹಿತ್ಯ ಕೃತಿಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ 2

ಪರಿಸರ ಸಾಹಿತ್ಯ ಮತ್ತು ಮೌಲ್ಯ ಪ್ರಜ್ಞೆ

ಅ] ಕಾವ್ಯ ಸಾಹಿತ್ಯ

ಪರಿಸರಕ್ಕೆ ಸಂಬಂಧಿಸಿದ ಅಂಶಗಳನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾಣಬಹುದು. ಹಾಗಾಗಿ ಸಾಹಿತ್ಯ ಪ್ರಕಾರಗಳಾದ ಕಾವ್ಯ, ಕಾದಂಬರಿ, ಪ್ರವಾಸ ಕಥಾನ, ನಾಟಕ, ವೈಚಾರಿಕ ಲೇಖನಗಳಲ್ಲಿ ವ್ಯಕ್ತವಾಗಿರುವ ಪರಿಸರ ಪ್ರಜ್ಞೆ ಮತ್ತು ಜೀವನದೃಷ್ಟಿಯನ್ನು ನಾವು ಹೀಗೆ ಸಾಹಿತ್ಯ ಕೃತಿಗಳಲ್ಲಿ ಪರಿಸರವನ್ನೇ ಕುರಿತಾದ ಸಾಹಿತ್ಯ ಇಲ್ಲ, ಇದ್ದರೂ ಕೃತಿಗಳೊಳಗಿನ ಒಂದು ತುಣುಕು, ನಿಸರ್ಗ, ಪ್ರಕೃತಿ ಪರಿಸರಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಇನ್ನು ಸಮಾಜ ಪರಿಸರಕ್ಕೆ ಸಂಬಂದಿಸಿದ; ಕೃತಿಗಳೇ ಜಾಸ್ತಿ, 20ನೇ ಶತಮಾನದಲ್ಲಿ ನಿಸರ್ಗದ ಅಧೋಗತಿಯನ್ನು ಮನಗಂಡ ಲೇಖಕರು ಈಗೀಗ ಪ್ರಕೃತಿ ಪರಿಸರ ಪ್ರಜ್ಞೆಯನ್ನು ಮತ್ತು ಅಲ್ಲಿ ಜೀವನ ಮೌಲ್ಯವನ್ನು ಕಾಣುವ, ಕಟ್ಟುವ, ಕೆಲಸ ಮಾಡುತ್ತಿದ್ದಾರೆ.

ಈ ಭಾಗದಲ್ಲಿ ಪ್ರಸ್ತುತ ಪರಿಸರ ಮತ್ತು ಈ ಪರಿಸರದೊಳಗಿನ ಕವಿಗಳ ದೃಷ್ಟಿ ಕೋನಗಳಿಂದ, ಪರಿಸರ ತಿಳುವಳಿಕೆಗೆ ಪೂರಕವಾಗುವ ಅಂಶಗಳಿಗೆ, ಸಹಾಯಕವಾಗುವ, ಕವನಗಳನ್ನು ವಿಶ್ಲೇಷಿಸಬಹುದಾಗಿದೆ. ಚಂದ್ರಶೇಖರ ತಾಳ್ಯರ 'ಸುಡುವ ಭೂಮಿ ' ಕವನ ಸಂಕಲನದ ಕೆಲವು ಪದ್ಯಗಳನ್ನು ಮತ್ತು ಬಂಜಗೆರೆ ಜಯ ಪ್ರಕಾಶರ 'ಮಹೂವಾ' ಕವನ ಸಂಕಲನದ 'ಮಹೂವ' ಪದ್ಯವನ್ನು ಗಮನಿಸಬಹುದು.

ಮೊದಲಿಗೆ 'ಸುಡುವ ಭೂಮಿ' ಸಂಕಲನದ 'ನದಿ ಇಲ್ಲಾ ಕೆರೆ ಇಲ್ಲಾ' ಕವನವನ್ನು ನೋಡಬಹುದು. ಈ ಪದ್ಯದಲ್ಲಿ ಭೂಮಿ, ಆಕಾಶ, ಇವೆರಡರ ನಡುವಿನ ಜೀವರಾಶಿಗಳ ಸಾವಯುವ ಸಂಬಂಧವನ್ನು ಕಾಣುತ್ತೇವೆ. ಈ ಸಂಬಂಧದ ಯಾವುದೇ ಭಾಗ ಊನವಾದರೂ ಇಡೀ ಪ್ರಕೃತಿ ಜೀವವು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಕ್ರಿಯಾತ್ಮಕ ಚಟುವಟಿಕೆಯನ್ನು ಗುರುತಿಸಬಹುದು.

ಖಗೋಳ ಪ್ರಜ್ಞೆ, ಭೂಗೋಳ ಪ್ರಜ್ಞೆಗಳಿಂದ ವಿಜ್ಞಾನದ ಸತ್ಯವನ್ನು ಪರಿಸರದ ಒಂದೇ ಚೌಕಟ್ಟಿನೊಳಗೆ ಹಿಡಿದಿಡುವ ಸೃಜನಶೀಲ ಕಾವ್ಯಕ್ರಿಯೆ ಈ ಕವಿಯದಾಗಿದೆ. ಭೂಮಿ, ಆಕಾಶಗಳ ನಡುವಿನ ಜೀವ ಸಂಬಂಧದ ಕ್ರಿಯೆಯ ಹೆಣಿಗೆಯ ಸಾಲು ಹೀಗಿದೆಃ

ಮಟ ಮಟ ಮಧ್ಯಾಹ್ನದರಗಿಣಿ ಬಿಸಿಲು
ಕೊಕ್ಕ್ಲಾ ಕೆಂಪು ಕಾರಿ
ಸುತ್ತ ಕಂಗಾಲು ಕಣ್ಣುಗಳ ಬೀರಿ
ಹಾರಿ ಹೋಯಿತು ಅನಂತಕ್ಕೆ
ಉರಿಯನುಳಿಸಿ."6"

ಇಲ್ಲಿ ಆಕಾಶದ ಹಗಲಿನ ಕ್ರಿಯೆ ಒಂದು ಭಾಗವಾದರೆ ಅದೇ ಆಕಾಶದ ರಾತ್ರಿ ಕ್ರಿಯೆಃ

ಒಂದೇ ಒಂದು ಒದೆ
ಚಿಕ್ಕ ಬಾಸಾಳದಂತೆ
ಚಂದ್ರನಗಲದ ಹುಣ್ಣು ಮೂಡಿತು
ಬಿಕ್ಕಳಿಕೆ ಬೊಕ್ಕೆ ಎದ್ದವು ದಡಾರದ ಹಾಗೆ
ಬಾನ ತುಂಬಾ."7"

ಹಗಲು ರಾತ್ರಿಗಳ ಬೆಸುಗೆ ಇದು. ಹಗಲಿನ ಸೂರ್ಯನ ಬಿಸಿಲಿನ ಗಿಣಿ ಭೂಮಿಗೆ ಕೆಂಡದ ಉರಿಯನ್ನು ಮಾತ್ರ ಬಿಟ್ಟು ಅನಂತದಲ್ಲಿ ಲೀನವಾಗಿದೆ. ಈ ಹಗಲಿನ ಕ್ರಿಯೆಯಿಂದಾದ ರಾತ್ರಿಯ ವರ್ಣನೆಯೇ ಅಪೂರ್ವವಾದದ್ದು. ಇಲ್ಲಿ ನಕ್ಷತ್ರ, ಚಂದ್ರರನ್ನು ಜೀವದ ಮನುಷ್ಯರನ್ನು ಮಾಡಿ; ಹುಣ್ಣು ದಡಾರ ಬೊಕ್ಕೆಗಳನ್ನೇಳಿಸುವ ಕವಿಯ ಕಲ್ಪನೆ ಮಾರ್ಮಿಕವಾಗಿದೆ.

ನದಿ ಇರದ ನಾಡಿನ ತುಂಬ
ತೊಟ್ಟಿಕ್ಕುವ ಕಂಬನಿ
ಕಾದ ನೆಲ, ಕಾಯುವ ಜೀವ
ಕುದಿವ ಉಸಿರ ತುಂಬಾ
ಶಬ್ದಾಪಶಬ್ದ
ಪದ ಪದವ ತುಳಿದ
ಕವಲು ದಾರಿಯ ತುಂಬಾ
ಕನಲು, ಕಿಡಿಕಿಡಿ
ನದೀ ಜಾಡಿನ ಗುಂಟ
ಕರಿದಾರಿ ಕಳೆದರೆ ಕರೀ ಸಮುದ್ರ
ಆಕಳಿಕೆಯ ನಿರಂತರ ಘಳಿಗೆ
ಊರೂರ ಮಂದಿ
ಕೇರಿ ಹೋದರು
ತೂರಿ ಹೋದರು."8"

'ಕಾದ ನೆಲ, ಕಾಯುವ ಜೀವ'; ಇಲ್ಲಿ ಮಟ ಮಟ ಮಧ್ಯಾಹ್ನದರಗಿಣಿ ಬಿಸಿಲಿನಿಂದ ನೆಲ ಕಾದಿದೆ. ಈ ನೆಲವೆ ಕಾಯುವ ಜೀವ. ಆದರೆ ಇಲ್ಲಿ 'ರಕ್ಷಿಸುವವನೆ ಶಿಕ್ಷಿಸಿದಂತಾಗಿದೆ." ಇಲ್ಲಿ ನೆಲ ಕಾದರೆ ಈ ಕಾವಿನಿಂದ ನಿಜವಾಗಿ ಕಾಯುತ್ತಿರುವುದು ಜೀವ. ಅಂದರೆ ಭೂಮಿಯನ್ನೇ ನಂಬಿ ಬದುಕುತ್ತಿರುವ ಜೀವಿಗಳು. ಉರಿಬಿಸಿಲಿನ ಬೇಗೆಯಲ್ಲಿ ಬೆಂದ ನದಿಕೆರೆಗಳು ಬತ್ತಿ ಹೋಗಿವೆ. ಇದರಿಂದ ಕಂಗಾಲಾದ ನಾಡಿನ ಜನ ಕಂಬನಿಗರೆಯುತ್ತಿದ್ದಾರೆ. ಮುಂದೆ ಭೂಮಿಯ ಸ್ಥಿತಿ -"ಕರಿದಾರಿ ಕಳೆದರೆ ಕರೀ ಸಮುದ್ರ" ಇಲ್ಲಿ ಕರಿದಾರಿ. ಕರೀಸಮುದ್ರ ಈ ಪದಗಳೆ ನಾಶ ಸೂಚಕವಾಗಿವೆ. ಸಮುದ್ರಕ್ಕೆ ಅಸ್ತಿತ್ವ ಇಲ್ಲದೆ ಕರೀ ಸಮುದ್ರವಾಗಿದೆ. ಇಂತಹ ಸ್ಥಿತಿಯಿಂದ ಆಕಾಶ, ಭೂಮಿಗಳ ಕ್ರಿಯಾತ್ಮಕ ಸಂಬಂಧ ಇವುಗಳನ್ನು ಮುರಿದು ಬದುಕುವ ನಂಬಿ ಇವುಗಳ ಮಧ್ಯೆ ಜೀವಿಗಳು ಕಂಗಾಲಾಗಿ ಚಿಂತೆ, ಬೇಸರಿಕೆ, ಅಗಲಿಕೆ, ಅವರ ಪಾಲಿಗೆ ಆಕಳಿಕೆಯ ಗಳಿಗೆಗಳಾಗಿ ಕೊನೆಗೆ ಈ ದುರಂತ ಸ್ಥಿತಿಯಲ್ಲಿ ಊರಿನ ಜನ ಕೇರಿ ಹೋಗುತ್ತಿದ್ದಾರೆ. ತೂರಿ ಹೋಗುತ್ತಿದ್ದಾರೆ.

ಮತ್ತು ಭೂಮಿ, ಆಕಾಶಗಳ ನಡುವಿನ ಜೀವ ಸಂಬಂಧ ಹೀಗಿದೆಃ

ಬಾ
ನದಿಯೇ
ಸಮುದ್ರವಾಗುವ ಪರಿಯೇ
ಹನಿ ಹನಿ ಆವಿ
ಬೀಜ ಗಟ್ಟುವ ಮುಗಿಲೇ
ಕಣಿವೆ ಕಂದರ ನಾಡು
ತನಿ ತನಿ ಜೀವ
ಕುಣಿವ ಖಣಿಯೇ
ತಣಿಯೇ."9"

ಕವಿತೆ ಇಲ್ಲಿ ಭೂಮಿ, ಆಕಾಶಗಳ ನಡುವಿನ ಜೀವ ಸಂಬಂಧ ಈ ಮೂರರ ಸಾವಯವ ಸಂಬಂಧ ಬೆಸೆಯುವ ನಿಸರ್ಗ ಜಗತ್ತನ್ನು ಆಹ್ವಾನಿಸುತ್ತಿದೆ. ಪ್ರಕೃತಿ ವಿಕೋಪದಿಂದಾದ ಪ್ರಕೃತಿ ಪರಿಸರ ಮತ್ತು ಮಾನವ ಪರಿಸರಗಳನ್ನು ಒಟ್ಟೊಟ್ಟಿಗೆ ಕಾಣುವ ಕವಿಯ ದೃಷ್ಟಿಯೇ ನಮ್ಮ ಇಂದಿನ ಸ್ಥಿತಿ. ಈ ನಿಸರ್ಗದ ಪ್ರಜ್ಞೆ ಕವಿಯಲ್ಲಿ ಮಡುಗಟ್ಟಿರುವುದನ್ನು ಈ ಪದ್ಯದಲ್ಲಿ ಕಾಣುತ್ತೇವೆ.

ಮುಂದಿನ ಪದ್ಯ 'ವಸಂತ ವರ್ಣನೆ' ಇದರ ವಿಶ್ಲೇಷಣೆಯನ್ನು ಹೀಗೆ ಮಾಡಬಹುದುಃ ಯಾವುದೆ ಪದ್ಯ ಹಲವಾರು ದೃಷ್ಟಿ, ಹಲವು ಮುಖಗಳನ್ನೊಳಗೊಂಡು ಸೃಷ್ಟಿಯಾಗಿರುತ್ತದೆ. ಇಂತಹ ದೃಷ್ಟಿಕೋನದ ಪದ್ಯ ಈ 'ವಸಂತ ವರ್ಣನೆ'. 10ನೇ ಶತಮಾನದ ಪಂಪನಿಂದ 20ನೇ ಶತಮಾನದ ತಾಳ್ಯರವರೆಗೆ ವಸಂತ ಋತುವನ್ನು ಕುರಿತು ಹಾಡದ ಕವಿಯಿಲ್ಲ ಹಾಗೂ ಈ ಕವಿಗಳ ಕಾಲ ಮತ್ತು ದೃಷ್ಟಿಯನ್ನೊಳಗೊಂಡು ಸೃಷ್ಟಿಯಾದ ಕಾವ್ಯಗಳು ನಮಗೆ ಇಂದು ಕಾಣಸಿಗುತ್ತವೆ. ತಾಳ್ಯರ ಕಾಲ ಮತ್ತು ದೃಷ್ಟಿಯಲ್ಲಿ 'ವಸಂತ ವರ್ಣನೆ' ಹೇಗೆ ಮೂಡಿದೆ ಎಂಬುದನ್ನು ವಿಶ್ಲೇಷಿಸಬಹುದು.

ಈ ಪದ್ಯವನ್ನು ಎರಡು ಮುಖಗಳಿಂದ ನೋಡಬಹುದು.

1) ವರ್ಗ ಸಂಘರ್ಷದಿಂದ ಸಂಪನ್ಮೂಲ ಹಂಚಿಕೆಯ ತಾರತಮ್ಯದಿಂದಾದ ಸ್ಥಿತಿ.
2) ಈ ಸಂಪನ್ಮೂಲಗಳ ದುಂದು ಬಳಕೆಯಿಂದಾದ ದುಸ್ಥಿತಿ.

ಈ ಎರಡು ಸ್ಥಿತಿಗಳು ಈ ಸಮಾಜದ ಪರಿಸರದಲ್ಲಿ ನಿರಂತರವಾಗಿ ಸಾಗುತ್ತಿವೆ. ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಮುಂದುವರಿದ ಜನ ವರ್ಗ, ಈ ರಾಷ್ಟ್ರದ ಎಲ್ಲ ಸಂಪತ್ತನ್ನು ತಮ್ಮ ಹಿಡಿತಕ್ಕೊಳಪಡಿಸಿಕೊಂಡವರು. ಇವರು ಕಂಡ ವಸಂತ ಈ ಕಾವ್ಯದಲ್ಲಿ ಹೀಗೆಃ

ಕೈಲಿ ಹಿಡಿದ ಕಬ್ಬಿನ ಜಲ್ಲೆ
ಕಣ್ಣೊಳಗೆ ಬೆಳಗಿನ ತಂಪು ಚಂದ್ರ
ಎಲೆ ಎಲೆಗೂ ಅರಳಿದ ಹೂವಿನ ಬೇವು
ಮೈ ತುಂಬ ಹೊದ್ದ ಕೆಂದಳಿರ ಮಾವು
ದುಂಬಿಗಳ ಸಂಭ್ರಮದ ಹಾಡು
ಹರಿವ ನದಿಗಳ ಬಳುಕು
ಸುರಿವ ಸುಗಂಧದ ಕೆಂಪು
ಹಸಿರು ತುಂಬಿ ಕಣಿವೆ ತಳದಿಂದಲೂ
ಮೇಲೆದ್ದು ಮುದ್ದಿಸುವ ಪರ್ವತ ಶಿಖರ."10"

ಇದು ಉಳ್ಳ ಜನರು ಕಂಡ ವಸಂತನ ವರ್ಣನೆ "ಕೆಲವರು ವಸಂತ ಬಂದು ಹೋದದ್ದರ ಬಗ್ಗೆ ಹೇಳಿದರು". ಈ ಮಾತೆ ಭೂತಕಾಲದ ಮಾತಾಗಿದೆ. ಹಾಗಾಗಿ ಈ ಉಳ್ಳ ಜನರ ವರ್ಣನೆಯ ವಸಂತ; ಕಂಡಿದ್ದಲ್ಲ, ಕೇಳಿದ್ದು. ಇಲ್ಲಾ ಓದಿದ್ದಿರಬಹುದು. ಇವರು ಕಂಡಿದ್ದರೆ; ಇವರ ಮನೆಯೊಳಗಿನ ಕುಂಡದ ಕೈತೋಟ. ಇವರ ವರ್ಣನೆ ವಸಂತನ ರೂಪದರ್ಶನದಂತಿದ್ದರೂ, ವರ್ತಮಾನದ್ದಲ್ಲ ಭೂತಕಾಲದ್ದು ಯಾಕೆಂದರೆ ವಸಂತನಿಗೆ ತಾರತಮ್ಯವಿಲ್ಲ. ಬಂದರೆ ಎಲ್ಲರಿಗೂ ದರ್ಶನ ನೀಡುತ್ತಾನೆ. ಹಾಗಾಗಿ 'ಕೆಲವರ' ವಸಂತ ವರ್ಣನೆ ಕೇಳಿ ಬಹು ಸಂಖ್ಯಾತರು ಕಂಗಾಲಾಗುತ್ತಾರೆ. ಈ ಕಂಗಾಲಾದ ಜನ ವಸಂತನಿಗಾಗಿ ಮ ಕಾದು ಕುಳಿತ ಸ್ಥಿತಿಯನ್ನು ಕವಿತೆ ಹೀಗೆ ವರ್ಣಿಸುತ್ತದೆ.

ವರ್ಷ ವರ್ಷವೂ ಕಾದಿತ್ತು
ನಮ್ಮ ಅಂತಃಕರಣ
ಅವನೆಲ್ಲಿ ಬಂದ
ಕೆಸರಿನ ನಮ್ಮ ರಸ್ತೆಗಳಿಗೆ

ಬರಸುರಿದ ನಮ್ಮ ತಟ್ಟೆಯೊಳಗೆ
ದುಃಖ ತುಂಬಿದ ಕಣ್ಣಗೂಳಿಯೊಳಗೆ
ಮನದ ಕತ್ತಲ ಮೂಲೆಗಳಿಗೆ
ಬಿತ್ತಿದ ಮೊಲೆಗಳಿಗೆ
ಸುಕ್ಕುಗಟ್ಟಿದ ಚರ್ಮದ ಬಳಿಗೆ."11"

ಹೀಗೆನ್ನುವ ವರ್ಗ ಎಲ್ಲಾ ರೀತಿಯಲ್ಲೂ ಹಿಂದುಳಿದ, ಜನ ಈ ವರ್ಗಕ್ಕೆ ತುತ್ತು ಕೂಳಿಗೂ ಗತಿಯಿಲ್ಲದ ಸ್ಥಿತಿ. ಇದು ಈ ಮಾನವ ಸಮಾಜದ ತಾರತಮ್ಯ ಪರಿಸರ. ಆದ್ದರಿಂದಲೇ ಈ ಬಡವರಿಗೆ ವಸಂತನನ್ನು ಕಾಣಲಾಗುತ್ತಿಲ್ಲ. ಇತರ ಕವಿಗಳು ವಸಂತನನ್ನು ಕಂಡು ಹಾಡಿ ಹೊಗಳಿದ್ದು ವಸಂತನನ್ನು ಮಾತ್ರ, ಆದರೆ ಒಂದು ವರ್ಗದ ಈ ಕವಿ ಈ ಸಮಾಜದ ಜನರು ಕಂಡ, ಕಾಣಲಾರದ ವಸಂತನನ್ನು ಕುರಿತು ಬರೆಯುತ್ತಾನೆ.

ಇಲ್ಲಿ 'ಉಳ್ಳವರು' ಕಂಡ ವಸಂತ ಅವರ ಸುಖ, ಸಂತೋಷ ನೆಮ್ಮದಿಯ ಸಂಕೇತವಾಗಿದೆ. 'ಇಲ್ಲದವರು' ವಸಂತನ ನಿರೀಕ್ಷಣೆಯ ಆಶಾವಾದಿತನದಲ್ಲೆ ದುಃಖದುಮ್ಮಾನದಿಂದ ಕಂಗಾಲಾಗಿದ್ದಾರೆ ಇವರನ್ನು ನೋಡಿ ಹಾಸ್ಯ ಮಾಡುತ್ತ ಉಳ್ಳವರು ನಗುತ್ತಾರೆ.

'ಕೆಲವರು ' ನಕ್ಕರು
ನಮ್ಮಿ ಕುರುಡು ತನಕ್ಕೆ
ಮುಕ್ಕಣ್ಣು ತೆರವ ಹೊತ್ತದು
'ನಾವು' ನಗಲಿಲ್ಲ."12"

ಈ ಭಾಗದಲ್ಲಿ ಶೋಷಣೆಯ ವಿರುದ್ಧದ ಎಚ್ಚರಿಕೆಯ, ಸಮಾಜ ಪರಿಸರದ ಪ್ರಜ್ಞೆ ಮೂಡಿದೆ. ಇಲ್ಲದ ಈ ಬಡ ವರ್ಗಕ್ಕೆ ಆ ಹೊತ್ತೆ 'ಮುಕ್ಕಣ್ಣು ತೆರೆದ ಹೊತ್ತು'. ಈ ಮುಕ್ಕಣ್ಣು ಶೋಷಣೆಯ ವಿರುದ್ದದ್ದು. ಈ ಶೋಷಣೆಯ ನಾಶಕ್ಕಾಗಿ ಬಂದದ್ದು. ಈ ಮುಕ್ಕಣ್ಣು ಬಡ ಜನರ ಶಿವ, ಪ್ರಜ್ಞಾಪೂರ್ಣವಾಗಿ ಸಿಡಿದೆದ್ದ ವಿಶೇಷ ಶಕ್ತಿಯ ಪ್ರತೀಕ. ಕವಿಯ ಬಂಡಾಯ ಮನೋಧರ್ಮದ, ಮನುಷ್ಯ ಸಮಾಜ ಪರಿಸರದ ಸಂವಾದ ಈ ಪದ್ಯದಲ್ಲಿ ಕಟ್ಟಿದಂತಿದೆ.

ಈ ಪದ್ಯದ ಇನ್ನೊಂದು ದೃಷ್ಟಿಯನ್ನು ಸಂಪನ್ಮೂಲಗಳ ದುಂದು ಬಳಕೆಯಿಂದಾದ ದುಸ್ಥಿತಿಯ ಆಧಾರದ ಮೇಲೆ ವಿಶ್ಲೇಷಿಸಬಹುದು. ಈ ಕವನದಲ್ಲಿ ನಿಸರ್ಗ ಸಂಪತ್ತಿನ ತಾರತಮ್ಯ ಹಂಚಿಕೆಯಿಂದಾದ ಸ್ಥಿತಿಯನ್ನು ಕಾಣುತ್ತೇವೆ. ಈ ಕವನದ 'ಕೆಲವರು' ಸಂಪನ್ಮೂಲ ಬಳಕೆದಾರ ಉದ್ಯಮಿಗಳು. ಇವರು ಕಂಡ ವಸಂತ ಎಲ್ಲಿಯವನೆಂದರೆ -ಕಬ್ಬು, ಬೇವು, ಮಾವು, ನದಿ, ಕಣಿವೆ, ಪರ್ವತ ಶಿಖರಗಳ ಸಂಪತ್ತಿನ ಸ್ಪರ್ಧಾನುಭವದಲ್ಲಿ. ಇವರು "ವಸಂತ ಬಂದು ಹೋದದ್ದರ ಬಗ್ಗೆ ಹೇಳಿದರು". ಈ ನಿಸರ್ಗ ಸಂಪತ್ತಿನ ವಸಂತ ಇವರ ಕಾರ್ಖಾನೆಗಳ ಬಳಕೆಗೆ ಬಂದು ಇವರ ಕಾರ್ಖಾನೆಗಳಲ್ಲಿ ಲೀನವಾಗಿ ಹೊದದ್ದನ್ನು ಕುರಿತು ಹೇಳಿದ್ದಾರೆ". ಹಾಗಾಗಿ ಇಲ್ಲಿ 'ವಸಂತ ಬಂದು ಹೋದ' ಎಂಬಲ್ಲಿ ಕವಿಯ ವ್ಯಂಗ್ಯ ಕಾಣುತ್ತೇವೆ.

ಬಹುಸಂಖ್ಯಾತರು ನಿಸರ್ಗಸಂಪತ್ತಿನ ಅನುಭವದಿಂದ ವಂಚಿತರಾದವರು. ಇವರು ವಸಂತನನ್ನು ಕಾಣಲಾಗದೆ ಕಂಗಾಲಾಗಿದ್ದಾರೆ. 'ಅವನೆಲ್ಲಿ ಬಂದ' ಎಂಬ ಧ್ವನಿಯಲ್ಲೆ ನೊಂದು ಬೆಂದವರ, ಹಸಿರು ಕಾಣದ, ಲಯವಿಲ್ಲದ ಬಹುಸಂಖ್ಯಾತರಲ್ಲಿ ವಿಶಾದದ, ನಿರಾಶಾ ಧ್ವನಿ ತುಂಬಿದೆ. ಇವರಿಗೆ ಗೊತ್ತು; "ಕೆಸರಿನ ನಮ್ಮ ರಸ್ತೆಗೆ, ಬರಸುರಿದ ನಮ್ಮ ತಟ್ಟೆಗೆ, ಬತ್ತಿದ ಮೊಲೆಗೆ, ಸುಕ್ಕುಗಟ್ಟಿದ ಚರ್ಮದ ಬಳಿಗೆ ಈ ವಸಂತ ಬರಲಾರ ಎಂದು. ಈ ನಿರಾಶೆಯ ಆತಂಕದಿಂದ 'ಮುಕ್ಕಣ್ಣು ತೆರೆವ ಹೊತ್ತಿನಲ್ಲಿ' ಅವರ ನಾಶದ ಅರಿವಿದ್ದು ಕಂಗಾಲಾಗುತ್ತಾರೆ. ಆದರೆ ಅನುಭವದ ಮತ್ತಿನಲ್ಲಿ 'ಕೆಲವರು' ನಕ್ಕರು. ಇವರ ಸಂತೋಷದ

ಗುಂಗಿನಲ್ಲಿ , ಮುಕ್ಕಣ್ಣು ತೆರೆವ ಹೊತ್ತಿನಲ್ಲಿ, ಅವರ ನಾಶದ ಅರಿವಿಲ್ಲ. ಆದ್ದರಿಂದ "ನಮ್ಮ ಕುರುಡು ತನಕ್ಕೆ ಕೆಲವರು ನಕ್ಕರು" ಎಂಬಲ್ಲಿ ವ್ಯಂಗ್ಯವಿದೆ. ಇಲ್ಲಿಯ 'ಕುರುಡು' ಅನುಭವಿಗಳಾದ ಕೆಲವರಿಗೆ. 'ಇಲ್ಲದ' ಬಹುಸಂಖ್ಯಾತರಿಗಲ್ಲ. ಇಲ್ಲಿ ನಿಸರ್ಗ ಪ್ರಜ್ಞೆ ಬಹುಸಂಖ್ಯಾತರಿಗೆ ಇದ್ದರೂ ಬಡಜನರಾದ ಇವರು ನಿಸ್ಸಹಾಯಕರು. ಸಾಮರ್ಥ್ಯ ಇರುವ ಉಳ್ಳ 'ಕೆಲವರು'; ಇವರು ಪರಿಸರದ ಪ್ರಜ್ಞೆ ಇಲ್ಲದವರು.

ತಾಳ್ಕರ ಮುಂದಿನ ಕವನ 'ಕೊನೆಯ ಹಾಡು'. ಇಲ್ಲಿಯ ಕೊನೆಯ ಹಾಡು ಮನುಷ್ಯನಿಗಷ್ಟೆ ಅಲ್ಲ. ಇದು ಎಲ್ಲಾ ಜೀವರಾಶಿಗಳನ್ನೊಳಗೊಂಡ ಜಗತ್ತಿನ ಕೊನೆಯ ಹಾಡಾಗಿದೆ. ಈ ಕವನದಲ್ಲಿ ಕವಿ ತನ್ನ ಮುಂದಿನ ತಲೆಮಾರಿಗೆ ಬಳುವಳಿಯ ಪಟ್ಟಿಯನ್ನಿಡುತ್ತಾರೆ.

ಬರುಡು ಪರ್ವತಗಳನ್ನು
ಪಂಜರದ ಬೇರುಗಳನ್ನೂ
ಹಕ್ಕಿಯ ಶವಗಳನ್ನೂ
ಬತ್ತಿದ ಹೊಳೆಗಳನ್ನೂ "13"

ಈ ನಿಸರ್ಗದ ಸಂಪತ್ತನ್ನೆಲ್ಲ ಉಪಯೋಗಿಸಿದ ಈ ಸಮಾಜದ ಬಗ್ಗೆ ಇಲ್ಲಿ ವ್ಯಂಗ್ಯವಿದೆ. ಇಲ್ಲಿ ಹೊಳೆ, ಪರ್ವತ, ಪ್ರಾಣಿ -ಪಕ್ಷಿ , ಕಾಡೆಲ್ಲ ನಿಸರ್ಗದ ಜೀವಂತ ಸಂಪತ್ತು. ಇವಿಲ್ಲದೆ ಮಾನವನ ಜೀವನವಿಲ್ಲ. ಹಾಗಾಗಿ ಬರಿದಾದ ಸತ್ವವಿಲ್ಲದ ಬಳುವಳಿಯಿಂದ ಮುಂದಿನ ತಲೆಮಾರಿನ ಕೊನೆಗಾಲವನ್ನು ಕವಿತೆ ಇಂದೆ ತೀರ್ಮಾನಿಸುತ್ತಿದೆ.

ಅನ್ನ ಅಡವಿಟ್ಟ ಕಾರ್ಖಾನೆಗಳನ್ನೂ
ನೆಲದ ಅಂಗಾಲು ಗೊಬ್ಬೆಗಳನ್ನೂ
ಅಂಗೈ ತುಂಬಿದ ಕೀವು ರಸವನ್ನೂ

ತಲೆ ಎತ್ತಿ ತಲೆ ಕಡಿದ ಕುಡುಗೋಲು ಕೊಡಲಿಗಳನ್ನೂ
ವಾಯು ಮಂಡಲ ತಿಂದುಗಿದ ವಿಷವನ್ನೂ
ಕಣ್ಣ ದೊಕರಲ್ಲಿ ಕತ್ತಲು ಸುತ್ತಾಡುವ ಅಂಗಳವನ್ನೂ
ಮನದ ಸುಡು ಬಯಲ ಬೂದಿಗನಸುಗಳನ್ನೂ"14"

ಇಲ್ಲಿ ಕಾರ್ಖಾನೆಗಳು ತಿನ್ನುವ ಅನ್ನವನ್ನು ಒತ್ತೆ ಇಟ್ಟುಕೊಂಡಿವೆ ಎಂದು ಕವಿತೆ ಮರುಗುತ್ತಾ; ಕಾರ್ಖಾನೆಗಳ ಗುಣ, ಸ್ವಭಾವವನ್ನು ಈ ಪುಟ್ಟ ಸಾಲಿನಲ್ಲಿ ಹಿಡಿದಿಟ್ಟಿದೆ. ಅಮಾನವೀಕರಣಗೊಳ್ಳುವ ಕೈಗಾರಿಕೆಗಳನ್ನು ವಿಡಂಬಿಸುತ್ತಿದೆ. ಹಾಗಾಗಿ 'ಮನದ ಕನಸುಗಳೆಲ್ಲ ಬೂದಿಯಾಗಿದೆ'. ಇಂತಹ ತನ್ನ ಬದುಕಿನ ಪರಿಸರ ಕಂಡು ದಿಕ್ಕೇತೋಚದ ಕವಿ ಕಂಗಾಲಾಗಿದ್ದಾನೆ. ಇಲ್ಲಿ 'ಗೊಬ್ಬೆ, ಕೀವುರಸ', ಈ ಪದಗಳೆ ಕವಿಯ ನೋವಿನ ದುಸ್ಥಿತಿಯ ಪದಗಳಾಗಿವೆ. 'ಕುಡುಗೋಲು ಕೊಡಲಿ' ಗಳು ನಾಶದ ಸಂಕೇತಗಳು. ಭಯ ಭೀತಿ ಇಲ್ಲದೆ ತಲೆ ಎತ್ತಿ ಮರಗಳನ್ನು ಕಾರ್ಖಾನೆಗೆ ಉಣ ಬಡಿಸಿದ ಕುಡುಗೋಲು ಕೊಡಲಿಗಳನ್ನೂ ಬಳುವಳಿ ನೀಡುವುದರ ಮೂಲಕ ದುರಂತದ ಎಚ್ಚರಿಕೆಯನ್ನೂ ಕವಿ ಮುಂದಿನ ಪೀಳಿಗೆಗೆ ಹೇಳುತ್ತಿದ್ದಾನೆ.

ಈ ಬಳುವಳಿಗಳು ತಲೆಮಾರಿನಿಂದ ತಲೆಮಾರಿಗೆ ಹರಿದು ಬರುತ್ತಿವೆ.

ನನ್ನ ಹಿರಿಯರು ನನಗೆ ಬಳುವಳಿಯಿತ್ತ
ಗೆದ್ದಲ ಹಣ್ಣುಗಳನ್ನೂ

ನನ್ನವೇ ಆದ ಆಳದ ಹುಣ್ಣುಗಳನ್ನೂ
ಹುಳುತಿಂದ ಜಂತೆ ಸೋರು ಮನೆಗಳನ್ನೂ"15"

ಇಲ್ಲಿ ಕವಿತೆ ಅಪ್ಪ ಹಾಕಿದ ಆಲದ ಮರಕ್ಕೆ ನಾನು ನೇಣುಹಾಕಿಕೊಂಡೆ; ನಾನು ಹಾಕಿದ ಆಲದ ಮರಕ್ಕೆ ನೀನು ನೇಣು ಹಾಕಿಕೊಳ್ಳಬೇಡ ಎಂಬ ತಿಳುವಳಿಕೆಯನ್ನು ಪರೋಕ್ಷವಾಗಿ ನೀಡುತ್ತದೆ. ಹಿರಿಯರ ಬಳುವಳಿಗಳನ್ನೂ ಮುಂದಿನ ಮಗುವಿಗೆ ನೀಡುವುದರ ಮೂಲಕ ಈ ಪರಿಸರದ ದುರಂತದ ಒಂದು ಚರಿತ್ರೆಯನ್ನೇ ಕಟ್ಟುತ್ತದೆ.

ಕಾಲಾಂತರದ ವಿಶಾಲ ಗಗನದಲ್ಲಿ
ಹಾರು ಹಕ್ಕಿಯೊಂದ ಕಂಡರೆ
ಬಿಚ್ಚಿಟ್ಟುಕೋ ಬೆಚ್ಚಗಿರ ಬಹುದಾದ
ನಿನ್ನ ಎದೆ ಗೂಡಲ್ಲಿ
ಅಲ್ಲೆಲ್ಲಾದರೂ ನೆಲದ ಕನಸೊಂದು ಕಂಡರೆ
ಸಾಕಿ ಸಲಹುವ ಮೃದು ಕೈಗಳ ಪಡೆದುಕೋ"16"

ಈ ಭಾಗದಲ್ಲಿ 'ಹಾರು ಹಕ್ಕಿಯೊಂದ ಕಂಡರೆ ಬಚ್ಚಿಟ್ಟುಕೋ'; ಸಾಕಿ ಸಲಹುವ ಮೃದು ಕೈಗಳ ಪಡೆದುಕೋ ಎಂಬ ಸಾಲುಗಳು ನಿಸರ್ಗ ಪ್ರಜ್ಞೆಯ ಇಡಿಯಾದ ತಿಳುವಳಿಕೆಯನ್ನೂ ಆವಿರ್ಭವಿಸಿ ಕೊಂಡಿವೆ. ಇಲ್ಲಿ ನೆಲದ ಕನಸು ಹಕ್ಕಿಯದಷ್ಟೆ ಅಲ್ಲ; ಮನುಷ್ಯನದ್ದು ಕೂಡ. ಹಾಗಾಗಿ ಕವಿತೆ ಭೂಮಿ ಮೇಲೆ ಬದುಕಲು ಆಶಿಸುವವರಿಗೆ "ನಿನಗಾಗಿ, ನಿನ್ನ ಮುಂದಿನ ಕಾಲಕ್ಕಾಗಿ" ಸಾಕಿ ಸಲಹುವ ಮೃದು ಕೈಗಳ ಪಡೆದುಕೋ" ಎನ್ನುತ್ತಾ ನಿಸರ್ಗಸಂಪತ್ತನ್ನು ಪ್ರೀತಿಸಿ ಬಾಳುವ ಮನಸ್ಸನ್ನು ಪಡೆದುಕೊ ಎಂದು ಮುಂದಿನ ಪೀಳಿಗೆಗೆ ನಿಸರ್ಗ ಪರಿಸರದ ಗುಟ್ಟು ನೀಡುತ್ತಿರುವುದು ಯುಕ್ತವಾಗಿದೆ.

ಮುಂದಿನ ಕವಿ ಬಂಜಗೆರೆ ಜಯಪ್ರಕಾಶ. ಇವರ 'ಮಹೂವಾ' ಕವನ ಸಂಕಲನದ 'ಮಹೂವಾ' ಪದ್ಯವನ್ನು ಇಲ್ಲಿ ವಿಶ್ಲೇಷಿಸಬಹುದು. ಈ ಪದ್ಯ ನಾಲ್ಕು ವ್ಯವಸ್ಥೆಗಳಿಂದ ಮೈತಾಳಿರುವುದನ್ನು ಕಾಣುತ್ತೇವೆ. ಮೊದಲನೆಯ ಭಾಗದಲ್ಲಿ ನಿಸರ್ಗದ ಮತ್ತು ಪ್ರಕೃತಿಯ ಸಾಕ್ಷಾತ್ಕಾರ ಕಂಡರೆ; ಎರಡನೆ ಭಾಗದಲ್ಲಿ ಅನ್ನ ಬಟ್ಟೆಗೂ ಗತಿ ಇಲ್ಲದೆ ನಿಸರ್ಗ ತಾಯಿಯ ಮಡಿಲಲ್ಲಿ ಬಾಳಿ ಬದುಕುತ್ತಿರುವ ಜನ ವರ್ಗವಿದೆ. ಮೂರನೆಯದರಲ್ಲಿ ಮೊದಲೆರಡರ ಸಂಬಂಧವನ್ನು ಬೇರ್ಪಡಿಸಿ ಉಳ್ಳ ವರ್ಗದವರಿಗೆ 'ಇಲ್ಲದ' ನಿರ್ಗತಿಕರ ಅನ್ನವಾದ ಅರಣ್ಯ ಸಂಪತ್ತು ಮತ್ತು 'ಮಹೂವಾ' ವನ್ನು ಕಿತ್ತು ಕೊಡುವ ಕಟುಕ ಸರ್ಕಾರವಿದೆ. ಅದರ ಅಟ್ಟ ಹಾಸದಿಂದ ಕರುಳು ಕರಗುವ ಹೃದಯಂಗಮ ಚಿತ್ರವಿದೆ. ನಾಲ್ಕನೆ ಭಾಗದಲ್ಲಿ ಈ ವ್ಯವಸ್ಥೆಯನ್ನು ಸಹಿಸದ ವಂಚಿತವರ್ಗ ಸರ್ಕಾರದ ಈ ವ್ಯವಸ್ಥೆಯ ವಿರುದ್ಧ ಸಮರ ಸಾರಿ ಹೋರಾಡುತ್ತಿರುವ ಚಿತ್ರವಿದೆ.

ಈ ಕವನದ ಹಲವು ಮುಖಗಳಲ್ಲಿ ವರ್ಗಹೋರಾಟ ತತ್ವ ಒಂದಾಗಿದೆ. ಈ ದೃಷ್ಟಿಯಲ್ಲಿ 'ಉಳ್ಳವರ' ವಿರುದ್ಧ 'ಇಲ್ಲದ'ವರು ಮಾಡುವ ಶೋಷಣೆಯ ವಿರುದ್ಧ ತಮ್ಮ ಅಸ್ಥಿತ್ವದ ಹೋರಾಟದ ನೆಲೆಯನ್ನು ಈ ಕಾವ್ಯ ಹುದುಗಿಸಿಕೊಂಡಿವೆ. ಇಡಿ ಈ ಸಮಾಜ ವ್ಯವಸ್ಥೆಯಲ್ಲಿ ವರ್ಗ ವರ್ಗಗಳೊಳಗಿನ ಸಂಘರ್ಷಕ್ಕೆ ಸಿಕ್ಕಿ ನಿಸರ್ಗ ಪರಿಸರ ಹಾಗೂ ಮಾನವ ಪರಿಸರದ ಸರ್ವನಾಶ ಇತ್ಯಾದಿ ಅಂಶಗಳನ್ನೊಳಗೊಂಡ ಈ ಸಮಾಜ ವ್ಯವಸ್ಥೆಯ ಸಂಕೀರ್ಣ ಸಂಬಂಧವನ್ನು ಈ ಕಾವ್ಯ ಹುದುಗಿಸಿಕೊಂಡಿದೆ.

ಇಂತಹ ಹಲವಾರು ಅಂಶಗಳಿಂದ ಈ ಪದ್ಯದ ವಿಶ್ಲೇಷಣೆ ಮಾಡುವುದಾದರೆ; ಕವಿತೆ ಮೊದಲಿಗೆ ಅಡವಿಯ ಭವ್ಯತೆಯನ್ನು ಬಗೆದಿಡುತ್ತದೆ. ಆ ಅಡವಿಯಲ್ಲಿ ಹಸಿರು ಗಿಡಮರಗಳು ತುಂಬಿರುವುದು ಕವಿಯ ಕಣ್ಣಿಗೆ "ನೆಲತಾಯಿ ಚೈತ್ರ ಜಾತ್ರೆಯ ತೇರು" ಆಗಿ ಕಾಣುತ್ತದೆ. ಇಲ್ಲಿ ಆನಂದದ ಹೊನಲಿನಿಂದ ಅಡವಿಯ ನಗು ಕವಿಗೆ ಹೃದಯ ತುಂಬುತ್ತದೆ. "ಎದೆ ತುಂಬಿ ನಕ್ಕರೆ ಅಡವಿ ತಾಯಿ ಹೊಳೆದವೇನೋ ಹಲ್ಲು". ಇಲ್ಲಿ "ಎದೆ ತುಂಬಿದ ನಗು" ಮಹೂವಾ ಹೂ ಅರಳಿರುವುದು. ಇವು ಕವಿಗೆ ಅಡವಿತಾಯಿಯ ನಗುವಿನಲ್ಲಿ ಕಂಡ ಹಲ್ಲುಗಳಾಗಿವೆ.

ಇಂತಹ ಅಡವಿಯ ಮಡಿಲಲ್ಲಿ ಹುಟ್ಟಿ ಬೆಳೆದ ಜನರ ಮೂಲಭೂತವಾದ ಅನ್ನ, ಬಟ್ಟೆಯಂತಹ ಸಮಸ್ಯೆಯ ಸ್ಥಿತಿಗತಿಯನ್ನು ಕವಿ ಕಟ್ಟಿಕೊಡುವುದು ಹೀಗೆ:

'ತರಬಾರದೆ ಹಾಳಾದ್ದು ಆ ಹೂವಾದರೂ'
ನಿಟ್ಟುಸುರುತ್ತಾಳೆ ಚಿಂದಿಯುಟ್ಟ ದ್ರೌಪದಿ
ಹೂವ ಬಯಸಿದ ಆಸೆ
ನಾಸಿಕಾಗ್ರದ್ದಲ್ಲ,
ಉದರ ಮೂಲದ್ದು ಕಂಗೆಟ್ಟ ಕರುಳು ಬಳ್ಳಿ
ಕಣ್ಣೀರಿಂದ ಚಿಗುರಿದ್ದು"17"

ಹಸಿವಿನ ಬವಣೆಯಲ್ಲಿಯ ಈ ಜನಕ್ಕೆ 'ಮಹೂವಾ' ಜೀವನಾಡಿಯಾಗಿದೆ. ಹಾಗಾಗಿ ಈ ಹೆಣ್ಣಿನ ಬವಣೆ ಅನ್ನ ಮೂಲದ್ದಾಗಿದೆ. ಆದ್ದರಿಂದ ಈ ಹೆಣ್ಣಿನ ಹೂವಿನ ಬಯಕೆ 'ನಾಸಿಕ್ರಾಗದ್ದಲ್ಲ' ಉದರ ಮೂಲದ್ದು'. ಎನ್ನುವ ಕವಿತೆ ಅಸಹಾಯಕ ಜನರ ಹಸಿವಿನ ತೀವ್ರತೆಯ ಸ್ಥಿತಿಯದಾಗಿದೆ. 'ನಾಸಿಕಾಗ್ರದ್ದಲ್ಲ' ಎನ್ನುವಲ್ಲಿ ಶ್ರೀಮಂತರ ವೈಭೋಗದ ಜೀವನದಲ್ಲಿ ಸುಗಂಧದ್ರವ್ಯದ ಆಸ್ವಾದನೆಗಾಗಿ ಹಾಗೂ ಅಸ್ವಾಭಾವಿಕವಾದ ತೋರಿಕೆಯ ಬಾಹ್ಯ ಮೂಲಕ್ಕಾಗಿ ಬಯಸಿದ್ದಲ್ಲ ಎನ್ನುವ ಕವಿಯ ಮಾತು ವ್ಯಂಗ್ಯ ಛಾಯೆಯದ್ದಾಗಿದೆ. ಹಾಗೆಯೇ 'ಉದರ ಮೂಲದ್ದು' ಎನ್ನುವಲ್ಲಿ ಹಸಿವಿನ ಸ್ವಾಭಾವಿಕ ಸತ್ಯವಿದೆ. ನಾಸಿಕಾಗ್ರ, ಉದರಮೂಲ, ಕರುಳು, ಕಣ್ಣೀರು ಈ ಪದಗಳು ಮಾನವನ ಆಂಗಿಕಪದಗಳು. ಕವಿ ಈ ಆಂಗಿಕಪದಗಳಲ್ಲೆ ಈ ಸಮಾಜದ ವರ್ಗ ಕ್ರಿಯೆಗಳನ್ನು ಹಿಡಿದಿಟ್ಟಿರುವುದು ಅಪೂರ್ವವಾದುದ್ದಾಗಿದೆ. ಇಲ್ಲಿ ನಾಸಿಕಾಗ್ರ ಉಳ್ಳವರ್ಗದ ಕ್ರಿಯೆಯಾದರೆ; ಉದರ ಮೂಲ, ಕರುಳು, ಕಣ್ಣೀರು ಪದಗಳ ಕ್ರಿಯೆ, ಇಲ್ಲದ ವರ್ಗದವರ ಕ್ರಿಯೆಯಾಗಿ ವ್ಯಕ್ತವಾಗಿರುವುದನ್ನು ಕಾಣುತ್ತೇವೆ.

ಅನ್ನ ಬಟ್ಟೆಗೆ ಗತಿ ಇಲ್ಲದ ಈ ವರ್ಗಕ್ಕೆ "ಹಗಲೆಂದರೆ ಹಾಳು ಹೊಟ್ಟೆ ನಿತ್ಯ ದೂರ್ವಾಸಾತಿಥ್ಯ ಪರೀಕ್ಷೆ" ಎನ್ನುವ ಮಾತು ಅನುಭವ ಪೂರ್ಣ ಸಂವಾದವಾಗಿದೆ. ಈ ಜನಕ್ಕೆ ಹಗಲೆಂದರೆ ಬಂಜೆತನದ ಹಾಳು ಹೊಲದಂತೆ ಹಾಳು ಹೊಟ್ಟೆಯಾಗಿದೆ. ಈ ಸ್ಥಿತಿಯ ಹೆಣ್ಣಿಗೆ 'ಮಕ್ಕಳು ಮರಿ ಹೊಟ್ಟೆ ಹೊರೆಯೋ ಶಿಕ್ಷೆ' ಇಲ್ಲಿ ತಾಯಿ ಮಕ್ಕಳ ಸಂಬಂಧ ಆನಂದದ ಪವಿತ್ರ ಫಲ. ಆದರೆ ಈ ಹೆಣ್ಣಿಗೆ ಮಕ್ಕಳು ಮರಿ ಸಾಕುವುದೆ ಒಂದು ಶಿಕ್ಷೆಯಾಗಿ ಪರಿಣಮಿಸಿದೆ. ಇದು ಈ ಜನರ ದುಸ್ಥಿತಿ. ಹಾಗಾಗಿ ಈ ಹೆಣ್ಣಿನ ಸ್ಥಿತಿಗೆ, ಇವಳ ಅಸಹಾಯಕತೆಗೆ ಸಹಾಯಕರಾರೆಂದು ಪ್ರಶ್ನಿಸುವ ಕವಿಯ ಮಾತು:

ಇವಳಿಗೆಲ್ಲಿ
ಕಷ್ಟದಿ ಕೃಷ್ಣೆಗೊದಗುವ ಕೃಷ್ಣ ಸಹಾಯದ ರಕ್ಷೆ. "18"

ಈ ಸಾಲುಗಳಲ್ಲಿ ಈ ಸಮಾಜದ ಜನರ, ಮತ್ತು ಸರ್ಕಾರ ಧೋರಣೆಯ ವ್ಯಂಗ್ಯವಿದೆ. ಹೇಗೆಂದರೆ ಕೃಷ್ಣೆಯ ಕಷ್ಟಕಾಲದಲ್ಲಿ ಸಮಾಜವಿರಲಿ ಅವಳ ಗಂಡಂದಿರೆ ಸಹಾಯಕ್ಕೆ ಬಾರದಿದ್ದಾಗ ರಕ್ಷಕನಾಗಿ ಬಂದವನು ಕೃಷ್ಣ. ಆದರೆ ಈ ಹೆಣ್ಣಿನ ಪಾಲಿಗೆ ಅಂತಹ ದೈವಿ ಪುರುಷರ ಸಹಾಯ ಎಲ್ಲಿಂದ ಬರಬೇಕು? ಪ್ರಜಾರಕ್ಷ ಸರ್ಕಾರವೆ ಈ ಜನರ ಪಾಲಿಗೆ "ಶಿಕ್ಷಾ ಸರ್ಕಾರ" ವಾಗಿದೆ. ಹಾಗಾಗಿ ಇವಳಿಗ್ಲೆಲಿ ಸಹಾಯ ರಕ್ಷೆ ಎನ್ನುವ ಕವಿಯ ಸ್ವಗತದಲ್ಲಿ ಈ ಕಾಲದ ಮನುಷ್ಯ ಸಮಾಜ ಪರಿಸರದ ಕವಿಯ ಸಂವೇದನೆ ಅಭಿವ್ಯಕ್ತಿಯಾಗಿದೆ.

"ಸಾಹಿತಿ ತನ್ನ ಅನುಭವವನ್ನು ಸಮರ್ಥವಾಗಿ ಹೇಳಲು ಅನೇಕ ವೇಳೆ ತತ್ವಶಾಸ್ತ್ರ ಪುರಾಣ, ಮಃಶಾಸ್ತ್ರಗಳ ಮೊರೆ ಹೋಗುತ್ತಾನೆ". ಎನ್ನುವ ಮಾತು ಹಿಂದೆಬಂದಿದೆ. ಈ ಮಾತಿಗೆ ಪೂರಕವಾಗಿ ಕವಿ ಈ ಕವನದಲ್ಲಿ ಪುರಾಣ ಪಾತ್ರಗಳ ಮೂಲಕ ಈ ಸಮಾಜದ ಸ್ಥಿತಿಗತಿಗಳನ್ನು ಅಭಿವ್ಯಕ್ತಿಗೊಳಿಸುತ್ತಾರೆ. ಕಾವ್ಯ ಕ್ರಿಯೆಯ ಪುರಾಣ ಪಾತ್ರಗಳ ಸಾಲು ಇಂತಿವೆ.

ಚಿಂದಿಯುಟ್ಟ ದ್ರೌಪದಿ
ನಿತ್ಯ ದೂರ್ವಾಸಾತಿಥ್ಯ ಪರೀಕ್ಷೆ
ಕಷ್ಟದಿ ಕೃಷ್ಣೆಗೊದಗುವ ಕೃಷ್ಣ ಸಹಾಯ ರಕ್ಷೆ
ಭೀಮನಿಗೆ ನಿತ್ಯ ಪರಿಭ್ರಮಣ ಪಥ!
ಎಲ್ಲೆಲ್ಲಿಯವರೋ ಯಕ್ಷ ಕಿನ್ನರ ಗಂಧರ್ವಾಕ್ರಿಮಿತ '18"

ಮುಂದೆ ಪುರಾಣ ಪಾತ್ರದಲ್ಲೆ ಕವಿ; ಹೆಣ್ಣಿನ ಸಹಾಯಕ್ಕೆ ಗಂಡನೆ ನೆರವಾಗಲು ಹೋಗಿ, ಆ ಗಂಡು ಕೂಡ ಅಸಹಾಯಕ ಸ್ಥಿತಿಗೊಳಪಡುವ ಸ್ಥಿತಿಯನ್ನು ಅಭಿವ್ಯಕ್ತಿಗೊಳಿಸಿರುವುದು ಹೀಗೆಃ

"ನಲ್ಲೆಯ ಬಯಕೆ ಬಗೆಹರಿಸುವ ಶಪಥ
ಭೀಮನಿಗೆ ನಿತ್ಯ ಪರಿಭ್ರಮಣ ಪಥ!""19"

ಇಲ್ಲಿ ಹೂ ಕೊಯ್ಯಲು ಬಂದ ಗಂಡಿನ ಸ್ಥಿತಿಯ ಅಭಿವ್ಯಕ್ತಿ "ಭೀಮನಿಗೆ ನಿತ್ಯ ಪರಿಭ್ರಮಣ ಪಥ!" ಎಂಬಲ್ಲಿ ಸಾರ್ಥಕಗೊಂಡಿದೆ. ಹೆಂಡತಿಯ ಹಸಿವಿನ ಬಯಕೆ ಪೂರೈಸುವ ಗಂಡ ನಿತ್ಯ ಪರಿಭ್ರಮಿಸಿ ಪರಿತಪಿಸುತ್ತಿದ್ದಾನೆ. ಯಾಕೆಂದರೆ ತಾನು ಕೊಯ್ಯ ಬಂದ ಹೂವು "ಎಲ್ಲೆಲ್ಲಿಯವರೋ ಯಕ್ಷ ಕಿನ್ನರ ಗಂದರ್ವಾಕ್ರಮಿತ" ವಾಗಿದೆ. ಇದು 'ಮಹೂವಾ'ದ ಕಾವಲುಗಾರರನ್ನು ಕಂಡ ಆದಿವಾಸಿಯ ಮನದ ಮಾತು. ಮಹೂವಾದಿಂದಲೇ ಜೀವಿಸುತ್ತಿದ್ದ ಈ ಜನರ ಬದುಕಿಗೆ ತೊಡಕಾಗಿನಿಂತ ಕಾವಲುಗಾರರನ್ನು ಕಂಡು ಪರಿತಪಿಸಿ; ಹೂವಿಗಾಗಿ ಕಾದು ನಿಂತುಃ

"ಮರವ ಸುತ್ತವರೆದಿರುವ
ಶಾಸನ ಸರ್ಪ ತೊಲಗುವುದ""20"

ಎಂದು ಕಾವಲುಗಾರರ ನಿರ್ಗಮನವನ್ನು ಬಯಸಿ ಚಡಪಡಿಸುತ್ತಾನೆ.

ಬಾಕಿ ವಸ್ತ್ರಧಾರಿ ದಿಕ್ಪಾಲಕರು
ಹೂಜ್ಞ ಅಂದರೆ ಒಂದೆ ಬುಟ್ಟಿ ಹೂವ."21"

ಇಲ್ಲಿ ಕಾವಲುಗಾರರು ಒಪ್ಪಿ ಹೂ ಕೊಯ್ಯಲು ಅವಕಾಶ ನೀಡಿದರೆ ಕ್ಷಣ ಮಾತ್ರದಲ್ಲಿ ಒಂದು ಬುಟ್ಟಿ ಹೂವ ಕೀಳುವೆನೆಂದು ಆಶಾವಾದಿಯ ಕನಸುಕಾಣುತ್ತಾನೆ. ಈ ಹೂವಿನ 'ವರ' ಪಡೆಯುವುದು ಹೇಗೆ? ಎಂಬ ಪ್ರಶ್ನಾತೀತ ಚಿಂತೆಯಲ್ಲೆ ತನ್ನ ನಲ್ಲೆಯ ಹಸಿವಿನ ಬಯಕೆ ಹಿಂಗಿಸುವ 'ವರ' ಯಾವುದು? ಹೇಗೆ? ಏನು ಮಾಡಲೆಂಬ ಚಿಂತಾಕ್ರಾಂತತೆಯಲ್ಲಿ ಸ್ಥಿತ ಪ್ರಜ್ಞೆ ಮೂಡಿ ತಮ್ಮ ಹಸಿವಿನ ಹೊಟ್ಟೆಯ ಮೇಲೆ 'ತಣ್ಣೀರು ಬಟ್ಟೆ ಹಾಕಿದವರ' ವಿರುದ್ಧ ಸಿಡಿದೇಳುತ್ತಾನೆ. ಮತ್ತು ಇಲ್ಲಿಯ ಜನ ತಮ್ಮ ನಿತ್ಯ ಬುದಕಿನ ತಮ್ಮ ಮನೆಯ 'ಅನ್ನ' 'ವರ'ವಾಗಿ ಮಾರ್ಪಟ್ಟಿದ್ದಕ್ಕೆ ; ಈ 'ವರ' ಕ್ಕೆ ಪ್ರೇರಣೆ ಮತ್ತು ಕಾರಣರಾದವರ ವಿರುದ್ಧ ಸೆಟೆದು ಕಂಕಣ ಕಟ್ಟಿ ನಿಲ್ಲುತ್ತಾನೆ.

'ಮಾವೋಟೆ ನಾಟ್ ಮಾವೋಟೆ ರಾಜ್' [ನಮ್ಮ ನಾಡಲ್ಲಿ ನಮ್ಮದೇ ರಾಜ್ಯ] ಎಂಬ ಘೋಷಣೆಯ ಮಾಡಿ ಸ್ವತಂತ್ರ ಬದುಕಿನ ತಮ್ಮ ಜೀವನಾದಾರ ತುತ್ತಿನ ಹಕ್ಕನ್ನು ಜನ್ಯ ಎತ್ತಿ ಹಿಡಿಯುತ್ತಾರೆ.

ಮಾವೋಟೆ ನಾಟ್ , ಮಾವೋಟೆ ರಾಜ್
ಎಂದು ದಂಡಕಾರಣ್ಯದಲ್ಲಿ
ನಿನದಿಸಿತೆ ದುಡಿ."22"

ಇದು ದುಡಿಮೆಯ ಪ್ರತಿಫಲ ಅನುಭವಿಸುವ ಹಕ್ಕು ನಮ್ಮದೆಂದು ಪ್ರತಿಭಟಿಸುವುದು ಎಚ್ಚೆತ್ತ ಜನರ ಧ್ವನಿಯಾಗಿದೆ.

ನೂರು ಸಾವಿರ ಶಮೀ ವೃಕ್ಷ ಕೈಬೀಸಿ ಕರೆದು
ವಿಂಧ್ಯಾಚಲ ಹಿಮಾಚಲ ಬೆಸೆವ
ವಿಲಯ ತಾಂಡವ ಬೆಳೆದು
    ಕಾರ್ತೀಕ ರಾತ್ರಿ
    ನಚ್ಚನೆಯ ಧಾತ್ರಿ
    ಬೆಳಕಿನ ಸಿಗುರೆದ್ದು
    ಮೂಡಿ ರೆಕ್ಕೆ ಲಕ್ಷ ಬೆಂಕಿ ಹುಳುಗಳು
    ಹಾರುತ್ತಿವೆ ಗಾಳಿಯಲೆ ಮೇಲೆ ಬೂಮರಾಂಗ್ ಗಳು"23"

ಅಡವಿ ತಾಯಿಯೇ ಹೋರಾಟಕ್ಕೆಂದು ಈ ಜನರನ್ನು ಒಗ್ಗೂಡಿಸಿ ಸಿದ್ದಗೊಳಿಸಿದ ಸೈನ್ಯದಂತಾಗಿದೆ. ಈ ಸೈನ್ಯ "ವಿಂಧ್ಯಾಚಲ ಹಿಮಾಚಲ ಬೆಸೆವ ವಿಲಯ ತಾಂಡವದಂತೆ ಬೆಳೆದಿದೆ". ಎನ್ನುವ ಕವಿಗೆ ಇಲ್ಲಿ ವಿಂಧ್ಯಾಚಲ ಹಿಮಾಚಲವನ್ನು ಒಂದು ಗೂಡಿಸುವುದು ಎಂದರೆ ಇಡೀ ನಾಡ ತುಂಬ ಹೋರಾಟ ಹಬ್ಬುವುದು. ಅಸಾಧ್ಯತೆಯನ್ನು ಸಾಧ್ಯಗೊಳಿಸಲು ಹೊರಟ ರುದ್ರ ತಾಂಡವದ ಸಜ್ಜಿನಿಂದ ಈ ಪರ್ವತಗಳನ್ನು ಬೆಸೆಯಲು ಸಿದ್ದವಾದ ಕಲ್ಪನೆ ವಿಶಿಷ್ಟವಾಗಿದೆ. ಈ ಕಲ್ಪನೆಯಲ್ಲಿ ಸರ್ಕಾರದ ವಿರುದ್ಧ ಸಿಡಿದೆದ್ದ ಈ ಜನರ ಯಶಸ್ಸಿನ ಆಶಯವಿದೆ. ಈ ಜನರ ಪಾಲಿಗೆ ಸರ್ಕಾರ ಕಾರ್ತಿಕ ರಾತ್ರಿಯಾಗಿದೆ. "ಬೆಳಕಿನ ಸಿಗುರೆದ್ದು ಮೂಡಿ ರೆಕ್ಕೆ ಲಕ್ಷ ಬೆಂಕಿ ಹುಳುಗಳು ಹಾರುತ್ತಿವೆ" ಎಂಬಲ್ಲಿ 'ಬೆಳಕು, ರೆಕ್ಕೆ' ಶಬ್ಧಗಳಲ್ಲಿ ಬೆಳಕು ಈ ಜನವರ್ಗದವರ ಪ್ರಜ್ಞೆಯಾಗಿ, ರೆಕ್ಕೆ ಅವರ ದೈರ್ಯ , ಶಕ್ತಿ ಸಾಮರ್ಥ್ಯದ ಸಂಕೇತವಾಗಿದೆ. ಈ ಪ್ರಜ್ಞಾವಂತ ಜನ ಲಕ್ಷಾಂತರ ಬೆಂಕಿ ಹುಳುಗಳಾಗಿ ಆ ಕಾರ್ತೀಕ ರಾತ್ರಿಗೆ ದಾಳಿಯಿಟ್ಟಿದ್ದಾರೆ. 'ಬೆಂಕಿ ಹುಳುಗಳು' ಸಿಡಿದೆದ್ದು ಹೋರಾಟಕ್ಕೆ ಜಿಗಿಯುತ್ತಿರುವ, ಸಮಾಜ, ಸರ್ಕಾರದ ಮೇಲೆ ಕಿಡಿ ಕಾರುವ ಈ ಜನರ ಮನಸ್ಸಿನ ತೀವ್ರತೆಯ ಸಂಕೇತವಾಗಿದೆ. ಈ ಜನರು ದಾಳಿಯಿಡುತ್ತಿರುವುದನ್ನು ಕುರಿತು ಕವಿ 'ಬೂಮರಾಂಗ್ ಗಳು ಗಾಳಿಯಲೆ ಮೇಲೆ ಹಾರಿದಂತಿದೆ'. ಎಂದು ಹೋರಾಟದ ತೀವ್ರತೆಯನ್ನು ಸಾರುತ್ತಾರೆ.

ಈ ಕವನದಲ್ಲಿ ಕವಿ ಭಾವ ವಿಹ್ವಲತೆಯಿಂದ ಆದಿವಾಸಿ ಜನರ ಸರ್ವಸ್ವವಾದ 'ಮಹೂವಾ' ಹೂವಿನ ಸಂಬಂಧದ ತಾತ್ವಿಕವಾದ ಪ್ರಶ್ನೆಯಿಂದ ಹೋರಾಟದ ಕಿಡಿಕಾರಿದ್ದಾರೆ. ಈ ಆದಿವಾಸಿ ಜನ ಪ್ರಕೃತಿ ಮಡಿಲಲ್ಲಿ ಇದ್ದು ಈ ಪ್ರಕೃತಿಯ ಅನ್ನದಲ್ಲೆ ಜೀವನ ಸಾಗಿಸುತ್ತಿದ್ದವರು. ಅವರ 'ಮಹೂವಾ' ಅನ್ನವನ್ನು ಕಿತ್ತು ಅರಣ್ಯ ಇಲಾಖೆ ಸರ್ಕಾರಿ ಸ್ವತ್ತೆಂದು ಕಾನೂನು ಮಾಡಿ ಈ ಹೂವನ್ನು ಬಣ್ಣ, ಸುಗಂಧ, ಮದ್ಯ ತಯಾರಿಕೆಗಾಗಿ ಕೈಗಾರಿಕೋದ್ಯಮಿಗಳಿಗೆ ಮಾರುತ್ತಿದೆ. ಇಂತಹ ಸರ್ಕಾರ ಮತ್ತು ಮಾನವ ಸಮಾಜ ಪರಿಸರದ ಪ್ರಜ್ಞೆ ಮೂಡಿದ ಈ ನ ಇದರ ವಿರುದ್ಧ ಸಿಡಿದೆದ್ದು ಪ್ರತಿಭಟಿಸುತ್ತಿರುವ ಹೋರಾಟದ ಈ ಕವನ ಸಹೃದಯ ಓದುಗನ ಕಣ್ತುಂಬುವಂತೆ ಕಾಣಿಸುತ್ತದೆ.

ಈ ಪದ್ಯದಲ್ಲಿ ಎರಡು ಪರಿಸರ ವ್ಯವಸ್ಥೆಗಳನ್ನು ಕಾಣಬಹುದು. ಒಂದು ನಿಸರ್ಗ ಪರಿಸರ ವ್ಯವಸ್ಥೆ ಇನ್ನೊಂದು ಮನುಷ್ಯ ಪರಿಸರ ವ್ಯವಸ್ಥೆ. ಇಲ್ಲಿ ನಿಸರ್ಗ ಸಂಪತ್ತಿನ ತಾರತಮ್ಯ ಹಂಚಿಕೆಯಿಂದ ಮಾನವ ನಿರ್ಮಿತ ಸಮಾಜದಲ್ಲಿ ಸಂಘರ್ಷ ಉಂಟಾಗಿದೆ. ಈ ಸಂಘರ್ಷಕ್ಕೆ ಸಿಕ್ಕಿ ಬರಿದಾಗುವ ನಿಸರ್ಗ ಮತ್ತು ಸರ್ವನಾಶ. ಈ ಕವಿತೆ ಬಂಡಾಯ ಮನೋಧರ್ಮದ್ದು. ಇಲ್ಲಿ ಪ್ರಸ್ತುತ ಸಮಾಜ ಪರಿಸರದ ವಿರುದ್ಧ ಈ ಜನವರ್ಗಕ್ಕೆ ಕ್ರಾಂತಿಯ ಕಿಡಿಯಾಗಿ ಪ್ರಜ್ವಲಿಸುವಂತಿರುವ ಈ ಕವನ ಬಂಜಗೆರೆಯವರ ಮನೋಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ.

ಆ] ಕಥನ ಸಾಹಿತ್ಯ

ನಿಸರ್ಗ, ಪ್ರಕೃತಿ ಮತ್ತು ಮಾನವ ಸಮಾಜದ ಪರಿಸರ ಕುರಿತ ಸಂಕೀರ್ಣ ಗ್ರಹಿಕೆಯನ್ನು ಕನ್ನಡ ಕಥಾ ಸಾಹಿತ್ಯದಲ್ಲಿ ಪರಿಶೀಲಿಸಬಹುದು. ತೇಜಸ್ವಿಯವರ 'ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು' ಸಂಕಲನದ 'ಅಕ್ಕಮ್ಮ ಹೇಳಿದ ಕತೆ', ' ಒಂದು ಘುರಿಯ ಜಾಡಿನಲ್ಲಿ' ಮತ್ತು "ಪರಿಸರ ಕಥೆ"ಸಂಕಲನದ 'ಸುಸ್ಮಿತಾ ಮತ್ತು ಹಕ್ಕಿಮರಿ' 'ಮೂಲಿಕೆ ಬಳ್ಳಿಯ ಸುತ್ತ'. ಈ ಕಥೆಗಳಲ್ಲದೆ; ರಾಘವೇಂದ್ರ ಪಾಟೀಲರ 'ದೇಸಗತಿ' ಕಥಾಸಂಕಲನದ 'ಲಯ' ಮತ್ತು ಕರೀಗೌಡ ಬೀಚನಹಳ್ಳಿಯವರ 'ವಿಯೋಗ' ಕಥೆಗಳಲ್ಲಿ ನಾವು ಈ ಪರಿಸರ ಪ್ರಜ್ಞೆ ಮತ್ತು ಇಂತಹ ಪ್ರಜ್ಞೆಯಿಂದ ಮಾನವನ ಜೀವನ ಮೌಲ್ಯಗಳ ಹುಡುಕಾಟವನ್ನು ಕಾಣುತ್ತೇವೆ.

ಪ್ರಸ್ತುತ ಸಮಾಜದಲ್ಲಿ ನಾಗರಿಕತೆಯ ಸೋಂಕಿನಿಂದ ಆಧುನಿಕತೆಯು, ಮನುಷ್ಯ ಹೃದಯದಲ್ಲಿ ತುಂಬಿದ್ದ 'ಪರಿಸರ ಪ್ರಜ್ಞೆ' ಯನ್ನು 'ಪ್ಯಾಷನ್ ಪ್ರಜ್ಞೆ 'ಯನ್ನಾಗಿ ಪರಿವರ್ತಿಸುತ್ತಿರುವುದನ್ನು ಕಾಣುತ್ತೇವೆ. ಆದರೂ ಈ ನಿಸರ್ಗ ಪರಿಸರವನ್ನು ಉಂಡುಟ್ಟು ಅನುಭವಿಸಿದ ಗ್ರಾಮೀಣ ಜನರ ನಿಸರ್ಗ ನಿಷ್ಠೆ ಮಾಸದಿರುವುದನ್ನು ಇಂದಿಗೂ ಕಾಣಬಹುದು.

ಇಂತಹ ನಿಸರ್ಗ ಮೌಲ್ಯ ಮತ್ತು ನಿಷ್ಠೆಗೆ ಸಾಕ್ಷಿಯಾಗಿ ತೇಜಸ್ವಿಯವರ 'ಮೂಲಿಕೆ ಬಳ್ಳಿಯ ಸುತ್ತ' ಕಥೆಯ ಮಾರ, ಮಾಸ್ತಿ, ಬೈರ ಇತ್ಯಾದಿ ಪಾತ್ರಗಳು ಕಾಣಸಿಗುತ್ತವೆ.

"ಕಾಫಿ ಮೊಳಕೆಗಳನ್ನು ನೆಡುವ ಪಾತಿಗೆ ಚಪ್ಪರದ ಅಡ್ಡ ಪಟ್ಟಿಗಳನ್ನ ಕಟ್ಟಲು ಸಣ್ಣಪ್ಪ ಕಾಡು ಬಳ್ಳಿಗಳ ದೊಡ್ಡ ಹೊರೆಯನ್ನೆ ತಂದು; ಎಲೆಗಳನ್ನೆಲ್ಲ ಕಿತ್ತು ಕಟ್ಟಲು ದಾರದಂತೆ ಸಿದ್ಧ ಮಾಡುತ್ತಿದ್ದಾಗ ಮಾರ ಅದರಲ್ಲಿ ಒಂದು ಬೀಳನ್ನು ನೋಡಿ "ಅಯ್ಯೋ ನಿನ್ನ ಮನೆ ಹಾಳಾಗ! ಇದನ್ಯಾಕೋ ಕಿತ್ತೆ" ಎಂದು ಬಯುತ್ತಾನೆ. ಆಗ ಸಣ್ಣ ಕಾಡಿನಲ್ಲಿ ಇನ್ನೂ ಬೇಕಾದಷ್ಟು ಇವೆ ಎನ್ನುತ್ತಾನೆ. "ಕಳ್ಮುಂಡೇದು! ಅಲ್ಲಿ ಬಿದ್ದಿರ್ಲಿ ಅಂತ!" "ಲಗುಬಗೆಯಿಂದ ಪಕ್ಕದಲ್ಲಿದ್ದ ಚಿಕ್ಕ ಮರ ಒಂದಕ್ಕೆ ಸುತ್ತಿ ಕಟ್ಟಿ ಬಿಟ್ಟ!" ಲೇಖಕರು ಯಾಕೆ ಹಾಗೆ ಮಾಡಿದೆ ಎಂದು ಕೇಳಿದಾಗ ಮಾರ ಅದು ಔಷಧಿ ಗಿಡ ಎಂದು ಅದರ ಮೇಲೆ ಒಂದು ಕಥೆಯನ್ನೇ ಹೇಳಿ ಬಿಡುತ್ತಾನೆ.

ಇಲ್ಲಿ ಮಾರನ ತಿಳುವಳಿಕೆ; ಆ ಬಳ್ಳಿಯ ಮೌಲ್ಯ ಅದರ ಉಪಯೋಗಕ್ಕಾಗಿ ಅದರ ಅಗತ್ಯ ಪೋಷಣೆ ಮತ್ತು ಕಾಡು, ಆ ಕಾಡಿನ ಗಿಡ ಮೂಲಿಕೆಗಳ ಮೇಲಿನ ಮೌಲ್ಯದ ಅರಿವಿನ ಪ್ರೀತಿಯ ವರ್ತನೆಯಾಗಿ ವ್ಯಕ್ತವಾಗಿದೆ. ಇದು ಮಾರನ ಮತ್ತು ಮಾರನ ಪೂರ್ವಜರಿಗೆ ಇದ್ದ ಗಿಡಮೂಲಿಕೆಗಳ ಮೇಲಿನ ಅರಿವು ಮತ್ತು ನಂಬಿಕೆಯಾಗಿತ್ತು. ಇದಕ್ಕೆ ಆಧಾರವಾಗಿ ಕಥೆಯ ಮಾರನ ಒಂದು ಘಟನೆ ಹೀಗಿದೆ.

> "ಒಮ್ಮೆ ಮಾರ ಕಾಡಿಗೆ ಕಳಲೆ ಕಡಿಯಲು ಹೋಗಿದ್ದನಂತೆ, ಬಿದಿರಿನ ಸಂದಿಯೊಳಗೆ ಕೈಹಾಕಿ ಕಳಲೆ ಕಡಿಯುತ್ತಿರಬೇಕಾದರೆ ಕೈಗೆ ಕತ್ತಿತಾಗಿ ಬಲವಾದ ಗಾಯ ಆಯ್ತು. ರಕ್ತನಾಳವೇ ಕತ್ತರಿಸಿ ಹೋಗಿ ರಕ್ತ ಚಿಲುಮೆಯಂತೆ ನುಗ್ಗಿತು. ಪಕ್ಕದಲ್ಲಿದ್ದವರೆಲ್ಲ ಗಾಬರಿಯಾಗಿ ರಕ್ತ ಹೊರ ಚಿಮ್ಮುವುದನ್ನು ನಿಲ್ಲಿಸಲು ಯಾವುದೋ ಎಲೆ ತಂದು ಗಾಯದ ಮೇಲಿಟ್ಟು ಪಂಚೆ ಹರಿದು ಬ್ಯಾಂಡೇಜು ಮಾಡಿದರು. ಮಾರ ಗಾಯದ ಕೈ ಅಲುಗಾಡಿಸದೆ ಹಿಡಿದುಕೊಂಡು ಇಲಾಜು ಮಾಡಿಸಲು ಹುಲಿಹಂದಲು ದೊರೆ ಹತ್ತಿರ ಹೋದ. ದೊರೆ ಔಷಧಿ ಬಾಟ್ಲಿ ಹತ್ತಿ, ಗಾಯಕ್ಕೆ ಹಾಕುವ ಪುಡಿ ಎಲ್ಲ ರೆಡಿ ಮಾಡಿ, ಮಾರನ ಗಾಯಕ್ಕೆ ಸುತ್ತಿದ್ದ ಬ್ಯಾಂಡೇಜು ಬಿಚ್ಚಿ ಗಾಯಕ್ಕೆ ಮುಚ್ಚಿದ್ದ ಎಲೆ ತೆಗೆದನಂತೆ ಆಶ್ಚರ್ಯ! ಒಳಗೆ ಗಾಯವು ಇಲ್ಲ. ಗಾಯದ ಕುರುಹೂ ಇಲ್ಲ! ದೊರೆಗೆ ಮಾರನ ಮೇಲೆ ಸಿಟ್ಟು ಬಂತು "ಎಲಾ ನಿನ್ನ! ತಮಾಷೆ ಮಾಡುತ್ತಿದ್ದೀಯಾ? ಎಂದು ರೇಗಿದನಂತೆ"."24"

ಹೀಗೆ ನಿಸರ್ಗ ಜೀವರಾಶಿಯಲ್ಲಿ ಮನುಷ್ಯ ತಾನು ನಿಸರ್ಗದ ಬಿಡಿಸಲಾರದ ಅವಿಭಾಜ್ಯ ಅಂಗವಾಗಿದ್ದಾನೆ. ಎಂಬ ಈ ಅರಿವಿನಿಂದ ಪ್ರಾಣಿ, ಪಕ್ಷಿ, ಮರಗಿಡ, ಬಳ್ಳಿಗಳ ವಿನಿಮಯ ಜೀವನ ಮತ್ತು ನಾಟಿ ಔಷಧಿಯಿಂದ ತನ್ನ ಬದುಕಿನ ಮೌಲ್ಯವನ್ನು ಕಂಡುಕೊಂಡು ನೂರರಿಂದ ನೂರಿಪ್ಪತ್ತು ವರ್ಷದ ದೀರ್ಘ ಬದುಕಿನ ನಂಬಿಕೆಯವರೆಲ್ಲಿ? ಇಲ್ಲ. ಇಂದಿಗೆ ಅವರು ನಿಲುಕದವರಾಗಿದ್ದಾರೆ.

ನಾಟಿ ವೈದ್ಯ ನಂಬಿಕೆಯ ಈ ಲೇಖಕರು ನಾಟಿ ಔಷಧ ನಾಶದ ಸ್ಥಿತಿ ಕುರಿತು ಹೀಗೆ ಹೇಳುತ್ತಾರೆಃ

> "ನಾಟಿ ವೈದ್ಯ ಬಲ್ಲವರು ತಮ್ಮ ವೈದ್ಯಕ್ಕೆ ಅನೇಕ ಕುರುಡು ನಂಬಿಕೆಗಳನ್ನು, ಧಾರ್ಮಿಕತೆಯನ್ನು ತಳುಕು ಹಾಕಿರುವುದರಿಂದ ವಿಜ್ಞಾನಿಗಳಿಗೆ ಇವರನ್ನು ಹಿಯ್ಯಾಳಿಸುವುದೂ, ಅಲ್ಲಗಳೆಯುವುದೂ ಸುಲಭವಾಗಿದೆ. ಮತ್ತು ತಿಳುವಳಿಕೆಯನ್ನು ತಮ್ಮೊಂದಿಗೇ ಗೋರಿಗೆ ತೆಗೆದುಕೊಂಡು ಹೋಗಲು ಅವರು ಎಂದೋ ತಯ್ಯಾರಾಗಿದ್ದಾರೆ. ಅನೇಕರು ಅದ್ಭುತ ಔಷಧಿಗಳು ಗೊತ್ತಿದ್ದೂ ಬೇಕೆಂದೇ ಯಾರಿಗೂ ಹೇಳದೆ ಸತ್ತೆ ಹೋಗಿದ್ದಾರೆ. ಇವತ್ತಿಗೂ ಮನುಕುಲವನ್ನು ಕಾಡಿಸುತ್ತಿರುವ ಅನೇಕ ಮರಣಾಂತಿಕ ರೋಗಗಳಿಗೆ ಇದ್ದ ಔಷಧಗಳು ಹೀಗೆ ಕಣ್ಮರೆಯಾಗಿ ಅಪಾರ ನಷ್ಟವಾಗಿದೆಯೆಂದು ನಾನು ದೃಢವಾಗಿ ನಂಬಿದ್ದೇನೆ"."25"

ಮಾರ ಕಟ್ಟುತ್ತಿದ್ದ ಕಟ್ಟುಕಥೆ; ಅವನ ನಂಬಿಕೆ. ಧಾರ್ಮಿಕತೆಯ ತಳುಕುಹಾಕಿಕೊಂಡಿದ್ದಲ್ಲ; ಇದಿ ತಲೆತಲಾಂತರದಿಂದ ನಾಟಿ ಔಷಧಿಯನ್ನೇ ನಂಬಿ ತಮ್ಮ ಆರೋಗ್ಯ ಕಾಪಾಡಿಕೊಂಡು ಬಂದು ಚಿಕಿತ್ಸೆ ನೀಡುತ್ತಿದ್ದ ಸಾವಿರಾರು ಜನರು ಕಟ್ಟಿದ ಕಥೆಯನ್ನೊಳಗೊಂಡು ನಿರ್ಣಯಿಸಿದ ಮಾತಿದು. ಈ ಜನರು ತಾವು ನಂಬಿದ ಔಷಧಿಯ ಉಳಿವಿಗಾಗಿ ಧಾರ್ಮಿಕ ನಂಬಿಕೆಗೆ ತಳುಕು ಹಾಕಿದವರು. ಈ ನಂಬಿಕೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗುತ್ತಿದ್ದವರನ್ನು ಕಂಡು ಕೇಳಿದ ಲೇಖಕರು, ಮೇಲಿನ ನಿಲುವಿಗೆ ಬಂದವರು. ಈ ಗಿಡಮೂಲಿಕೆ, ಬಳ್ಳಿಗಳನ್ನು ತುಂಬಿಕೊಂಡ ಕಾಡಿನ ನಾಶ ಮತ್ತು ನಾಟಿ ಔಷಧ ಬಲ್ಲವರ ಸಾವು ಇವೆರಡರಲ್ಲಿ ಯಾವುದೇ ಒಂದು ಇಲ್ಲವಾದರೂ ಮತ್ತೊಂದು ನಿರುಪಯುಕ್ತ ಮತ್ತು ಬಳಕೆಯಿಂದ ವಂಚಿತವಾಗಬೇಕಾಗುತ್ತದೆಂದು ಲೇಖಕರು ತವಕ ಪಡುತ್ತಾರೆ.

ಇಂತಹ ನಿಸರ್ಗ ಮತ್ತು ಮಾನವ ಸಮಾಜದ ಸಂವಾದ ಬಾಲ್ಯದಲ್ಲೇ ರಕ್ತಗತವಾಗಿ ಬರುವುದನ್ನು ತೇಜಸ್ವಿ 'ಪರಿಸರ ಕಥೆ' ಕಥಾ ಸಂಕಲನದ 'ಸುಸ್ಮಿತ ಮತ್ತು ಹಕ್ಕಿ ಮರಿ' ಕಥೆಯಲ್ಲಿ ಮಕ್ಕಳ ಮುಗ್ಧ ಮನಸ್ಸಿನ ಮೂಲಕ ಕಾಣಿಸುತ್ತಾರೆ.

ಈ ಕಥೆಯಲ್ಲಿ ಲೇಖಕರು ತನ್ನ ಮಗಳು ಸುಸ್ಮಿತಾಳಿಗೆ; ಮೊಟ್ಟೆ ಇಟ್ಟು ಕಾವು ಕೊಡುತ್ತಿದ್ದ ಹಕ್ಕಿಯನ್ನು; ಗೂಬೆಯೋ ಏನೋ ತಿಂದು ಬಿಟ್ಟ ಪುಕ್ಕ ಮತ್ತು ಅನಾಥವಾಗಿ ಬಿದ್ದ ಮೊಟ್ಟೆಗಳನ್ನು ತೋರಿಸಿದಾಗ; ಆಕೆಯು "ಈಗ ಮೊಟ್ಟೆ ಒಡೆದು ಮರಿ ಬರೊಲ್ಲವಾ" ಎನ್ನುತ್ತಾಳೆ. ಅದಕ್ಕೆ ಮೊಟ್ಟೆಗೆ ಹಕ್ಕಿಯ ಕಾವು ಅತ್ಯಗತ್ಯ ಎಂದ ನಿರೂಪಕರಿಗೆ "ಹಂಗಾದರೆ ನಾವೆ ಶಾಖ ಕೊಡೋಣ" ಎನ್ನುತ್ತಾಳೆ.

ಇಲ್ಲಿ ಮುಗ್ಧ ಮಕ್ಕಳ ವಿಚಾರದ ತಿಳುವಳಿಕೆ ಇಲ್ಲದ ಮನಸ್ಸಿನಲ್ಲೂ ಸೂಪ್ತ ಮನಸ್ಸಿನ ಕಲ್ಪನೆಯ ಆಶಯವಿದೆ. ಲೈಟಿನ ಕಾವಿನಲ್ಲಿಟ್ಟ ಮೊಟ್ಟೆಗಳ ಮೇಲೆ ಸುಸ್ಮಿತಳ ಗಮನ ಹೀಗಿದೆಃ

> "ದಿನಾ ಒಂದೊಂದು ಪ್ರಶ್ನೆ ಕೇಳುತ್ತ ಮೊಟ್ಟೆಗಳನ್ನು ಇಣುಕಿಣುಕಿ ನೋಡುತ್ತಿದ್ದ ಸುಸ್ಮಿತ ಒಂದು ದಿನ ಉದ್ವೇಗದಲ್ಲಿ ಎದ್ದು ಬಿದ್ದು ಓಡಿ ಬಂದಳು.
> "ಅಣ್ಣಾ ಮೊಟ್ಟೆ ಒಡೆದು ಮರಿ ಬಂದಿದ್ದಾವೆ!" ಎಂದು ಕೂಗಿದಳು"."26"

ಇಲ್ಲಿ ನಿರ್ಜೀವ ಮೊಟ್ಟೆಗೆ ಜೀವ ನೀಡುವ ಆಶಯದಲ್ಲಿ ಮೊಟ್ಟೆ ನೋಡಿ ನೋಡಿ ದಿನಾ ಒಂದೊಂದು ಪ್ರಶ್ನೆ ಕೇಳುವ ಅವಳ ಪ್ರಶ್ನೆಗೆ " ಅಣ್ಣಾ ಮೊಟ್ಟೆ ಒಡೆದು ಮರಿ ಬಂದಿದ್ದಾವೆ!" ಎಂದು ಕೂಗಿದ ಧ್ವನಿಯಲ್ಲೆ ಅವಳ ಅರಿವಿನಲ್ಲಿ ಕಂಡ ತಿಳುವಳಿಕೆಯು ಆಕೆಯ ಶಾಂತಿ, ಸಂತೋಷದ ಮನಸ್ಸಿಗೆ ನೀಡಿದ ದರ್ಶನವಾಗಿದೆ. ಇಲ್ಲಿ " ನಾವೆ ಶಾಖ ಕೊಡೋಣ" ಎಂಬ ಕಲ್ಪನೆಯಲ್ಲಿ ಮನಸ್ಸಿನ ಫಳಫಳಿಸಿದೆ.

ಇಂತಹ ಮುಗ್ಧ ಮನಸ್ಸಿಗೆ ಲೇಖಕರು ಆ ಹಕ್ಕಿ ಮರಿಗಳಿಗೆ ಆಹಾರವಾಗಿ ಬಾಳೆಹಣ್ಣಿನ ಲೇಹ್ಯ ಹಾಕಿದಾಗ ನುಂಗಲು ಸಹ ತ್ರಾಣವಿಲ್ಲದೆ ಸತ್ತೆ ಹೋದಾಗಃ "ನಾನೆ ಸಾಯಿಸಿದೆ ಎಂದು ಕೋಪಗೊಂಡ

ಸುಸ್ಮಿತಾ ಅಳುತ್ತಾ ತನ್ನ ಪುಟ್ಟ ಕೈಗಳಿಂದ ನನ್ನ ಕಾಲಿಗೆ ರಪ ರಪ ಹೊಡೆದಳು" ಎನ್ನುತ್ತಾರೆ. ಇಲ್ಲಿ ಪ್ರೀತಿಸುವ ಮುಗ್ಧ ಮನಸ್ಸಿಗಾದ ಆಘಾತವೆ ಪರಿಸರ ಸಂವಾದದ ಮನಸ್ಸಾಗಿದೆ. ಇಲ್ಲಿ ಸುಸ್ಮಿತಾ ನಿಸರ್ಗ ಪರಿಸರದ ರಕ್ಷಕಳಾದರೆ; ಪರಿಸರದ ಅರಿವೇ ಇಲ್ಲದವರಿಂದ ಪರಿಸರದ ನಾಶ ಹೇಗಾಗುತ್ತದೆ ಎಂಬುದಕ್ಕೆ ಇದೆ ಕಥೆಯ ಒಂದು ಸಂದರ್ಭ ಗಮನಿಸಬೇಕು.

ಲೇಖಕರು ಮಡಿವಾಳ ಹಕ್ಕಿ ಫೋಟೋ ತೆಗೆಯಲು ಸಹಾಯ ಮಾಡಿದ ಚಂದ್ರನಿಗೆ ಒಂದು ರೂಪಾಯಿ ಇನಾಮುಕೊಟ್ಟ ಸುದ್ದಿ ಯಾವುದೊ ರೂಪ ತಾಳಿ ಫೋಟೋ ಮತ್ತು ಹಣದ ಆಸೆಗಾಗಿ ದನಕಾಯುವ ಹುಡುಗರಿಂದ ಹಿಡಿದು ಸ್ಕೂಲು ಹುಡುಗರವರೆಗೆ ತರತರದ ಹಕ್ಕಿಮರಿ ಮತ್ತು ಗೂಡುಗಳನ್ನು ತರತೆಡಗುತ್ತಾರೆ. ಈ ಮಕ್ಕಳ ತಪ್ಪು ಭಾವನೆಯನ್ನು ತಿದ್ದಿ ತಿಳುವಳಿಕೆ ನೀಡುವ ಶಿಕ್ಷಣವಾಗಲಿ ಇಲ್ಲದಿದ್ದರಿಂದಲೇ ಯಾವುದೊ ಆಸೆಗೆ, ಯಾರಿಂದಲೋ ಪ್ರಭಾವಿತರಾಗಿ ಇಂದು ಹಕ್ಕಿ ಮರಿ ಕದ್ದು ತಂದ ಮಕ್ಕಳು ನಾಳೆ ನಿಸರ್ಗ ಸಂಪತ್ತನ್ನೆ ಭರಿದು ಮಾಡುವ ಕೆಲಸಕ್ಕೆ ಮುಂದಾಗುವ, ಮುಂದಾಗಿರುವ ಸೂಚನೆ ಈ ಭಾಗದಲ್ಲಿ ಕಾಣಸಿಗುತ್ತದೆ.

ಹಾಗೆಯೇ ಸುಸ್ಮಿತಾಳ ಪ್ರಶ್ನೆಗೆ ಲೇಖಕರು ನೀಡಿದ ತಿಳುವಳಿಕೆ, ಪ್ರಾಯೋಗಿಕ ಅನುಭವ, ಸಂವಾದ, ಶಿಕ್ಷಣ, ಇಂದಿನ ಮಕ್ಕಳಿಗೆ ಅಗತ್ಯವಾಗಿದೆ.

ಮೇಲೆ ಹೇಳಿದ ಅಂಶಗಳಿಲ್ಲದೆ; ಇನ್ನು ಇತರ ಪ್ರಕೃತಿ, ಮತ್ತು ಮಾನವ ಪರಿಸರಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆ ಸುಳಿವು, ಸೂಚನೆ ಇತ್ಯಾದಿ ಅಂಶಗಳು ಇದೆ ಕೃತಿಯ ಕಥೆಗಳಲ್ಲಿವೆ. ನಿಗೂಢ ಮನುಷ್ಯರು, ಕಿರಗೂರಿನ ಗಯ್ಯಾಳಿಗಳು, ಕರ್ವಾಲೋ, ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳಲ್ಲದೆ ಇವರ ಇನ್ನಿತರ ಕೃತಿಗಳಲ್ಲಿ ಸಹ ಇಂತಹ ಅಂಶಗಳು ನಮಗೆ ದಟ್ಟವಾಗಿ ಕಾಣಸಿಗುತ್ತವೆ.

"ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು" ಎಂಬ ಈ ಕೃತಿಯನ್ನು ಕಥೆಗಳೆಂದೆ ತೇಜಸ್ವಿ ಕರೆಯುತ್ತಾರೆ. ಈ ಕಥಾಸಂಕಲನದ 'ಒಂದು ಝರಿಯ ಜಾಡಿನಲ್ಲಿ' 'ಅಕ್ಕಮ್ಮ ಹೇಳಿದ ಕಥೆ' ಎಂಬೆರಡು ಕಥೆಗಳಲ್ಲಿ ನಿಸರ್ಗ ಮತ್ತು ಪರಿಸರ ಪ್ರಜ್ಞೆಯ ದೃಷ್ಟಿಕೋನವನ್ನು ಕಲಕಿ ನೋಡಬಹುದು. 'ಒಂದು ಝರಿಯ ಜಾಡಿನಲ್ಲಿ', ಯ ಕಥೆಯಲ್ಲಿ ಪ್ರಕೃತಿ ಪ್ರಜ್ಞೆ ಇಲ್ಲದಿದ್ದರೆ ಸ್ವಾಭಾವಿಕವಾಗಿ ಹುಟ್ಟಿ ಬೆಳೆವ ಈ ನಿಸರ್ಗ ಹೇಗೆ ಇಂಗಿ ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳತ್ತದೆ. ಎಂಬುದರ ಸಂದರ್ಭ ಹೀಗಿದೆಃ ದಟ್ಟವಾಗಿ ಬೆಳೆದ ತಾಳೆ ಮರದ ಬುಡದಲ್ಲಿ ಬೆಳೆದಿದ್ದ ಸುರುಳಿ ಗಿಡಗಳ ಪಕ್ಕದಿಂದ ನೀರು ಉದ್ಭವವಾಗಿ ಹರಿಯುತ್ತಿತ್ತು. ಈ ಹರಿಯುವ ನೀರಿನ ಪ್ರಮಾಣ ಹೆಚ್ಚಿಸುವ ಸಲುವಾಗಿ ಅಲ್ಲಿದ್ದ ಸುರುಳಿ, ಫರ್ನ್‌ಗಳನ್ನು ಕೊಚ್ಚಿ ಕಡಿದು ಚರಂಡಿ ತೋಡುತ್ತಿರುವಾಗ, ಮಾರ ನೋಡಿ "ಆ ಫರ್ನ ಗಳನ್ನೂ, ಸುರುಳಿಗಳನ್ನು ಖಂಡಿತಾ ಕಡಿದು ನೀರು ಬಿಡಿಸಬೇಡಿ. ಅವನ್ನೆಲ್ಲಾ ತೆಗೆದರೆ ಜಲದ ಕಣ್ಣು ಕಟ್ಟುತ್ತವೆ. ಜಲದ ಮೂಲ ಮುಟ್ಟಲೇ ಬರದು""27" ಎನ್ನುತ್ತಾನೆ. ಆದರೂ ಅವನ ಮಾತು ಕೇಳದೆ, ಎಲ್ಲ ಫರ್ನ್ , ಸುರುಳಿಗಳನ್ನು ಬಿಡಿಸಿ, ಚರಂಡಿ ಮಾಡಿದ ಲೇಖಕರ ಕಣ್ಣೆದುರೇ ನೀರು ಇಂಗತೊಡಗಿ ಕೆಲಸ ಮುಗಿಯುವಷ್ಟರಲ್ಲಿ ನೀರೆಲ್ಲ ನಿಂತೇ ಹೋಗುತ್ತದೆ. ಇಲ್ಲಿ ಮಾರನ ಸ್ವಾಭಾವಿಕ ಪ್ರಕೃತಿ ಪ್ರಜ್ಞೆಯ ಮುಂದೆ ಲೇಖಕರ ತಾಂತ್ರಿಕ ಪ್ರಜ್ಞೆ ಕೆಲಸಕ್ಕೆ ಬರದೆ ಹೋಗುವುದನ್ನು ಕಾಣುತ್ತೇವೆ.

ಹೀಗೆ ನಮ್ಮ ಈ ಗ್ರಾಮೀಣ ಮತ್ತು ಬುಡಕಟ್ಟು ಜನರು ನಿಸರ್ಗ ಸಂಪತ್ತಿನ ಮೇಲಿನ ತಮ್ಮ ಒಡನಾಟ, ಸಂವಾದಗಳಿಂದ; ಪ್ರಕೃತಿ ಸಂಪತ್ತಿನ ಇಂದಿನ ಅಲ್ಪಸ್ವಲ್ಪ ಉಳಿವಿನಲ್ಲಿ ಪಾಲುದಾರರಾಗಿದ್ದಾರೆ. ಅದರಲ್ಲೂ ಈ ಸಮುದಾಯಗಳ ಹೆಂಗಸರನ್ನು ನಿಸರ್ಗ ಸಂಪತ್ತಿನ ಆರಾಧಕರು ಎನ್ನಬಹುದು. ಯಾಕೆಂದರೆ ಮೂಲತಃ ಹೆಣ್ಣು ಜನ್ಮದಾತೆ, ರಕ್ಷಕಳು, ಪೋಷಕಳು, ಹೆಣ್ಣಿನ ಮನಸ್ಸು ತನ್ನ ಮಕ್ಕಳು, ಅಥವಾ ಮನುಷ್ಯ ಸಂಬಂಧಕ್ಕಷ್ಟೆ ಅಲ್ಲ, ನಿಸರ್ಗದ ಜೀವ ಸಂಪತ್ತಿಗೆಲ್ಲ ಪ್ರೀತಿಯನ್ನು ಎಲ್ಲಾ ಜೀವರಾಶಿಗಳ ಸಂಬಂಧದೊಟ್ಟಿಗೆ ಸ್ಥಿರವಾಗಿ ಭದ್ರಪಡಿಸಿಕೊಂಡಿರುವುದನ್ನು ಕಾಣುತ್ತೇವೆ.

ಈ ಮಾತಿಗೆ ಸಾಕ್ಷಿಯಾಗಿ 'ಅಕ್ಕಮ್ಮ ಹೇಳಿದ ಕಥೆ'ಯ ಮಂಜಮ್ಮ ಮತ್ತು ಕರೀಗೌಡ ಬೀಚನಹಳ್ಳಿಯವರ 'ವಿಯೋಗ' ಕಥೆಯ ತಾಯಿಯ ಸ್ತ್ರೀ ಪಾತ್ರಗಳು ಕಾಣಸಿಗುತ್ತವೆ. ಇವರಲ್ಲಿ ಮೊದಲಿಗೆ ಮಂಜಮ್ಮನ ಪಾತ್ರ ನೋಡಬಹುದು. ಲೇಖಕರಿಗೆ ಅಕ್ಕಮ್ಮ ಸಿದ್ದೇಗೌಡರ ಶ್ರೀಮಂತಿಕೆ ಬಗ್ಗೆ ಹೇಳುತ್ತಾಃ "ಸಿದ್ದೇಗೌಡರ ತಾಯಿ. ಮಂಜಮ್ಮ ಆ ಮಾತಾಯಿ ಮಾಡಿದ ಪುಣ್ಯ ಈವತ್ತು ಸಿದ್ದೇಗೌಡರನ್ನ ಕಾಯ್ತಿದೆ. ಅವರ ಮನೇಲಿ ಹಾಲುತುಪ್ಪ ಹರಿಯೋ ಹಂಗೆ ಮಾಡಿದೆ" ಎನ್ನುತ್ತಾಳೆ. ಇದಕ್ಕೆ ಪೂರಕವಾದ ಅಕ್ಕಮ್ಮ ಕಂಡ ಮಂಜಮ್ಮನ ಕಥೆಯನ್ನು ಹೇಳುತ್ತಾಳೆಃ

> "ಒಂದು ದಿನ ಮಂಜಮ್ಮನೋರ ಮನೆಯಲ್ಲಿ ನಾನು ಅಕ್ಕಿ ಕೇರ್ತಾ ಇದ್ದಾಗ, ಶಿಕಾರಿಯವರು ಮತ್ತು ಶಿಕಾರಿ ನಾಯಿಗಳು ಜಿಂಕೆಯನ್ನು, ಜಿಂಕೆ ಮರಿಯನ್ನು ಓಡಿಸಿಕೊಂಡು ಮಂಜಮ್ಮನ ಮನೆ ಒಳಗೆ ನಾಯಿಗಳು ನುಗ್ಗಿಬಿಟ್ಟವು. ಆಗ ಮಂಜಮ್ಮ ಒನಕೆಯಿಂದ ನಾಯಿಗಳನ್ನು ಓಡಿಸಿ ಒಳಗೆ ನೋಡಿದರೆ 'ಮಲಗುವ ಕೋಣೆಯೊಳಗೆ ಒಂದು ಜಿಂಕೇನೂ ಅದರ ಮರೀನೂ ಹೆದರಿ ನಡುಗುತ್ತ ಕುಳಿತಿವೆ!' ಅಷ್ಟೊತ್ತಿಗೆ ನಾಯಿ ಮತ್ತು ಜಿಂಕೆಯನ್ನು ಹುಡುಕುತ್ತ ಬಂದ ಶಿಕಾರಿಯವರು ಮಂಜಮ್ಮನ ಮನೆ ಮುಂದೆ ಬೊಗಳುತ್ತಾ ನಿಂತ ನಾಯಿ ಕಂಡರು. ಅವರಿಗೆ ಅನುಮಾನ ಹುಟ್ಟಿ ಮಂಜಮ್ಮನ್ನ ' ನಮ್ಮ ನಾಯಿಗಳು ಅಟ್ಟಿಸಿಕೊಂಡು ತಂದ ಜಿಂಕೆ ಎಲ್ಲೋಯ್ತು?' ಅಂತ ಕೇಳಿದರು. ಮಂಜಮ್ಮ: ಮನೆ ಒಳಗೆ ಇದೆ. ಎಂದೊಡನೆ ಒಳ್ಳೆದೇ ಆಯ್ತೆಂದು ಕೋವಿ ಸಿದ್ಧ ಮಾಡಿಕೊಂಡು ಮನೆ ಒಳಗೆ ಬಿಡಲು ಮಂಜಮ್ಮನ್ನ ಕೇಳಿದರು." "28"

ಮಂಜಮ್ಮ ಹೇಳಿದ್ದು ಒಂದೆ ಮಾತು " ನನಗೆ ಗುಂಡು ಹೊಡೆದು ಆಮೇಲೆ ನನ್ನ ಮನೆ ಒಳಗಿರೋ ಜಿಂಕೆಗೆ ಗುಂಡು ಹಾಕಬೇಕು. ಜೀವ ಉಳಿಸಿ ಅಂತ ಬಂದಿರೋದನ್ನ ನಿಮ್ಮ ಕೈಲಿ ಹೊಡೆಸಿದರೆ ಅದರ ಶಾಪ ತಟ್ಟದೆ ಇರುತ್ತಾ? ಯಾರ ಮನೆ ಹಾಳ್ಮಾಡ ಬೇಕಂತ ಇದೀರ ನಿಮಗೆ ಬಾಡು ತಿನ್ನಬೇಕಂತ ಅಷ್ಟೊಂದು ತೆವಲಿದ್ದರೆ ಕೊಟ್ಟಿಗೇಲಿ ನಂದೊಂದು ಕುರಿ ಇದೆ. ತಗೊಂಡು ಹೋಗಿ " ಎಂದವರೇ "ಅಕ್ಕಮ್ಮ ಕತ್ತಿ ತಗೊಂಡು ಬಾ ನನ್ನ ಮನೆ ಹೊಸಿಲು ದಾಟಿ ಕೋವಿ ಎತ್ತಿದವರ ತಲೆ ಕಡಿದೇ ಬಿಡುತ್ತೇನೆ" ಅಂತ ಬಾಗಿಲಲ್ಲಿ ಕತ್ತಿ ತಗೊಂಡು ನಿಂತರು.

ಶಿಕಾರಿಯವರಿಗೆ ಏನು ಮಾಡುವುದು ಅಂತ ಗೊತ್ತಾಗದೆ ಹೊರಟು ಹೋದರು. ಅವರೆಲ್ಲ ಹೋದ ಮೇಲೆ ಮಂಜಮ್ಮ ಜಿಂಕೆನೂ ಜಿಂಕೆ ಮರೀನೂ ಹೊಸಿಲು ದಾಟಿಸಿ ಕಾಡಿನ ಕಡೆಗೆ ಓಡಿಸಿದಳು. "ತಾಯಿ ಜಿಂಕೆ ಹೋಗ್ತ ಒಂದೇ ಒಂದು ಸಾರಿ ಮಂಜಮ್ಮನ ಕಡೆ ತಿರುಗಿ ನೋಡ್ತು ಅಯ್ಯ! ನಂಗೆ ಚನ್ನಾಗಿ ಗೊತ್ತಾಯ್ತು. ಏನೋ ಹೇಳಿ ಹೋಗ್ತಿದೆ ಅಂತ. ಆದರೆ ಏನು ಅಂತ ಅವತ್ತು ಗೊತ್ತಾಗಲಿಲ್ಲ ಈವತ್ತು ಗೊತ್ತಾಗ್ತಿದೆ ನೋಡಿ. ಆಮೇಲಿಂದ ಸಿದ್ದೇಗೌಡರ ಮನೆಯೋರು ಮುಟ್ಟಿದ್ದೆಲ್ಲಾ ಚಿನ್ನ. ಬಿತ್ತಿದ್ದೆಲ್ಲಾ ಬಂಗಾರ!" ಎನ್ನುತ್ತಾಳೆ ಅಕ್ಕಮ್ಮ.

ಇದು ಕಥೆಯೊಳಗಿನ ಕಥೆ. ಇಲ್ಲಿಯ ಮಂಜಮ್ಮ ಜೀವ ರಕ್ಷಣೆ ಬೇಡಿ ಬಂದ ಜಿಂಕೆಗಾಗಿ ತನ್ನ ಪ್ರಾಣ ನೀಡಿ ರಕ್ಷಿಸಲು ಸಿದ್ಧಳಾಗಿ "ನನಗೆ ಗುಂಡು ಹೊಡೆದು ಆಮೇಲೆ ನನ್ನ ಮನೆ ಒಳಗಿರೋ ಜಿಂಕೆಗೆ ಗುಂಡು ಹಾಕಬೇಕು" ಎನ್ನುತ್ತಾಳೆ. ಮೂಕ ಪ್ರಾಣಿಗಳನ್ನು ತನ್ನ ಮಕ್ಕಳಂತೆ ರಕ್ಷಿಸಿ ತನ್ನ ಮಾತೃ ಸ್ಥಾನವನ್ನು ಗಟ್ಟಿಗೊಳಿಸುತ್ತಾಳೆ. ಇವಳ ರಕ್ಷಣೆ ಮನಸ್ಸಿನಲ್ಲೆ ಮಾನವೀಯ ಪ್ರಜ್ಞೆಯ ಪ್ರತಿಬಿಂಬ ಕಾಣುವಂತಿದೆ.

ಮಂಜಮ್ಮನನ್ನು " ಆಕೆ ಮನಸ್ಸು ಇದೆಯಲ್ಲಾ ಅದು ಚಿನ್ನದಂತಾ ಮನಸ್ಸು" ಎನ್ನುವ ಅಕ್ಕಮ್ಮನ ಮಾತೆ, ಮಂಜಮ್ಮನ ಪ್ರಜ್ಞಾ ಸ್ವರೂಪವನ್ನು ಹಿಡಿದಿಟ್ಟ ಮಾತು. ಇಂತಹ ಪ್ರಜ್ಞೆಯಲ್ಲೆ ಮಂಜಮ್ಮ ತನ್ನ ಬದುಕಿನ ಮೌಲ್ಯ ಕಂಡುಕೊಂಡಾಗ, ಈ ಸಮಾಜ ಪರಿಸರದೊಳಗಿನ ಮನುಷ್ಯ, ಸಿದ್ದೇಗೌಡ ಮತ್ತು ತಾಯಿ ಮಂಜಮ್ಮನ ಬದುಕಾಟ ನೋಡಿ ಮುಗು ಮುರಿಯುವಂತಾಗಿದೆ ಹೀಗೆ ತೀರ್ಮಾನಿಸುವ ಅಕ್ಕಮ್ಮ. ಮಂಜಮ್ಮನು ನಿಸರ್ಗ, ಪ್ರಕೃತಿಯ ಜೀವ ಸಂಪತ್ತುಗಳನ್ನು ಪ್ರೀತಿಸುವ, ಗೌರವಿಸುವ ಅವಳ ಪರಿಸರದ

ತಿಳುವಳಿಕೆಯನ್ನು ಗುರುತಿಸಿದ್ದಾಳೆ. ಈ ಸಮಾಜದ ಮಾನವ ತಾನೆ ನಿರ್ಮಿಸಿ ಕಟ್ಟುವ ಪರಿಸರವನ್ನು ಮತ್ತು ಅವಳ ಪರಿಸರ ಪ್ರಜ್ಞೆಯನ್ನು ವಿಮರ್ಶಾ ಚಿಕಿತ್ಸೆಯಿಂದ ಕಾಣುವ, ಅವಳ ತಿಳುವಳಿಕೆ ಅಪೂರ್ವವಾದದ್ದು ಇದಕ್ಕೆ ಆಧಾರವಾಗಿ ಸಿದ್ದೇಗೌಡರ ಶ್ರೀಮಂತಿಕೆಯ ಬಗ್ಗೆ ಸುದ್ದಿ ಹಬ್ಬಿಸುವ ಈ ಸಮಾಜ ಪರಿಸರವನ್ನು ಕುರಿತುಃ

> "ಹೆಣ್ತಿ ಮನೆಯಿಂದ ಬಂಗಾರ ತಂದ್ರು, ಬಚ್ಚಲು ಪಾಯ ಅಗೀತ ಚಿನ್ನದ ಕಡಾಯಿ ಸಿಗ್ತು ಹಂಗೆ ಹಿಂಗೆ ಅಂತೆಲ್ಲ ಮನಸ್ಸಿಗೆ ಬಂದ ಹಾಗೆ ಬೊಗುಳ್ತಾರೆ ಒಳಗೆ ಹೊಟ್ಟೆಕಿಚ್ಚು ಇಟ್ಕೊಂಡು ಮಾತಾಡ್ತಾರಲ್ಲ! ಎಳೇಳು ಜನ್ಮಕ್ಕೂ ಇವರ ಉದ್ಧಾರ ಆಗಲ್ಲ ತಿಳ್ಕಳಿ""29"

ಎಂದು ಬಯ್ಯುತ್ತಾ ತನ್ನ ಮಾನವೀಯ ಸಮಾಜ ಪ್ರಜ್ಞೆಯನ್ನು ಎತ್ತಿ ಹಿಡಿಯುತ್ತಾಳೆ. ಹೀಗೆ ಈ ಕಥೆಯಲ್ಲಿ ನಿಸರ್ಗ ಮತ್ತು ಮನುಷ್ಯ ಸಮಾಜ ಪ್ರಜ್ಞೆಗಳನ್ನು ಒಟ್ಟೊಟ್ಟಿಗೆ ಹಿಡಿದಿಡುವ ಮತ್ತು ಕಾಣುವ ಪರಿ ಅನನ್ಯವಾದುದು.

ಕರೀಗೌಡ ಬೀಚನಹಳ್ಳಿಯವರ 'ವಿಯೋಗ' ಕಥೆಯ ಲೇಖಕರ ತಾಯಿ ಪಾತ್ರ, ತೇಜಸ್ವಿಯವರ 'ಅಕ್ಕಮ್ಮ ಹೇಳಿದ ಕಥೆ'ಯ ಮಂಜಮ್ಮನ ಪಾತ್ರದ ಹೆಣ್ಣಿನ ಮಾತೃಸ್ಥಾನದ ಮುಂದುವರಿದ ಭಾಗವಾಗಿ ನಾವು ಕಾಣಬಹುದಾಗಿದೆ. ಗ್ರಾಮೀಣ ಹೆಂಗಸರ ಪ್ರಕೃತಿ ಪ್ರೇಮ, ಈ ಪ್ರೇಮದ ಅರಿವಿಲ್ಲದೆ ಸಹಜವಾಗಿ ಬೆಳೆದು ಬಂದ ಅವರ ಸ್ವಭಾವ ಈ ಸ್ವಭಾವದ ಹೊಳವಿನಲ್ಲಿ ಕಾಣುವ ಅವರ ಬದುಕಿನ ಪ್ರತಿಬಿಂಬ ಪವಿತ್ರವಾದುದ್ದು. ಇದಕ್ಕೆ ಮಂಜಮ್ಮನ ಪಾತ್ರ ಮತ್ತು 'ವಿಯೋಗ' ಕಥೆಯ ಲೇಖಕರ ತಾಯಿಯ ಪಾತ್ರಗಳು ನಿದರ್ಶನಗಳಾಗಿವೆ.

ಮೇಲಿನ ಮಾತಿಗೆ ಸಾಕ್ಷಿಯಾಗಿ 'ವಿಯೋಗ' ಕಥೆಯ ಲೇಖಕರ ತಾಯಿ ಆಲದ ಮರ ಬಸುರಿ ಮರದ ಕೊಂಬೆಗಳನ್ನು ಕಡಿಸಿ ನೆಡಸಿ ನೀರನ್ನು ಹೊತ್ತು ಹಾಕಿ ಬೆಳಸುತ್ತಾಳೆ. ಇವುಗಳ ಜೊತೆಗೆ ಅತ್ತಿ, ಹಲಸು, ಹೊಂಗೆ, ಬೇವು-ಅರಳಿ ಮರಗಳನ್ನು ಬೆಳಸಿ ಸುಮಾರು ಇಪ್ಪತ್ತೈದು ವರ್ಷಗಳಲ್ಲಿ ದೊಡ್ಡ ತೋಪು ಮಾಡುತ್ತಾಳೆ. ಇಲ್ಲಿ ತಾಯಿ ನಿಸರ್ಗದ ರಕ್ಷಕಳಾಗಿ ಈ ಪ್ರಕೃತಿ ಪ್ರಜ್ಞೆಯಲ್ಲಿ ತಾಯ್ತನವನ್ನು ತೋರಿಸುತ್ತಾಳೆ.

ಮಕ್ಕಳಂತೆ ಪೋಷಿಸಿದ ತನ್ನ ಮರಗಳ ಸೊಬಗು, ಸೌಂದರ್ಯದಿಂದ ತನ್ನ ಮನಸ್ಸಿನ ಬದುಕಿನ ಸಂತೃಪ್ತಿ ಹೊಂದುತ್ತಾಳೆ. ಈ ತಾಯಿ ಮರಕಡಿಯಲು ಬಂದ ಮಗ ಮತ್ತು ಆಳುಗಳಿಗೆ "ನಾನು ನೆಟ್ಟು ನೀರು ಹೂದು ಸಾಕಿ ಬೆಳೆಸಿದ ಮರಗಳ ನನ್ನ ಕಣ್ಮುಂದೆ ಕಡಿಯಲಿಕ್ಕೆ ನಾನು ಬಿಡುವುದಿಲ್ಲ. ನೀವು ಅವುಗಳ ಕಡಿಯೋದಾದ್ರೆ ಮೊದ್ಲು ನನ್ನ ಕಡಿದು ಆ ಮೇಲೆ ನನ್ನ ಮರಗಳನ್ನು ಕಡಿದುಕೊಂಡು ಹೋಗಿ". ಎಂದು ತಡೆದರೂ, ಇವಳ ಮಾತನ್ನು ಲೆಕ್ಕಿಸದೆ ತಾಯಿಯನ್ನು ತಳ್ಳಿ ಮರವನ್ನು ಕಡಿಯುತ್ತಾರೆ. ಆಗ ಆ ತಾಯಿಯ ಹೃದಯಕ್ಕಾದ ಆಘಾತವೆ ಆ ಮರ ಮತ್ತು ತಾಯಿನಡುವಿನ ಸಂಬಂಧಕ್ಕಾದ ಪೆಟ್ಟು. ಇದೆ ನೋವಿನಿಂದ ಮತ್ತೆ ಹಾಸಿಗೆ ಹಿಡಿದ ಈ ತಾಯಿ ಹೊಲದ ಹತ್ತಿರ ಹೋದಾಗ ನಿರೂಪಕನಿಗೆ "ನೀನು ನನ್ನ ಹೊಲದ ಹತ್ತಿರ ಕರೆದುಕೊಂಡು ಹೋಗು ಅಂದ್ರೆ ಸ್ಮಶಾನದ ಹತ್ತಿರ ನನ್ನ ಕರೆದುಕೊಂಡು ಬಂದಿದ್ದಿಯಾ?" ಎನ್ನುತ್ತಾಳೆ. ಇವಳಿಗೆ ತಾನು ಸಾಕಿದ ಮರವಿಲ್ಲದ ಜಾಗ ಸ್ಮಶಾನ ಮೌನದಂತೆ ಕಾಣುತ್ತದೆ. ಈ ಸ್ಮಶಾನಕ್ಕೆ ಜೀವ ತುಂಬಿದ್ದು ಮೊದಲಿನಂತೆ ಆಲ, ಬಸುರಿ, ಕೊನೆಗಳನ್ನು ಕಡಿಸಿ ನೆಟ್ಟು ನೀರು ಹಾಕಿದ ಮೇಲೆಯೇ. ಇಲ್ಲಿಂದ ಪುನಃ ಆರೋಗ್ಯವಂತಳಾಗುತ್ತಾಳೆ. ಇದೇ ಇವಳ ಮಾತೃ ಸ್ಥಾನದ ಮೌಲ್ಯ ಪ್ರೀತಿ ವಾತ್ಸಲ್ಯದಿಂದ ಜನ್ಮನೀಡುವುದು, ರಕ್ಷಿಸುವುದು, ಪೋಷಿಸುವುದು, ಹೆಣ್ಣಿನ ಅವಿಭಾಜ್ಯ ಅಂಗಗಳದಂತಿದ್ದ ತಾಯಿಯ ಮನಸ್ಸು ಮತ್ತೆ ಕ್ರಿಯಾಶೀಲವಾಗುವುದು, ಆ ಮರ ಸಸಿಗಳ ವಾತ್ಸಲ್ಯದಲ್ಲೆ ತನ್ನ ಜೀವನ ದರ್ಶನ ಕಾಣುವುದು, ಇವೆಲ್ಲ ತುಂಬ ಔಚಿತ್ಯ ಪೂರ್ಣವಾಗಿ ಈ ಕಥೆಯಲ್ಲಿ ಮೂಡಿ; ಮೂರ್ತಿಭವಿಸಿನಿಂತಿದೆ.

ರಾಘವೇಂದ್ರ ಪಾಟೀಲರ 'ದೇಸಗತಿ' ಕಥಾ ಸಂಕಲನದ 'ಲಯ'. ಕಥೆಯ ಶೀರ್ಷಿಕೆಯೇ ವಿಶಿಷ್ಟವಾದದ್ದು. ಈ 'ಲಯ' ಮಾನವ ಬದುಕಿನ ಜೀವ ಇದಕ್ಕೆ ಕಟ್ಟಲಾರದ ಮೌಲ್ಯ. ಇದರ ದರ್ಶನಕ್ಕಾಗಿ ಈ ಕಥೆಯ ತುಂಬ ಊರಿನ ಜನರೆಲ್ಲಾ ಸೇರಿ ಹುಡುಕಾಡುತ್ತಾರೆ. ಇದರ ಶೋಧನೆಗಾಗಿ ಜನರ ಮನದಕಾತರ, ತಳಮಳ, ಆಶಯ ಇವೆಲ್ಲ ಈ ಕಥೆಯಲ್ಲಿ ಒಟ್ಟೊಟ್ಟಿಗೆ ಬಿಡಿಸಲಾರದ ಗಂಟಾಗಿ ಮೇಳೈಸಿ ಕಥೆ ಹೆಣೆಯಲ್ಪಟ್ಟಿದೆ.

'ಲಯ' ಎಂದರೆ ಛಂದಸ್ಸುವನ್ನೊಳಗೊಂಡ 'ಧ್ವನಿ'. ಈ ಧ್ವನಿ ಇಲ್ಲಿದ್ದು ನಿರ್ಜೀವ. ನಿರ್ಜೀವವಾಗಿರುವ ಈ ಊರಿಗೆ ಜೀವ ತುಂಬಲು ಲಯದ ಧ್ವನಿಬೇಕಾಗಿದೆ. ಇದರ ಹುಡುಕಾಟ ಈ ಊರಿನ ಸ್ಥಿತಿ ಮತ್ತು ಲಯದ ಏರಿಳಿತದಿಂದ ಇದ್ದಕ್ಕಿದ್ದಂತೆ ಮೂರು ವರ್ಷಗಳಿಂದ ಮಳೆ ಇಲ್ಲದೆ ಬಿಸಿಲಿನ ಧಗೆಯಿಂದ ಊರಿಗೆ ಊರೆ ಸುಡುವಂತಾಗಿ ಈ ಊರು ಪ್ರಕೃತಿಯ ವಿಕೋಪಕ್ಕೊಳಗಾಗಿದೆ.

ಈ ಊರಿನ ಪರಿಸ್ಥಿತಿಯಿಂದ ಆ ಪರಿಸರ ತಿಳುವಳಿಕೆಯ ಜನರ ವರ್ತನೆ ಹೀಗಿದೆ.

> "ಗೌಡರು ಹಗಲೆಲ್ಲಾ ಹಣಮಂತ ದೇವರಿಗೆ ಅಭಿಷೇಕ ಮಾಡಿಸಿದರು. ಜೋಯಿಸರ ರಂಗಭಟ್ಟರ ಕಡಿಂದ ಹಣಮಂತ ದೇವರ ಗುಡ್ಯಾಗ ವಿರಾಟ ಪರ್ವ ಓದಿಸಿದರು....ಗೌಲಿಯ ಪಾಯಸದ ನೈವೇದ್ಯ ತೋರಿಸಿದರು. ಸಂಜೀ ಮುಂದ ಆರತೀತಗೊಂಡು ಬಸವಕ್ಕ ಬಸವೆನ್ನಿರೇಽ ಬಸವನ ಪಾದಕ ಶರಣೆನ್ನಿರೇಽ.... ಅಂತ ಹಾಡ ಹೇಳಿಕೋತಽ ಮನಿ ಮನಿಗಳಿಗೆ ಅಡ್ಯಾಡಿದರು. ಆದರೆ ಆ ಬಾಲೇರ ದನಿಯೊಳಗ ಜೀವ ಅನ್ನೂದ ಇಲ್ಲಧಂಗ ಆಗಿತ್ತು.....
> ಆಗುಳ್ಳವ್ವ ಹೋಗಿ ಪಂಚಮಿ ಬಂದುಽ ಹೋಗಿ, ಶ್ರಾವಣ ದಾಟಿ ಭಾದ್ರಪದದ ಗಣಪ್ಪ ಬಂದು ಹೋದ... ಆದರ ಇವು ಯಾವೂ ತಾವೂ ಬರುವಾಗ ಮಳೀ ಎಂಬುವದನ್ನು ತರಲಿಲ್ಲಾ... ಒಣಗಿದ ಭೂಮಿಯ ಜೋಡೀ ಜನ ಜಾನುವಾರುಗಳೂ ಒಣಗಿಕೋತಽ ನಡದ ಬಿಟ್ಟದ್ದವು...." "31"

ಈ ಊರಿನವರ ಪರಿಸರ ತಿಳುವಳಿಕೆ "ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದಂತಾಗಿದೆ". ಮಳೆ ಬರಿಸಲಿಕ್ಕಾಗಿ ಈ ಊರಿನ ಜನ ಸತ್ವವಿಲ್ಲದ, ಅರ್ಥವಿಲ್ಲದ ಕಾರ್ಯದಲ್ಲಿ ತೊಡಗಿ; "ಹಾಡ ಹೇಳಿಕೊಂಡು ಮನಿ ಮನಿಗೆ ಅಡ್ಯಾಡುತ್ತಿದ್ದ ಬಾಲೀರ ದನಿಯೊಳಗೆ ಜೀವ ಅನ್ನೂದಽ ಇಲ್ಲಧಂಗ ಆಗಿತ್ತು." ಅಂದರೆ ಈ ಊರು, ಮತ್ತು ಊರಿನ ಕಾರ್ಯ, ಬಾಲೇರ ಹಾಡು ನಿರ್ಜೀವ ಸ್ಥಿತಿಯಂತಾಗಿದೆ. ಇದು ಲಯವಿಲ್ಲದ ಕರ್ಕಶವಾದ ಬದುಕು. ಇಂತಹ ಪ್ರಜ್ಞೆಯಿಂದ ಇವರು ತಮ್ಮ ಬದುಕಿನ ಮೌಲ್ಯವನ್ನು ಕಾಣದಂತಾಗಿ ದಿಗಿಲಾಗಿದ್ದಾರೆ.

ಮುಂದೆ ಅರಣ್ಯದ ಪ್ರತಿನಿಧಿಯಂತಿರುವ ಲಂಗಟದ ಸ್ವಾಮಿಯನ್ನು ಕರೆತಂದು ಅವರಿಂದ ಬಚಾವು ಆಗಬಹುದೆಂದು ರುದ್ರಯ್ಯನ ಪ್ರಜ್ಞಾಪೂರ್ಣ ಮಾತಿಗೆ ಊರಿನವರೆಲ್ಲ ಅನುಮೋದಿಸಿ ಕರೆತರುತ್ತಾರೆ. ಇಲ್ಲಿ ಲಂಗಟದ ಸ್ವಾಮಿಗಳು ನಿಸರ್ಗ ಪರಿಸರದ ಸಂಕೇತವಾಗಿದ್ದಾರೆ.

> ".....ಈ ಲಂಗಟದ ಸ್ವಾಮಿಗೋಳು ಹಗಲೆಲ್ಲಾ ಗಿಡದ ಬಡ್ಡಿಗೆ ಕುಂತು ಜಪಾ ಮಾಡತಾರಂತ. ನೋಡಿದವರು ಹೇಳೊದೇನೆಂದರಽ... ಆ ಜಪಾ ಒಮ್ಮೊಮ್ಮೆ ಮೌನದ್ದು. ಒಮ್ಮೊಮ್ಮೆ ದನೀ ತಗದು ಹಾಡಿದಂಗ... ರಾತರಿಯೊಳಗನೂ ಅಗ್ನಿಯ ಮುಂದಕುಂತು ಅದಽ ಉದ್ಯೋಗ ಸ್ವಾಮಿಗೋಳ ಜಪಾ ಅಂದರ ಸಂಗೀತ ಇದ್ದಂಗ... ಹಾಡು ಹಾಡಿದಂಗ, ತಿಳದವರು ಅಂತಿರತಾರೆ.... ಲಂಗಟದ ಸ್ವಾಮಿ ಅಂದರ ನಾದೋಪಾಸಕ ಅಂತ. ಹಂಗಂದರ ಏನೋ ಯಾಂವ ಬಲ್ಲ!.... ಲಂಗಟದ ಸ್ವಾಮಿಯ ಹಾಡಂಬೂದು ಹಾಡಲ್ಲಿ.... ಅಂದರ ಅದು ಮನಶಾ ಹಾಡಿಧಂಗಲ್ಲ. ಅರಾಣ್ಯದೊಳಗಿನ ಗಿಳಿ..... ಗೊರವಂಕ.... ಕಾಗೀ... ಕೋಗಿಲೆ ಹಿಂಗ ನಾನಾ ನಮೂನಿಯ ಕಂಡಂಥಾ ಕಂಡಿರದಂಥಾ ಹಕ್ಕಿಗೋಳು ಹಾಡಿಧಂಗ. ಹಂಗಂತಂದರ ಆ ಹಾಡು ಅದಽ ಒಂದು ಬ್ಯಾರೀ ಇದ್ದದ್ದಂತ ಅಲ್ಲ. ಅದು ಆ ಇಡೀ ಅರ್ಯಾಣವ ಸಂಗೀತದೊಳಗಿನ ಒಂದು ಸ್ವರ ಪ್ರಸಾರ ಇದ್ದಂಗ... ಒಟ್ಟು ಹಾಡಿನೊಳಗಿನ ಒಂದು ನುಡೀ ಇದ್ದಂಗ.... ಈ ಲಂಗಟದ

ಸ್ವಾಮಿ ಈ ಗೂಗೀಕೊಳ್ಳದೊಳಗ ಇದ್ದದ್ದು. ಕೊಳದೊಳಗೆ ಒಂದ ಮೀನ ಇದ್ದಂಗ... ಆ ಮೀನೂ....ಅತ್ತs ಇತ್ತs ಹತ್ತೂ ಕಡೇ ಈಸಿದರೂ ಒಂದ ಕಲಕ ಏಳಂಗಿಲ್ಲಾ... ಒಂದ ತೆರೀ ಏಳಂಗಿಲ್ಲಾ... ಇನ್ನ ಆ ಸ್ವಾಮಿ ರಾತರಿಯೊಳಗ ಹಾಕುವ ಬೆಂಕಿ ಅಂತಂದರ ಹೆಂಗಂದರೀ...? ಅದು ಮುಗಲೊಳಗಿನ ಒಂದು ಚಿಕ್ಕಿ ಇದ್ದಂಗ... ಅದು ಒಟ್ಟು ರಾತರಿಯ ನಿಲುವಿಗೆ ಭಂಗ ಬಂಧಂಗ... ರಾತರಿಯ ಕತ್ತಲಕ್ಕ ಹೊಂದುವಷ್ಟs ಬೆಳಕು ಬಿಟ್ಟು ಉರಿಯುವದು.... ಒಟ್ಟಿನ ಮ್ಯಾಲ ಹೇಳಬೇಕಂದರs, ಆ ಸ್ವಾಮಿ ಇದ್ದದ್ದು ಹೆಂಗಂದರs..... ಅರ್ಣ್ಯಾಣದೊಳಗಿನ ಗಿಡಾ ಊಸಿರಾಡಿಸಿಧಂಗ... ಬೆಳಗಿನ್ಯಾಗ ಹೂ ಅರಳಿಧಂಗ.... ನಡೀ ಹರಿಯುವ ಸಹಜ ಲಯಧಂಗ.... ಅದಕ್ಕs ಇದ್ದಿರಬೇಕು. ತಿಳಿದವರು ಈ ಸ್ವಾಮಿನ್ನ ಲಯದ ಉಪಾಸಕ ಅಂತಾರೆ... ಇದ್ದಿರಬೇಕು. ಈ ಸ್ವಾಮಿನ್ನ ನೋಡಿದರ ಹಂಗs ಅನಸತದ... ಅಂವ ಎಲ್ಲಾದರೊಳಗಿನ ಲಯಾ ಹುಡುಕಿ ಹೊಂದಿಕೊಳ್ಳುವ ಹಂಗ. ಅರ್ಣ್ಯಾಣದೊಳಗs.... ಅದರೊಳಗಿನ ಮರಾಗಿಡಾ ಬಳ್ಳಿಗಳೊಳಗs.... ಅಲ್ಲಿ ಹರಿಯುವ ಹಳ್ಳಿ ತೊರಿಗಳೊಳಗs.... ಅಲ್ಲಿ ಇರುವ ಪಶುಪಕ್ಷಿ ಕ್ರಿಮಿ ಕೀಟಾದಿಗಳೊಳಗs... ಸೂರ್ಯೋದಯದೊಳಗs ಸೂರ್ಯಸ್ತದೊಳಗs... ಚಂದ್ರಾಮನ ಹಿಗ್ಗೂಕುಗ್ಗುಗಳೊಳಗs...ಮಳೀ ಗಾಳಿಗಳೊಳಗs... ಅಂವ ಎಲ್ಲಾದರೊಳಗ ಅಡಿಕ್ಕೊಂಡಿರುವ ತಾಳಗತಿಯ ಉಪಾಸನೆ ನಡೆಸಿದವನಂಗ ಇರುವವನು!"."32"

ಇದು ರುದ್ರಯ್ಯನವರ ನಿಸರ್ಗ ಸಂವಾದ. ಈ ಸಂವಾದದಿಂದ ಊರಿನ ಜನರಿಗೆಲ್ಲ ನಾಡಿ ಮಿಡಿಸಿದ್ದಾರೆ. ಇದರಿಂದ ಅವರ ಜೀವನ ದರ್ಶನಕ್ಕೆ ಕನ್ನಡಿ ಹಿಡಿದಿದ್ದಾರೆ. ಲಂಗಟದ ಸ್ವಾಮಿಗಳು ನೀಡುವ ಜೀವನ ದರ್ಶನ ನೋಡಿಃ ಸ್ವಾಮಿಗಳ ಮುಂದೆ ಭಕ್ತಾದಿಗಳು ಕುಳಿತಾಗಃ

"ವಾಕ್ಯೋ ಮಾಡಿರೀ ಎಪ್ಪಾs....ಅಂತಕಾಡವರು. ಆಗ ಸ್ವಾಮಿಗೋಳು 'ವಾಕ್ಯೋ ಅಂದರ ಪುಕಟs ಅರ್ರ್ಯೊs. ಇದು ಷೀರ ಇದ್ದಂಗ. ಇದು ಇತ್ತಂದರ ಅನ್ನಕ್ಕ ಕೊರತೆನ್ನೊದs ಇಲ್ಲ...ಮತ್ತು ಇದರ ಹಿಂದ ಏನ್ ಇರತ್ತೈತಿ ಗೊತ್ತೈತಿ ಏನು?... ಲಯಾಂs.... ಅವs ಛಂದಸ್ಸು ಈ ಲೋಕ ಅಂದರ ಏನಂತ ತಿಳದೀರಿ? ಇದು ಅನ್ನ!.... ಇಲ್ಲಿ ಇರೂವು ಎರಡs ಒಂದು ಅನ್ನಾ ಮತ್ತ ಇನ್ನೊಂದು ಅದನ್ನ ತಿನ್ನಾಂವಾs!.... ಅನ್ನ ಸಿಕ್ಕಂವಗ ನಾದದ ದರಶನ ಅಗಿರತೈತಿ..."“33"

ಇದು ಲಂಗಟದ ಸ್ವಾಮಿ ಜನಗಳಿಗೆ ನೀಡುವ ದರ್ಶನದ ಕಾಣಿಕೆ. ಇವರು ಹೇಳುವ 'ಅನ್ನಾ' ಸಾಂಕೇತಿಕ ಪದವಾಗಿದೆ. ಈ ಅನ್ನ, ಭೂಮಿ, ಆಕಾಶವನ್ನೊಳಗೊಂಡ ನಿರ್ಜೀವ, ಸಜೀವವುಳ್ಳ ಎಲ್ಲ ನಿಸರ್ಗ ಸಂಪತ್ತಾಗಿದೆ. ಈ ಸಂಪತ್ತನ್ನು ತಿಂದು ಅನುಭವಿಸುವವನೆ ಅನುಭವಿ. ಈ ಅನುಭವಿಯಲ್ಲಿ ಲಯ, ಲಯದ ಛಂದಸ್ಸನ್ನು ಗುರುತಿಸಿ ಇಂತಹ ಲಯದ ಧ್ವನಿಯಲ್ಲಿ ಜೀವನದ ದರ್ಶನ ಕಾಣಿಸಿ ಈ ನಿಸರ್ಗ ಸಂಪತ್ತನ್ನು ಸಾಕ್ಷಾತ್ಕರಿಸಿದ್ದಾರೆ. ಇಂತಹ ಅನುಭವಿಯಿಂದ ಬರುವ 'ಲಯ' ಒಬ್ಬರದಲ್ಲ. "ಇಡೀ ನಿಮ್ಮ ಎಲ್ಲಾರದಾ... ಊರಾನ ಮಂದಿ ಎಲ್ಲಾರೂ ಕೂಡಿ ಕರೀಬೇಕಾದ ಛಂದಸ್ಸು ಇದು..." ಈ ನಿಸರ್ಗದ ಸಂಪತ್ತನ್ನು "ಸರ್ವರಿಗೂ ಸಮ ಪಾಲು, ಸರ್ವರಿಗೂ ಸಮಬಾಳು" ಎಂಬ ತತ್ವದಲ್ಲಿ ಈ ಮಾನವ ಸಮಾಜ ಪಡೆದುಕೊಳ್ಳಬೇಕೆಂದು ಸೂಚಿಸುತ್ತಾರೆ.

ಈ ಮಾತು, ಕಥೆಯ ಕೊನೆಗೆ ಸಾರ್ಥಕಗೊಂಡಿದೆ. ಬಾಳಯ್ಯನವರು ಹಾಡುವ ಹುಡುಗ ನಾರಾಯಣನನ್ನು ಕರೆದು "ಬಾ ತಮ್ಮ ಬಾ. ಹಾಡಿ ನಿಮ್ಮೆಲ್ಲಾರ ಎದಿಯ ಕದಾಲ ತೆರೆದು ತೋರಿಸ ಬಾ. ಬಾರಪ್ಪಾs ... ನೀವು ನಿಂತ ನಿಲವು ತೋರಿಸ ಬಾ ಯಾವದನ್ನು ಕೊಂದು ಯಾವದನ್ನು ತಿಂದು ಹೆಂಗ ಬದಕೀರೆಂಬೂದನ್ನ ತೋರಿಸ ಬಾ..." ಎನ್ನುತ್ತಾರೆ. ಈ ಮಾತಿನಲ್ಲಿ ಆ ಊರಿನ ದುಃಸ್ಥಿತಿಗೆ ಆ ಊರಿನ ಜನರೆ ಕಾರಣವಾಗಿ ಪಶ್ಚಾತ್ತಾಪ ಪಡುತ್ತಿರುವ ಸಮಾಜದ ಜನರನ್ನು ಆ ಪರಿಸರ ಪ್ರಜ್ಞೆಯ ಅರಿವಿನಲ್ಲಿ ಹಾಡಿಗಾಗಿ ನಾರಾಯಣನ ಮೂಲಕ ಆಹ್ವಾನಿಸುತ್ತಾರೆ. ನಾರಾಯಣ ಹಾಡಲಾರದೆ ಓದುತ್ತಾನೆ. "ಎದಿಯೊಳಗಿನ ಬೆಳದಿಂಗಳ ಲಯ ಸುಟ್ಟು ಹೋಗಿ ಕತ್ತಲಿನ ಲಯ ತುಂಬಿ ಕೊಂಡೈತಿ ಹಿಂತಾದ್ದರೊಳಗ ನಾವು ಏನು

ಹಾಡಿದರ ಏನು....?" ಎಂಬ ಮಾತಿನಲ್ಲಿ ಕ್ರಿಯಾತ್ಮಕ ಚಟುವಟಿಕೆಗಳಿಂದುಂಟಾದ ಆ ಊರಿನ ಸ್ಥಿತಿಗತಿಯನ್ನು ಬಾಳಯ್ಯನವರು ಬಿಚ್ಚಿಟ್ಟಿದ್ದಾರೆ. ಇಂತಹ ದುರಂತ ಸ್ಥಿತಿಗೆ ಸಿಕ್ಕ ಆ ಊರಿಗೆ ಮಳೆ ಬರುವುದಿಲ್ಲವೆಂದು ಅರಿತು ಊರು ಬಿಟ್ಟು ಊರಿಗೆ ಊರೇ ಗುಳೆ ಹೋಗುತ್ತವೆ, ಹೆಣ್ಣು-ಗಂಡು, ಮಕ್ಕಳು ಮರಿ ಎಲ್ಲಾ ಎದೆಯೊಳಗೆ ಖುಶಿಯನ್ನು ತುಂಬಿಕೊಂಡು ಒಡಪು ಹೇಳಿಕೊಂಡು; "ಹೊಸಾ ಬೆಳಕು ಹುಡಿಕ್ಕೊಂಡು ಕತ್ತಲಿನೊಳಗ ನಡದ ಆ ಜನರ ಹಿಂಡಿನೊಳಗ ಒಮ್ಮಿ ಒಮ್ಮಿಗಲೇ ಹಾಡು ಒಂದು ಚಿಮ್ಮಿ ಬಂತು. ಯಾರೋ ಒಬ್ಬಾಂವ ಮೊದಲ ಹೇಳತ್ತಿದ್ದರ ಉಳಿದ ಮಂದಿ ಎಲ್ಲಾ ಆಮ್ಯಾಲ ಕೊರಸ್ಸಿನೊಳಗ ಹೇಳವರು..." ಈ ಕೊರಸ್ಸಿನೊಳಗ ಅಪರಿಮಿತಲಯ, ಛಂದಸ್ಸು ಹೊರ ಹೊಮ್ಮುವುದರ ಮೂಲಕ ಆ ಊರಿನ ಜನರಲ್ಲಿ ಆ ಊರಿನ ಪರಿಸರದ ಪ್ರಕೃತಿಯ ತಿಳುವಳಿಕೆ ಮೂಡಿ ಈ ತಿಳುವಳಿಕೆ ಲಯವಾಗಿ ಹರಿದು ಬಂತು.

> "ಮೂಡಣದಾಗ ಏನು ಛಂದದ ಸೂರ್ಯ ಹುಟ್ಟಲಿಕ್ಕತ್ತಿದ್ದ...! ಮಂದಿ ಎಲ್ಲಾ 'ಹೋಹೋ...' 'ಆಯ್'....'ಆವ್'...'ಅವ್ವಯ್ಯಾS'....ಅಂತ 'ಏನ ಛಂದದ ಸೂರ್ಯSS' ಅಂತ ಸಂಭ್ರಮ ಪಡತಿದ್ದರS..... ಈ ಗೌಡಾ, ಕುಲಕರ್ಣೀ ಅಂಬುವವರು. ಒಂದಿಷ್ಟೂ ದನಿ ಅನ್ನುವುದನ್ನ ಹೊಂಡಸದೇ.... ಆSS... ಅಂತ ಇಷ್ಟಗಲ ಬಾಯಿ ತಗದು ಮೂಡಣದಾಗ ಮೂಡಿ ಬರತಿದ್ದ ಆ ಸೂರ್ಯ ಸುರಿಯುತಿದ್ದ ಛಂದವನ್ನು ಸುರಕೊಂಡು ಸುರಕೊಂಡು ಉಣಲಿಕ್ಕತ್ತಿದ್ದರು...! ಆಹಾS... ಇದಕಿಂತಾ ಹೆಚ್ಚಿನ ವೈಭೋಗ ಅನ್ನುವದು ಇನ್ನೇನಾದರೂ ಇದ್ದೀತೇ ಅನ್ನುವ ಹಂಗ ಮೈಮರತಿದ್ದರು...!"."34"

ಕಥೆಯ ಕೊನೆಯಲ್ಲಿ ಆ ಊರಿನ ಜನರ ಸಂತೋಷ; ಕಾರಂಜಿಯಾಗಿ ಚಿಮ್ಮಿ ಹೊಸಸತ್ಯ ದರ್ಶನವಾಗಿರುವುದು ಧ್ವನಿ ಪೂರ್ಣವಾಗಿದೆ.

ಇ] ಕಾದಂಬರಿ ಸಾಹಿತ್ಯ

ಕಾದಂಬರಿ ಇಂದು ಕನ್ನಡ ಸಾಹಿತ್ಯದ ಸಮೃದ್ಧ ಬೆಳೆ. ಪರಿಸರವನ್ನೆ ಕುರಿತಾದ ಕಥೆ ಕಾದಂಬರಿಗಳನ್ನೊಳಗೊಂಡ ಸಾಹಿತ್ಯವಿಲ್ಲದಿದ್ದರೂ; ಇವುಗಳೊಳಗೆ ನಿಸರ್ಗ, ಪರಿಸರದ ಅಂಶಗಳು ಹಾದು ಹೋಗುತ್ತವೆ. ಹಾಗಾಗಿ ಪರಿಸರ ಸಂವೇದನೆಯ ಕೃತಿಗಳು ಇಂದು ಸಾಕಷ್ಟು ಇವೆ. ಪ್ರಸ್ತುತದ ಪರಿಸರ ಸಮಸ್ಯೆಗಳನ್ನು ಬಗೆದು ನೋಡುವ ಕೃತಿಗಳ ವಿಶ್ಲೇಷಣೆ ಅಗತ್ಯವಾದುದಾಗಿದೆ. ಹಾಗಾಗಿ ಪರಿಸರವನ್ನು ಗಂಭೀರವಾಗಿ ಪರಿಗಣಿಸಿ ಹೆಚ್ಚು ಕಾಳಜಿ ಮತ್ತು ತಿಳುವಳಿಕೆಯಿಂದ ಬರೆಯುತ್ತಿರುವ ಲೇಖಕ ಪೂರ್ಣ ಚಂದ್ರ ತೇಜಸ್ವಿ ಯವರ 'ಜುಗಾರಿ ಕ್ರಾಸ್' ಕಾದಂಬರಿಯನ್ನು ಮುಖ್ಯವಾಗಿಟ್ಟುಕೊಂಡು ಚರ್ಚಿಸಲಾಗಿದೆ. ಈ ಚರ್ಚೆಯ ಸಂದರ್ಭದಲ್ಲಿ ಇದಕ್ಕೆ ಪೂರಕವಾಗಿ ಮತ್ತು ಹಿನ್ನೆಲೆಯಾಗಿ ಬರುವ ಕಾನೂರು ಹೆಗ್ಗಡತಿ, ಕರ್ವಾಲೋ ಕಾದಂಬರಿಗಳನ್ನೂ ಪ್ರಾಸಂಗಿಕವಾಗಿ ಚರ್ಚಿಸಲಾಗಿದೆ.

'ಜುಗಾರಿ ಕ್ರಾಸ್ ' ಕಾದಂಬರಿಯ ಮುನ್ನುಡಿಯಲ್ಲಿ ತೇಜಸ್ವಿಯವರು "ಕುವೆಂಪುರವರ 'ಕಾನೂರು ಹೆಗ್ಗಡತಿ', ಕಾರಂತರ 'ಮರಳಿ ಮಣ್ಣಿಗೆ' ಸಹ್ಯಾದ್ರಿಯ ಕಾಡುಗಳಿಗೂ ಇವತ್ತಿನ ಪರಿಸ್ಥಿತಿಗೂ ಇರುವ ಅಜಗಜಾಂತರ ವ್ಯತ್ಯಾಸಕ್ಕೆ ಈ ಕಾದಂಬರಿಯೇ ಉದಾಹರಣೆ" ಎಂದಿದ್ದಾರೆ. ಈ ಮಾತಿನ ಹಿನ್ನೆಲೆಯಲ್ಲಿ ಇವತ್ತಿನ ಪರಿಸರದ ಪರಿಸ್ಥಿತಿಯನ್ನೊಳಗೊಂಡ ಈ ಕಾದಂಬರಿಯನ್ನು ವಿಶ್ಲೇಷಿಸಬಹುದು.

ಈ ಕಾದಂಬರಿಯ ಮೇದರಹಳ್ಳಿ, ದೇವಪುರ, ಜುಗಾರಿಕ್ರಾಸ್, ದೋಣಿಹೊಳೆಗಳು ತಮ್ಮ ಅಸ್ತಿತ್ವ ಕಳೆದುಕೊಳ್ಳಲು ಕಾರಣ ಆ ಊರಿನ ಪರಿಸರ ಚಟುವಟಿಕೆಗಳು. ಇಂತಹ ಚಟುವಟಿಕೆಗಳಿಂದಲೇ ಊರುಗಳು ಅವಸಾನವಾಗಿವೆ. ಈ ಅವಸಾನದ ಸಂಕೇತವಾಗಿ ಮೇದರ ಹಳ್ಳಿಯ ಜನರಾಡುವ ಮಾತನ್ನು ಲೇಖಕರು ಉಲ್ಲೇಖಿಸುತ್ತಾರೆ.

"ಆ ಊರಿನಲ್ಲಿ ಹುಟ್ಟಿದ ಹೆಣ್ಣು ಮಗಳೊಬ್ಬಳನ್ನು ಅವಳ ಗಂಡನೇ ವ್ಯಭಿಚಾರಕ್ಕೆ ಬಲಾತ್ಕರಿಸಿದ್ದರಿಂದ ಅವಳ ಶಾಪತಟ್ಟಿ ಊರು ಹಾಳುಬಿತ್ತೆಂದು ಜನ ಆಡಿಕೊಳ್ಳುತ್ತಿದ್ದರು"."35"

ಈ ಮಾತು ಇಡೀ ಆ ಊರಿನ ಪರಿಸ್ಥಿತಿಯನ್ನು ಅದರ ಚಟುವಟಿಕೆಗಳನ್ನು ಪ್ರತಿನಿಧಿಸುವ ಮಾತಾಗಿದೆ. ಇಲ್ಲಿ ಆ ಊರಿನ ಹೆಣ್ಣು ಮಗಳು ಆ ಊರಿನ ಅರಣ್ಯ ಸಂಪತ್ತು. ಆ ಊರಿನ ಜನ, ಆ ಕಾಡಿನ ಸಂಪತ್ತೆನ್ನೆಲ್ಲ ಬೇರೆಯವರು ಉಪಯೋಗಿಸಲು ಅವಕಾಶ ನೀಡಿದ್ದು ಮತ್ತು ತಾವೆ ಇಲ್ಲಿಯ ಅರಣ್ಯ ಸಂಪತ್ತನ್ನೆಲ್ಲ ಮಾರಿಕೊಂಡಿದ್ದು ಇಲ್ಲಿಯ ವ್ಯಭಿಚಾರವಾಗಿದೆ. ಇಂತಹ ವ್ಯಭಿಚಾರದಿಂದ ಬೇಸತ್ತ ಹೆಣ್ಣುಮಗಳು ಶಾಪ ಹಾಕಿ ಊರು ಹಾಳು ಬಿತ್ತೆಂಬುದು ಮಾರ್ಮಿಕವಾಗಿದೆ.

ಈ ಮಾತು ಕಾಡು ನಾಡಿನ ಸಂಬಂಧವನ್ನು ಗಂಡ ಹೆಂಡಿರ ದಾಂಪಂತ್ಯಕ್ಕೆ ಸಂಬಂಧಗೊಳಿಸಿದೆ. ಆದರೆ ಗಂಡ ತನ್ನ ಹೆಂಡತಿಯನ್ನು ಬೇರೆಯವರಿಗೆ ತಾನೆ ತಲೆ ಹಿಡಿಯುವಂತಹ ಕ್ರಿಯೆಗಳ ಮೂಲಕ ಈ ಮಾನವೀಯ ಸಂಬಂಧ ನಾಶವಾಗಿದೆ. ಇದು ಹೊರನೋಟಕ್ಕೆ ಕಥೆಯಾದರೂ ಇದರಲ್ಲಿ ವಾಸ್ತವದ ಧ್ವನಿ ಇದೆ. ಇದು ಇವತ್ತಿನ ಕಾಡು ನಾಡಿನ ಸ್ಥಿತಿಗತಿಗಳ ಪರಿಸರದ ಕತೆ. ಆದರೆ ಕುವೆಂಪು 'ಕಾನೂರು ಹೆಗ್ಗಡತಿ'ಯ ಅವತ್ತಿನ ಪರಿಸರ ಸಂಬಂಧವನ್ನು ಆ ಕೃತಿಯ ಹೂವಯ್ಯನ ಮಾತು ವ್ಯಕ್ತಮಾಡುತ್ತಿದೆ ಅನ್ನಿಸುತ್ತದೆಃ

> "ದೇವರು ಈ ಜಗತ್ತನ್ನೆಲ್ಲಾ ಸೃಷ್ಟಿ ಮಾಡಿದ್ದಾನೆ. ಅವನು ಎಲ್ಲೆಲ್ಲಿಯೂ ಇದ್ದಾನೆ. ಇಲ್ಲಿಯೂ ಇದ್ದಾನೆ. ನಾನು ನೀನು ಆಡುತ್ತಿರುವ ಈ ಮಾತುಗಳನ್ನು ಕೇಳುತ್ತಿದ್ದಾನೆ. ಅವನು ಏನು ಬೇಕಾದರೂ ಮಾಡಲು ಶಕ್ತನು. ತಾವು ಅವನನ್ನು ಪ್ರೀತಿಸಬೇಕು. ಅದನ್ನೇ ಭಕ್ತಿ ಎಂದು ಕರೆಯುತ್ತಾರೆ. ಅವನು ಈ ಜಗತ್ತನ್ನು ಮಾಡಿ ದೂರ ಓಡಿ ಹೋಗಿ ಕೂತುಕೊಂಡಿಲ್ಲ. ಅದರಲ್ಲಿ ಐಕ್ಯವಾಗಿದ್ದಾನೆ. ಸೇರಿಕೊಂಡಿದ್ದಾನೆ. ಸಕ್ಕರೆಯನ್ನು ನೀರಿಗೆ ಹಾಕಿದರೆ ಕರಗಿಕೊಳ್ಳವಂತೆ! ಬೆಳಿಗ್ಗೆ ಸೂರ್ಯನಾಗಿ ಮೂಡಿ ಬರುತ್ತಾನೆ. ರಾತ್ರಿ ಕತ್ತಲೆಯ ರೂಪದಿಂದ ಬರುತ್ತಾನೆ. ಅವನೇ ಗಾಳಿಯಾಗಿ ಬೀಸುತ್ತಾನೆ. ಮಳೆಯಾಗಿ ಸುರಿಯುತ್ತಾನೆ. ಮಿಂಚಾಗಿ ಹೊಳೆಯುತ್ತಾನೆ...... ನೋಡು, ನೀನು ಮಾಡಿದು ಕೊಂಡಿರುವ ಹೂವಿನ ಸೌಂದರ್ಯವೂ ಅವನೇ! ನಿನ್ನ ಸೌಂದರ್ಯವೂ ಅವನೇ! ನಾನು ಆಗ ಹೇಳಿದೆನಲ್ಲಾ ಆ ಸಂಧ್ಯಾ ಸೌಂದರ್ಯವೂ ಅವನೇ! ಆ ಸಂಧ್ಯಾ ಸೌಂದರ್ಯವನ್ನು ನೋಡಿದಾಗ ಅವನನ್ನೇ ನೋಡಿದಂತೆ ನನಗೆ ಅನುಭವವಾಗುತ್ತದೆ. ಆಗ ನನಗೆ ಅತ್ಯಾನಂದವಾಗುತ್ತದೆ. ಆದ್ದರಿಂದ ಕಣ್ಣೀರು ಬರುತ್ತದೆ. ನಿನಗೂ ಆ ಅನುಭವವಾದರೆ ಕಣ್ಣೀರು ಬಂದೇ ಬರುತ್ತದೆ. ದುಃಖದಿಂದಲ್ಲ, ಸುಖದಿಂದ!". "36"

ಇದು ಕುವೆಂಪು ಕಾಲದ ಹೂವಯ್ಯ ಕಂಡ ಪ್ರಕೃತಿಯ ತಿಳುವಳಿಕೆ. ಈ ಕಾದಂಬರಿ ಪ್ರಕೃತಿಯನ್ನು ಸೃಷ್ಟಿಸಿದ ದೇವರು ಆ ಪ್ರಕೃತಿ ಪರಿಸರದಲ್ಲೇ ಐಕ್ಯವಾಗಿದ್ದಾನೆಂದು ಹೇಳುತ್ತಿದೆ. ಕಾದಂಬರಿ ಹೂವಯ್ಯನ ಪಾತ್ರದೊಡನೆ ಪ್ರಕೃತಿಯ ಸೃಷ್ಟಿ ಸ್ವರೂಪ ಅದರ ಮನೋಜ್ಞತೆಯನ್ನು ಮುಗ್ಧ ಸೀತೆಗೆ ಹೇಳುತ್ತಿದೆ. ಇಲ್ಲಿ ಹೂವಯ್ಯನ ಭಾವನಾತ್ಮಕ ಪರಿಸರ ತಿಳುವಳಿಕೆಯ ಸಾಕ್ಷಾತ್ ದರ್ಶನವನ್ನು ಕಾಣುತ್ತೇವೆ. ಈ ತಿಳುವಳಿಕೆಯಿಂದ ಮನುಷ್ಯನ ಜೀವನ ಮೌಲ್ಯ ಹೂವಯ್ಯನ ಸುಖದ ಭಾವನಾತ್ಮಕ ಕಣ್ಣೀರಿನಿಂದ ಹೊರಹೊಮ್ಮಿದೆ. ಇದೂ ಕೂಡ 'ಕಾನೂರು ಹೆಗ್ಗಡತಿ'ಯ ಆ ಕಾಲಕ್ಕೂ , 'ಜುಗಾರಿಕ್ರಾಸ್'ನ ಈ ಕಾಲಕ್ಕೂ ಇರುವ ವ್ಯತ್ಯಾಸ.

'ಜುಗಾರಿ ಕ್ರಾಸ್' ಕೃತಿಯ ಮೇದರ ಹಳ್ಳಿಯ ದ್ಯಾವಮ್ಮ ಮೂಕಿ. ಮೂಕಿಯಾಗಿರುವ ಈ ಪಾತ್ರ ಧ್ವನಿಯೇ ಇಲ್ಲದಂತಾಗಿ, ಆ ಊರಿನ ಸ್ಥಿತಿಯನ್ನು ಪ್ರತಿನಿಧಿಸುವ ಸಾಂಕೇತಿಕ ಪಾತ್ರವಾಗಿರುವುದನ್ನು ಕಾಣುತ್ತೇವೆ.

ದ್ಯಾವಮ್ಮನ ಮಗಳಿಗೆ, ತನ್ನ ತಾಯಿಯ ಒಡನಾಟವಷ್ಟೇ ಇದ್ದುದ ಮಾತು ಬಾರದೆ ಅವಳೂ ಮೂಕಿಯಾಗಿದ್ದಳು. ಆದರೆ ದೇವಪುರದ ದೂರ ಸಂಬಂಧಿಯೊಬ್ಬರ ಮನೆಗೆ ಹೋಗಿ ಬಂದಾಗಿನಿಂದ

ಮಾತನಾಡುತ್ತಿದ್ದಾಳೆ. ಈ ಹುಡುಗಿ ಹೂ ಮಾರಲು ರಸ್ತೆ ಬದಿ ನಿಂತು ಎತ್ತಿಹಿಡಿದ ಹೂವಿನ ಮಾಲೆಯನ್ನು ಕೊಳ್ಳಲು ಯಾವ ಗಿರಾಕಿಯು ಸಿಗುತ್ತಿಲ್ಲ. ಹಾಗಾಗಿ ಈ ಮುಗ್ಧ ಹುಡುಗಿಗೆ ಯಾರೂ ಸ್ಪಂದಿಸದಿರುವುದು ಆ ಊರಿನ ಶೂನ್ಯ ಸ್ಥಿತಿಯಾಗಿದೆ. ಈ ಚಿಕ್ಕ ಹುಡುಗಿಗೆ "ಹೃದಯ ಹೀನ ಪ್ರಪಂಚದ ಬಗ್ಗೆ ನಿಧಾನವಾಗಿ ದುಃಖವಾಯ್ತು". ಎನ್ನುವಲ್ಲಿ ಈ ಹುಡುಗಿ ಭಾವನೆಗಳು ಬತ್ತಿದಂತೆ ಹೂ ಮಾಲೆಗಳು ಬತ್ತುತ್ತವೆ. ಈ ಸ್ಥಿತಿಯಲ್ಲೂ ಆಶಾವಾದಿಯಾಗಿ ನಿಲ್ಲುವ ಹುಡುಗಿಯ ಕ್ರಿಯಾಶೀಲ ಸ್ವಭಾವ ಮಾತ್ರ ಮಾರ್ಮಿಕವಾದುದ್ದಾಗಿದೆ.

ಹಾಗೆಯೇ ನಿಸರ್ಗ ನಿಧಿಗೆ ದುರಾಸೆಯಿಂದ ಲಗ್ಗೆ ಹಾಕಿದ ಜನ ಅದರಿಂದ ಬಿಡಿಸಿಕೊಳ್ಳದವರಾಗುತ್ತಾರೆ. ಎಂಬುದಕ್ಕೆ ದೌಲತ್ ರಾಮ್, ಕುಟ್ಟಿ [ರಾಮ ಪ್ರಸಾದ್] ಪಾತ್ರಗಳು ಈ ಸಮಾಜದೊಳಗಿನ ಪಾತ್ರಗಳಾಗಿ ಪ್ರತಿನಿಧಿಸುತ್ತವೆ.

'ದೋಣಿ ಹೊಳೆ' ಕಾದಂಬರಿಯ ಕೇಂದ್ರಬಿಂದು. ಇದರದು ಒಂದು ದೊಡ್ಡ ಚರಿತ್ರೆ, ಇದರ ಹಳೆಯ ಹೆಸರೆ 'ರತ್ನಮೂಲ' ಈ ರತ್ನ ಮೂಲದ ಮೂಲ ಶೋಧನೆಯೇ ಮಾಪ್ರೋ ಬರೆದ ರೆಡ್ ಬುಕ್ಕಿನ ಏಳನೆ ಚಾಪ್ಟರ್. ಈ ಕಾರ್ಯದ ಮುಂದುವರಿಕೆ ಸುರೇಶನದಾಗಿದೆ. ಈ ಸುರೇಶನಿಗೆ ಅವನಿದ್ದ ಯೂರೋಪಿಯನ್ ಕಂಪನಿಯ ಆಫೀಸಿನೊಳಗೆ ಸಿಕ್ಕ ಡೈರಿ, ಮತ್ತು ನೋಟ್ಸ್ ಟಿಪ್ಪಣಿಗಳು ಕುತೂಹಲ ಕೆರಳಿಸುವಂತಿದ್ದವು. ಇವುಗಳ ಓದಿನಿಂದ ಸುರೇಶನಿಗೆ " ಆಗಿನ ಪಶ್ಚಿಮ ಘಟ್ಟದ ಕಾಡುಗಳ ಭೀಕರ ದುರ್ಗಮ ಸನ್ನಿವೇಶಗಳಲ್ಲಿ ಸಾವು ಬದುಕಿನ ಹೋರಾಟ ನಡೆಸಿ ಅವರು ಇಲ್ಲೆಲ್ಲಾ ಪ್ಲಾಂಟೇಶನ್ ಗಳನ್ನು ಪ್ರಾರಂಭಿಸಿದ್ದು" ಎಂದು ತಿಳಿಯಿತು. ಇದರಿಂದ ಸುರೇಶನಿಗೆ ದೋಣಿ ಹೊಳೆ ಪರಿಸರದ ಬಗ್ಗೆ ಹೆಚ್ಚು ತಿಳಿಯಲು ಕಾತರವಾಗಿದೆ.

ಯೂರೋಪಿಯನ್ನರು "ಮಹಷೀರ ಮೀನುಗಳನ್ನೂ ಗಾಳದಲ್ಲಿ ಹಿಡಿಯಲು ನಾನು ಮಿಕ್ಕ ಜೀವಮಾನವನ್ನೆ ವ್ಯಯಿಸಲು ತಯ್ಯಾರಾಗುತ್ತೇನೆ" ಎಂದು ಮಹಷೀರ ಮೀನುಗಳನ್ನು ಹೊಗಳಿ ಬರೆದಿದ್ದನ್ನು ನೋಡಿ ಸುರೇಶನಿಗೆ "ಮೀನು ಹಿಡಿಯುವುದರಲ್ಲಿ ಯೂರೋಪಿಯನ್ನರಿಗಿರುವ ಶ್ರದ್ಧಾಸಕ್ತಿಗಳ ಬಗ್ಗೆ ಅವನಿಗೆ ವಿಪರೀತ ಅಚ್ಚರಿಯಾಯ್ತು". ಈ ಯೂರೋಪಿಯನ್ನರೂ ಹಿಡಿಯುವ ಮೀನು, ದೋಣಿ ಹೊಳೆಯಲ್ಲಿ ಸಿಕ್ಕುವ ನಿಧಿಯ ಸಂಕೇತವಾಗಿದೆ. ಈ ನಿಧಿ ಯೂರೋಪಿಯನ್ನರ ಗಮನ ಸೆಳೆದಿದೆ; ಈ ಹೊಳೆ ಬರಿದಾಗುವ ಕಾಲ ಸಮೀಪಿಸಿದಂತಾಗಿದೆ. ಯಾಕೆಂದರೆ ವಸಾಹತು ಶಾಹಿಗಳಿಗೆ ಇಂತಹ ವಾಸನೆ ಬಿತ್ತೆಂದರೆ ಇವರು ಸಿಕ್ಕುವ ಸಂಪತ್ತನ್ನು ಬಲೆ ಹಾಕಿಗೋಜುವ ಸ್ವಭಾವದವರು. ಹಾಗಾಗಿ ಇದರ ಮಹತ್ವ ತಿಳಿದ ಯೂರೋಪಿಯನ್ನರು ತಮ್ಮ ಬಲೆಗೂ ಬೀಳದ ಸಂಪತ್ತಿಗೆ ಹೂಡಿದ ಇನ್ನೊಂದು ತಂತ್ರವೇ ಈ ಗಾಳ. ಮೋಸದ ಸಂಕೇತವಾದ ಈ ಗಾಳ ಸಂಪೂರ್ಣ ಬರಿದು ಮಾಡುವ ತಂತ್ರ, ಈ ತಂತ್ರದಿಂದಲೇ ಯೂರೋಪಿಯನ್ನ ಒಬ್ಬನು "ಜೀವಮಾನವನ್ನೆ ವ್ಯಯಿಸಲು ತಯ್ಯಾರಾಗುತ್ತೇನೆ' ಎಂದು ಸಂಕಲ್ಪಿಸಿರುವುದು. ಈ ಸಂಕಲ್ಪ ದೋಣಿ ಹೊಳೆಯ ಕೆಂಪು ಹರಳಿನ ಪ್ರಭಾವದ್ದು ಮತ್ತು ಇಲ್ಲಿಯ ಕಾಡು, ದೋಣಿಹೊಳೆಯ ನಿಗೂಢ ರಹಸ್ಯವನ್ನು ಲೇಖಕರು ತೋರಿಯು ತೋರದಂತೆ ವರ್ಣಿಸಿರುವುದು ಹೀಗೆ:

> "ಸುರೇಶ, ನದಿಯ ಜಾಡಿನಲ್ಲಿ ಕಾಡಿನ ಒಳಗೊಳಗೆ ಹೋದ ಹಾಗೂ ಮನುಷ್ಯನ ಸುಪ್ತ ಪ್ರಜ್ಞೆಯ ಆಳಾಳಕ್ಕೆ ಇಳಿದಂತೆ ಸಾವಿನ ನಿಗೂಢತೆಯನ್ನು ಅರಸಿದಂತೆ ಅನ್ನಿಸುತ್ತಿತ್ತು. ಸುತ್ತ ಚಿತ್ರ ವಿಚಿತ್ರವಾದ ಕರಿಯ ಕಲ್ಲುಗಳು! ಮಿಲಿಯಾಂತರ ವರ್ಷಗಳಿಂದ ನೀರು ಹರಿದು ಹರಿದು ಕನ್ನಡಿಯಷ್ಟು ನುಣ್ಣಗಾಗಿ ಕನ್ನಡಿಯಂತೆಯೇ ಹೊಳೆಯುತ್ತಿದ್ದವು. ಅವುಗಳ ನಡುವೆ ತೂರಿದ ಹತ್ತಿಯ ಮುದ್ದೆಗಳಂತೆ ಭೋರ್ಗರೆಯುತ್ತ ದೋಣಿ ಹೊಳೆ ನುಗ್ಗಿ ವಿಸ್ತಾರವಾದ ಕಮರಿಯೊಂದರಲ್ಲಿ ವಿರಮಿಸಿ ಮುಂದುವರಿಯುತ್ತಿತ್ತು. ಆ ಮಡುವಿಗೆ ಗಿರಿಗಿರಿ ತಿರುಗಿಸಿ ಸುಯ್ಯುದ್ದಾಳ ಎಸೆದ ಕೂಡಲೆ ದಾರಕ್ಕೆ ಕಟ್ಟಿದ್ದ ಬೆಳ್ಳಿಯ ಸ್ಪೂನು ಫಳಫಳ ಮಿಂಚಿನ ಮರಿಯಂತೆ ಸಂಜೆಯ ಇಳಿ ಬಿಸಿಲಿನಲ್ಲಿ ಮಿನುಗುತ್ತ ಸುಯ್ಯನೆ ಹಾರಿ ಮಡುವಿನ ಆಳದ ನೀಲಿಯ ನೀರಿಗೆ ಬಿತ್ತು. ಸುರೇಶನಿಗೆ ಬಿದ್ದಿದ್ದಷ್ಟೇ ಗೊತ್ತು! ಮುಂದೇನಾನಾಯ್ತೆಂಬುದೆಲ್ಲಾ ಅಸ್ಪಷ್ಟ! ನೀರಿನ ನಡುವೆ ದೊಡ್ಡ ಆಸ್ಫೋಟನೆಯಾದಂತಾಗಿ! ಯಾರೋ ದಿಕ್ಕನೆ ಎಳೆದಂತೆ , ತಳ್ಳಿದಂತೆ! ಸುರೇಶ ತತ್ತರಿಸಿ ತಡಬಡಾಯಿಸಿ ಭೀತರಿಸಿಕೊಂಡು ಏನಾಯ್ತೆಂದು ನೋಡುವುದರೊಳಗೆ ಕೈಯಲ್ಲಿದ್ದ ಗಾಳದಾರ ಎಲ್ಲ ಮಾಯ!... ಆದರೆ ಅವತ್ತಿನಿಂದ ತಟಕ್ಕನೆ ಸುರೇಶನಿಗೆ ಯಾಕೆ ಮಹಷೀರ ಮೀನು ಯೂರೋಪಿಯನ್ನನ ಟಿಪ್ಪಣಿಯ ಬಹುಭಾಗ ಆಕ್ರಮಿಸಿದೆ ಎಂದು ಅರ್ಥವಾಗತೊಡಗಿತು". "37"

ಮಿಲಿಯಾಂತರ ವರ್ಷ ಕಾಡು ನದಿಗಳ ಈ ಪ್ರಕೃತಿಯನ್ನು ಇಲ್ಲಿ ನಡೆಯುತ್ತಿರುವ ಈ ನಿಗೂಢ ರಹಸ್ಯವನ್ನು; ಈ ಪರಿಸರ ಮತ್ತು ಇದರ ರಹಸ್ಯ ಅರ್ಥಮಾಡಿಕೊಳ್ಳ ತೊಡಗಿದ ಸುರೇಶನ ತಿಳುವಳಿಕೆಯನ್ನು ಸೂಕ್ಷ್ಮವಾಗಿ ಇಲ್ಲಿ ಹಿಡಿದಿಟ್ಟಿದ್ದಾರೆ. "ನದಿಯ ಜಾಡಿನಲ್ಲಿ ಕಾಡಿನ ಒಳಗೊಳಗೆ ಹೋದ ಹಾಗೂ ಮನುಷ್ಯನ ಸುಪ್ತ ಪ್ರಜ್ಞೆಯ ಆಳಾಳಕ್ಕೆ ಇಳಿದಂತೆ! ಸಾವಿನ ನಿಗೂಢತೆಯನ್ನು ಅರಸಿದಂತೆ ಅನ್ನಿಸುತ್ತಿತ್ತು" ಎನ್ನುವ ಮಾತಿನಿಂದ ಲೇಖಕರ ಪ್ರಕೃತಿ ತಿಳುವಳಿಕೆಯ ಅನುಭವದ ಅಭಿವ್ಯಕ್ತಿಯಾಗಿದೆ. ಹಾಗೆಯೇ ಸುರೇಶನು ಎಸೆದ ಗಾಳ, ದಾರದ ಸ್ಪೂನು ನೀರಿಗೆ ಬಿದ್ದಿದ್ದು ಅದರ ಮುಂದಿನ ಅಸ್ಪಷ್ಟ ಚಿತ್ರ ಹಾಗೂ ನೀರೊಳಗಿನ ಆಸ್ಫೋಟನೆ ಮತ್ತು ಸುರೇಶನನ್ನು ಯಾರೋ ಎಳೆದು ತಳ್ಳಿದಂತಾಗಿ ಕೈಯಲ್ಲಿದ್ದ ಗಾಳ, ದಾರ ಎಲ್ಲ ಮಾಯಾವಾಗಿದ್ದು ಎಲ್ಲ ಆ ದೋಣಿ ಹೊಳೆಯ ಕ್ರಿಯಾತ್ಮಕ ಅಸ್ಪಷ್ಟ ನಿಗೂಢ ರಹಸ್ಯವಾಗಿವೆ.

ಈ ರಹಸ್ಯವರಿತ ತಿಳುವಳಿಕೆಯವನಂತೆ ಶೇಷಪ್ಪ, ಸುರೇಶ ಮತ್ತು ಗೌರಿಯರಿಗೆ ಏಲಕ್ಕಿ ಮಾರಾಟದಿಂದ ತಂದ ಚೆಕ್ ಮತ್ತು ಜೀವನ್ ಲಾಲ್ ನ ಕಾಳದಂಧೆ ವ್ಯವಹಾರಗಳ ಬಗ್ಗೆ ಸೂಕ್ಷ್ಮ ಸುಳಿವು ನೀಡುತ್ತಾನೆ. ಯಾವಾಗೆಂದರೆ ಏಲಕ್ಕಿ ಹರಾಜಿನಿಂದ ತಂದ ಚೆಕ್ಕೆಂದು ಸುರೇಶನ ಮಾತಿಗೆ ಶೇಷಪ್ಪ "ಏಲಕ್ಕಿ ಅಂದರೆ!" "ನನ್ನ ಹತ್ತಿರ ಮುಚ್ಚುಮರೆ ಮಾಡಬೇಡಿ" ಎನ್ನುತ್ತಾನೆ. ಆಗ ಗೌರಿ ಕುತೂಹಲಕ್ಕೆ "ಮತ್ತೇನಂತ ನಿನ್ನ ಅಂದಾಜು"? ಎಂದೊಡನೆ ಜುಗಾರಿ ಕ್ರಾಸಲ್ಲಿ ಏಲಕ್ಕಿ ಅಂದರೆ ಬಾಳ ಅರ್ಥ ಉಂಟಮ್ಮ. ಏಲಕ್ಕಿ ಸಪ್ಪೆ ಅಂದರೆ ಗಾಂಜ ಆಫೀಮು, ಕೆಂಪುಕಲ್ಲು, ಗಂಧ ಏನು ಬೇಕಾದರೂ ಆಗಬಹುದು. ನೀವು ಹರಾಜಿಗೆ ಇಟ್ಟ ಏಲಕ್ಕಿ ಅಂದ ಮೇಲೆ ಅದು ಏಲಕ್ಕೀನೆ ಬಿಡಿ" ಎಂದು ಬಿಡುತ್ತಾನೆ. ಅಂತೂ ಚೆಕ್ಕಿನ ಹಣ ಪಡೆದು ಹೋಗುತ್ತಿದ್ದ ಸುರೇಶನನ್ನು ಕರೆದು ಶೇಷಪ್ಪ ತನ್ನ ಬೆನ್ನ ಹಿಂದಿನ ಕನ್ನಡಿಯನ್ನು ನೋಡ ಹೇಳುತ್ತಾನೆ. ಆ ಕನ್ನಡಿಯಲ್ಲಿಃ

> "ಚಲಿಸುವ ಬಿಂಬಗಳು ಅತ್ತಿತ್ತ ಸರಿದಂತೆ ರಬ್ಬರ್ ವಸ್ತುಗಳ ರೀತಿ ಉದ್ದವಾಗುತ್ತ ಒಮ್ಮೊಮ್ಮೆ ಕುಗ್ಗುತ್ತ ಒಮ್ಮೊಮ್ಮೆ ಇನ್ನೇನು ಹಿಸಿದೇ ಹೋಗುವಂತೆ ಅಗಲವಾಗುತ್ತ ಕನ್ನಡಿಯ ಯಾವುದೋ ಒಂದು ಭಾಗವನ್ನು ದಾಟುತ್ತಲೂ ಮತ್ತು ಯಥಾ ಸ್ಥಿತಿಗೆ ಬರುತ್ತಿದ್ದವು.... ರಸ್ತೆಯಲ್ಲಿ ಬರುತ್ತಿದ್ದ ಎಮ್ಮೆಯೊಂದು ಮುಂದುವರಿಯುತ್ತಿದ್ದಂತೆಯೇ ಹಠಾತ್ತಾಗಿ ಭೂತಾಕಾರವಾಗಿ ಆನೆಯಂತಾಗಿ ಮತ್ತೆ ಎರಡು ಹೆಜ್ಜೆಯೊಳಗೆ ನಾಯಿಯಷ್ಟು ಚಿಕ್ಕದಾಗಿ ಮತ್ತು ಎರಡು ಹೆಜ್ಜೆಗೆ ಸಾಧಾರಣ ಎಮ್ಮೆಯಾಗಿ ಮುಂದುವರಿದು ಕನ್ನಡಿಯ ಫ್ರೇಮನ್ನು ದಾಟಿ ಹೋಯ್ತು". "38"

ಈ ಕನ್ನಡಿ ದೇವಪುರದ, ಜುಗಾರಿಕ್ರಾಸಿನ, ದೋಣಿಹೊಳೆಯ ಸಮಸ್ತ ನಿಧಿ ಸಂಪತ್ತಿನ ಸ್ಥಿತಿಗತಿಯನ್ನು ಬಿಂಬಿಸುವಂತೆ ಜೀವನವನ್ನೆದುರಿಸುವ ಕೆಲವು ಅಂಶಗಳನ್ನು ಧ್ವನಿಸುತ್ತದೆ. ಇಲ್ಲಿ ಜೀವನವನ್ನೆದುರಿಸಲು ಆಶಾವಾದ, ನಿರಾಶವಾದಗಳು ಜೊತೆ ಜೊತೆಯಲ್ಲಿವೆ. ಆದರೆ ಇವೆಲ್ಲವನ್ನು ಮೀರಿದ, ಇನ್ಯಾವುದೋ ಒಂದು ಸಂದಿಯಲ್ಲಿ ನುಸುಳಿ ಸಾಗುವ, ಬದುಕಿನ ಗಂಭೀರ ಎದೆಗಾರಿಕೆಯನ್ನು ಕಣ್ಣೆದುರಿಡುವಂತೆ: ಕನ್ನಡಿಯ ದೃಶ್ಯಗಳು ಸುರೇಶನ ಕಣ್ಣ ಮುಂದೆ ಸುಳಿಯುತ್ತಿವೆ. ಈ ಕಾದಂಬರಿಯ ಮುಂದಿನ ಭಾಗದ ಕೆಲವು ಸುಳಿವುಗಳನ್ನು ನೀಡುವಂತಹ ಸೂಕ್ಷ್ಮ ಅಂಶಗಳನ್ನು ಇಲ್ಲಿ ಗ್ರಹಿಸಬಹುದಾಗಿದೆ.

ಈ 'ಮುನ್ನೂರಕ್ಕೆ ಕೊಟ್ಟಿದ್ದ ಏಲಕ್ಕಿ ಈ ಸಾರಿ ಸಾವಿರಕ್ಕೆ ಹೋಗಿದೆ'. ಎಂದು ಸುರೇಶ ಗೌರಿ ಏಲಕ್ಕಿಗೆ ಸಿಕ್ಕ ತೃಪ್ತಿಕರ ರೇಟಿನಿಂದ ನೆಮ್ಮದಿಯಿಂದಿದ್ದರು. ಆ ಕಾಲದಲ್ಲಿ ಶೇಷಪ್ಪನಿಂದ ಪಡೆದ ಚೆಕ್ಕಿನ ಹಣವನ್ನು ಎಣಿಸಿದಾಗ ಲಕ್ಷಗಟ್ಟಲೆ ಜಾಸ್ತಿ ಇದ್ದದ್ದು ಕಂಡು ಸುರೇಶಗೌರಿಯರು ಚಕಿತರಾಗುತ್ತಾರೆ. ಯಾಕೆಂದರೆ ಇದು ಏಲಕ್ಕಿಗೆ ಸಿಕ್ಕ ರೇಟಲ್ಲ. ಇದರೊಳಗೆ ಏನೋ ರಹಸ್ಯ ವಿದೆ ಎಂದು; ತಮ್ಮದಲ್ಲದ ಈ ಹಣಕ್ಕೆ ಅತೃಪ್ತರಾಗುತ್ತಾರೆ. ನಂತರ ಶೇಷಪ್ಪನ ಕೊಲೆಯಾದದ್ದನ್ನು ಕೇಳಿದ ಸುರೇಶನಿಗೆ; ಕಳವಳ ನಿರಾಶೆಗಳು ದ್ವಿಗುಣಗೊಂಡವು. ಇದು ಈ ಸಮಾಜದ ಪ್ರಸ್ತುತ ಸನ್ನಿವೇಶದ ಸ್ಥಿತಿ. ಜಾಸ್ತಿ ಏಲಕ್ಕಿ ತೂಕ ಬಂದದ್ದನ್ನು ನೆನಪಿಸಿದ ಗೌರಿಯ ಮಾತಿಗೆ; ಸುರೇಶನಿಗೆ; ಅವತ್ತಿನ ವ್ಯವಹಾರದ ಮೇಲೆಲ್ಲಾ ಅನುಮಾನ

ಸುಳಿಯುತ್ತದೆ. ಹಾಗಾಗಿ ಇಬ್ಬರೂ ಅತಂಕಪಟ್ಟು ಬಸ್ಸ್ ಬಿಟ್ಟು ರೈಲಿಗೆ ಹೋಗಲು ತೀರ್ಮಾನಿಸಿ ಹತ್ತಿದರು. ಬಸ್ಸ್ ಸ್ಟ್ಯಾಂಡಿನಲ್ಲಿ ಸಿಕ್ಕಿ ಹೋಗಿದ್ದ ರಾಜಪ್ಪ ಹೋಗುವ ಮಧ್ಯೆ ರೈಲು ಬೋಗಿ ಹತ್ತಿದ. ಮೂವರು ರೈಲಿನಲ್ಲಿ ಒಟ್ಟಿಗೆ ಪ್ರಯಾಣಿಸುತ್ತಿದ್ದಾಗ ರಾಜಪ್ಪ; ಗುರುರಾಜ ಪಂಡಿತನ 'ದ್ವಿಸಂಧಾನ ಕಾವ್ಯ' ಸಂಪಾದಿಸಲು ಹೊರಟ ಸುದ್ದಿ ತಿಳಿಸುತ್ತಾನೆ. ಆಗ ಸುರೇಶ ಅದರ ಕಥೆಹೇಳೆಂದು ಕೇಳುತ್ತಾನೆ. ರಾಜಪ್ಪ ಅದರ ಕಥೆ ಸರ್ವೇ ಸಾಧಾರಣ ಜೈನ ಸಾಹಿತ್ಯದ ಕಥೆ ಎಂದು ಪ್ರಾರಂಭಿಸುತ್ತಾನೆ.

> "ಒಬ್ಬ ರಾಜನಿಗೆ ನರ್ತಕಿಯ ಮೇಲೆ ಅನುರಾಗ ಹುಟ್ಟುತ್ತದೆ. ಆದರೆ ನರ್ತಕಿ ಯಾವುದೇ ಪ್ರತಿಕ್ರಿಯೆ ತೋರುವುದಿಲ್ಲ. ಆದರೆ ರಾಜ ಹಟ ತೊಟ್ಟು ಹಣ, ರಾಜ್ಯ ಎಲ್ಲವನ್ನು ಒಂದೊಂದಾಗಿ ತ್ಯಜಿಸುತ್ತಾನೆ. ಕೊನೆಗೆ ನರ್ತಕಿ ಮನ ಕರಗಿ ಪ್ರೀತಿಸುತ್ತಾಳೆ. ಆಗ ಅವಳಿಗೆ ಗೊತ್ತಾಗುತ್ತೆ ರಾಜ ಪ್ರೀತಿಸುತ್ತಿದ್ದುದು ನನ್ನನ್ನಲ್ಲ ನನ್ನ ಶಿಖೆಯಲ್ಲಿದ್ದ ಕೆಂಪು ಮಾಣಿಕ್ಯವನ್ನು ಎಂದು. ಬೇಸರಗೊಂಡ ನರ್ತಕಿ ಆ ಮಾಣಿಕ್ಯವನ್ನು ಕೊಟ್ಟು ಬಿಡುತ್ತಾಳೆ. ಆಗ ರಾಜನಿಗೆ ಜ್ಞಾನೋದಯವಾಗುತ್ತದೆ. ತಕ್ಷಣ ಆಕೆಯ ಪಾದ ತಲದಲ್ಲೇ ತಪಸ್ಸಿಗೆ ಕುಳಿತು ನಿರ್ವಾಣ ಪಡೆಯುತ್ತಾನೆ" ಇದನ್ನು ಕೇಳಿದ ಸುರೇಶನಿಗೆ ಕಡತಗಳ ಕರ್ತೃ ಯೂರೋಪಿಯನ್ ಉಲ್ಲೇಖಿಸಿದ್ದ 'ಜಿರಾಜ' ಕವಿಯೇ ಈ 'ಗುರುರಾಜ' ಕವಿ ಎಂದು ನಿರ್ಧರಿಸುತ್ತಾನೆ. "39"

ಈ ಕಥೆಯಲ್ಲಿ ರಾಜ, ನಾಡಿನ ಈ ಜನರ ಪ್ರತಿನಿಧಿಯಾದರೆ; ಸುಂದರಿಯಾದ ನರ್ತಕಿ ಕಾಡಿನ ಸಂಕೇತವಾಗಿದ್ದಾಳೆ ಮತ್ತು ಅವಳ ಶಿಖೆಯಲ್ಲಿದ್ದ ಕೆಂಪು ಮಾಣಿಕ್ಯ ಆ ಕಾಡಿನ ಸಂಪತ್ತಿನ ಸಂಕೇತವಾಗಿದೆ. ಇಲ್ಲಿ ರಾಜ ನರ್ತಕಿಯನ್ನು ಪ್ರೀತಿಸುವುದು; ಅವಳಿಗಾಗಿ ಅಲ್ಲ. ಅವಳ ಕೆಂಪು ಮಾಣಿಕ್ಯಕ್ಕಾಗಿ. ಇದು ನಾಡು ಮತ್ತು ನಾಡಿನ ಜನಕ್ಕೆ ಕಾಡಿನ ತಿಳುವಳಿಕೆ, ಪ್ರೀತಿಯಿರುವುದು, ಕಾಡಿನ ಸೌಂದರ್ಯವನ್ನು ಕಾಪಾಡಲಿಕ್ಕಾಗಿ ಅಲ್ಲ; ಆ ಕಾಡಿನ ಸಂಪತ್ತನ್ನೆಲ್ಲ ಸ್ವಾರ್ಥ ಅನುಭವದಲ್ಲಿ ದುಂದು ಬಳಕೆ ಮಾಡುವುದಕ್ಕಾಗಿಯಾಗಿದೆ. ಈ ರೀತಿಯಲ್ಲಿ ಈ ಕಾದಂಬರಿಯೊಳಗೆ ಪರಿಸರದ ಕಾಡು, ಪ್ರಕೃತಿ. ನಿಸರ್ಗ ಸಂಪತ್ತು ಕ್ಷೀಣಿಸುತ್ತಿರುವ ರಹಸ್ಯ ಕ್ರಿಯೆಯನ್ನು ಈ 'ದ್ವಿಸಂಧಾನ ಕಾವ್ಯ' ಗರ್ಭೀಕರಿಸಿಕೊಂಡಂತೆ ಈ ಕಾದಂಬರಿ ರಚನೆಗೊಂಡಿದೆ.

ಸುರೇಶ ರಾಜಪ್ಪ ಕೊಟ್ಟ ಕಾವ್ಯ ಓದುತ್ತ ಕಾವ್ಯದಲ್ಲಿ ಬರುವ "ಸುಂದರಿಯು...." ಎಂಬ ಪ್ರತಿ ಸಾಲನ್ನು ಗಮನಿಸಿ ಅನುಮಾನಿಸಿ ಅದರ ಅರ್ಥ ಸುಳಿವು ಸಿಕ್ಕಿದವನಂತೆ ಏನೆಲ್ಲ ಯೋಚಿಸುತ್ತಾನೆ.

> "ಮುನ್ನೂರು ವರ್ಷದ ಹಿಂದೆ ದೋಣಿಹೊಳೆಗೆ ಈ ದೋಣಿಹೊಳೆ ಎಂಬ ಹೆಸರೇ ಇರಲಿಲ್ಲ. ಆಗ ಅದಕ್ಕಿದ್ದ ಹೆಸರು 'ರತ್ನಮೂಲ '! ಕರೆಕ್ಟ್ ರತ್ನಮೂಲ ಎಂದರೆ ಹೊಳೆಯ ಹೆಸರಾಯ್ತು! 'ರತ್ನಮಾಲ' ಎಂದರೆ ನರ್ತಕಿಯ ಹೆಸರಾಯ್ತು! ದ್ವಿಸಂಧಾನ ಕಾವ್ಯಕ್ಕೆ ಸರಿಹೊಂದುವ ಪದ ಇವೇ ಸರಿ!"."40"

ಎಂಬ ನಿಲುವಿಗೆ ಬರುತ್ತಾನೆ. ದೋಣಿ ಹೊಳೆಗೂ, ಈ ರತ್ನಮೂಲ ಹೆಸರಿಗೂ ಈ ಕಡತದಲ್ಲಿ ಈ ಹೆಸರಿನಷ್ಟಕ್ಕೆ ಹುಳು ತಿಂದಂತಿರುವ ಇದರ ರಹಸ್ಯ ಕ್ರಿಯೆ ಹಾಗೂ ಯೂರೋಪಿಯನ್ ನು ತನ್ನ ಡೈರಿಯಲ್ಲಿ ಬರೆದ ಟಿಪ್ಪಣಿಯ ಸೂಚನೆ ಸುಳಿವುಗಳಿಂದ ಮತ್ತಷ್ಟು ಸ್ಪಷ್ಟವಾಗಿ ಅವನಿಗೆ ಅರ್ಥವಾಯಿತು. ಹೆಸರೇ ಸೂಚಿಸುವವಂತೆ ಈ ಕಾವ್ಯದ 'ದ್ವಿ ಸಂಧಾನ' ಕ್ರಿಯೆ ಮತ್ತು ಇದರೊಳಗಿನ ರಹಸ್ಯಸಂಬಂಧ ಸುರೇಶನಿಗೆ ಆಶ್ಚರ್ಯ ಕುತೂಹಲಗಳೆರಡೂ ಮೂಡಿಸಿ ಮತ್ತೊಮ್ಮೆ ಓದ ತೊಡಗುತ್ತಾನೆ. ಆವಾಗ ಇದರ ರಹಸ್ಯ ಸುಳಿವು ಸಿಕ್ಕಿದ್ದು ಹೀಗೆಃ

> "ಗುರು ರಾಜ ಕವಿಯ ಕಾವ್ಯ ಒಂದು ಅರ್ಥದಲ್ಲಿ ಉತ್ತುಂಗ ರಾಜನಿಗೆ ರತ್ನಮಾಲ ನರ್ತಕಿಯು ತನ್ನ ಶಿಖೆಯಲ್ಲಿನ ಕೆಂಪು ಮಾಣಿಕ್ಯವನ್ನು ಕೊಟ್ಟ ಕಥೆಯಾದರೆ; ಇನ್ನೊಂದು ಅರ್ಥದಲ್ಲಿ ರತ್ನಮೂಲ ಅಥವಾ ದೋಣಿ ಹೊಳೆಯ ಮೂಲದಲ್ಲೆಲ್ಲೋ ಸಹ್ಯಾದ್ರಿಯ ಶೃಂಗ ಶಿಖೆಯಲ್ಲಿ ಕೆಂಪು ರತ್ನ ದೊರೆಯುವ ಜಾಗ ನಿರ್ದೇಶಿಸುವ ನೀಲ ನಕ್ಷೆಯಾಗಿತ್ತು"."41"

ಹೀಗೆ ಸುರೇಶನಿಗೆ ಗುರುರಾಜ ಕವಿಯ 'ದ್ವಿಸಂಧಾನ ಕಾವ್ಯದ ರಹಸ್ಯ ಅರ್ಥವಾದ ಮೇಲೆ ಅವನ ಸಂಶೋಧನೆ ಸಫಲವಾದಂತಾಯಿತು.

ಈ ಸುರೇಶನ ಪಾತ್ರ, ಗುಣ, ಚಟುವಟಿಕೆ, ಬುದ್ಧಿ ಸಂಶೋಧನೆಗಳೆಲ್ಲ ಇದೇ ಲೇಖಕರ ಕರ್ವಾಲೋ ಕಾದಂಬರಿಯ 'ಕರ್ವಾಲೋ, ಮಂದಣ್ಣ', ಪಾತ್ರಗಳಿಗೆ ಸಮನಾಗಿ ನಿಲ್ಲುತ್ತದೆ. ಇವೆರಡು ಪಾತ್ರಗಳು ಒಂದೆ ಗುರಿ ಹಿಡಿದು ಸಾಗಿದ ಪಾತ್ರಗಳಾಗಿವೆ. ಹಾಗೆಯೇ ಈ ಎರಡು ಪಾತ್ರಗಳ ಬಗ್ಗೆ ತಿಳುವಳಿಕೆ ಇಲ್ಲದ ಜನ ಹೀಯಾಳಿಸುವುದು ಹೀಗೆಃ "ಮಲಯಾದ ಸ್ಕಾಲರ್‌ಶಿಪ್ಪಿನ ಮೇಲೆ ಮೈಸೂರಿಗೆ ಓದಲು ಬಂದ ಸುರೇಶ ಕನ್ನಡ ಸಾಹಿತ್ಯ ಓದಲು ಆರಿಸಿಕೊಂಡ". ಆವಾಗ ಇವರಪ್ಪ ಇವನನ್ನು 'ಗಾನ್ ಕೇಸು' ಎಂದು ತೀರ್ಮಾನಿಸಿದ್ದ. ಕರ್ವಾಲೋರನ್ನು ಪರಿಸರ ತಿಳುವಳಿಕೆ ಇಲ್ಲದ ಜನ ಅವರನ್ನು 'ಹುಚ್ಚ' ಎಂದು, ಮಂದಣ್ಣನನ್ನು 'ಗಾಂಪ' ಎಂದೂ ಕರೆಯುತ್ತಿದ್ದರು. ಸುರೇಶ ನಿಸರ್ಗ ನಿಧಿ, ಕೆಂಪು ಕಲ್ಲಿನ ರಹಸ್ಯದ ಶೋಧನೆಯಲ್ಲಿ ತೊಡಗಿದರೆ ಕರ್ವಾಲೋ ಪ್ರಕೃತಿ ಜೀವಿಯಾದ 'ಹಾರುವ ಓತಿ'ಯ ಶೋಧನೆ ಕಾರ್ಯ ಕೈಗೊಳ್ಳುತ್ತಾರೆ. ಸುರೇಶನಿಗೆ ರಾಜಪ್ಪ ಕರ್ವಾಲೋರಿಗೆ, ಮಂದಣ್ಣ ಸಹಾಯಕರಾಗಿ ನಿಲ್ಲುತ್ತಾರೆ. ಹಾಗೆಯೇ ಈ ಎರಡು ಪಾತ್ರಗಳ ಪರಿಸರ ತಿಳುವಳಿಕೆ ಒಂದೆಯಾಗಿದೆ. ಆದರೆ ಸುರೇಶನಲ್ಲಿ ಸಾಹಿತ್ಯದ ಮೂಲಕ ಪ್ರಕೃತಿಯ ತಿಳುವಳಿಕೆ ಕಾಳಜಿಯನ್ನು ಕಂಡರೆ ಕರ್ವಾಲೋರಲ್ಲಿ ವಿಜ್ಞಾನದ ಮೂಲಕ ಅವರ ಪ್ರಕೃತಿ ಪರಿಸರದ ಕಾಳಜಿ ತಿಳುವಳಿಕೆಯನ್ನು ಕಾಣಬಹುದಾಗಿದೆ.

ಸುರೇಶನಿಗೆ ಈ ಕಾವ್ಯ ಅರ್ಥವಾದ ಮೇಲೆ ಕುಮರಿ ಸ್ಟೇಷನ್ನಿನಲ್ಲಿ ಶೇಷಪ್ಪನ ಕೊಲೆ ಮಾಡಿದ್ದನ್ನು ಪ್ರಸ್ತಾಪಿಸುತ್ತಿದ್ದವರ ಮಾತು ಕೇಳಿದ ಆಗ ಶೇಷಪ್ಪ ಕನ್ನಡಿಯ ದರ್ಪಣ ತೋರಿಸಿ ಸುರೇಶನಿಗೆಃ "ಕುತ್ತಿಗೆಗೆ ಕೆಂಪು ಮಫ್ಲರು ಸುತ್ತಿಕೊಂಡು ನಿಂತಿದಾನಲ್ಲ, ಅವನ್ನ ಹಾಗೆ ಅವನ ಪಕ್ಕದಲ್ಲಿರೋನನ್ನ ಸರಿಯಾಗಿ ನೋಡಿಕೊಳ್ಳಿ ಪಕ್ಕ ಕೇಡಿಗಳು ಅವರು". ಎಂದು ವಿವರಿಸಿದ್ದನ್ನು ನೆನಪಿಗೆ ತಂದುಕೊಳ್ಳುತ್ತಾನೆ.

ಇಂತಹ ಗ್ಯಾಂಗಿನವರನ್ನು ಕನ್ನಡಿಯಲ್ಲಿ ತೋರಿಸಿ ವಿವರಿಸುವ ದೃಶ್ಯಗಳು ಅವಾಸ್ತವಿಕ ಸನ್ನಿವೇಶ, ಘಟನೆಗಳು ಆದರೂ ಈ ಅವಾಸ್ತವಿಕತೆಯಲ್ಲೆ ವಾಸ್ತವದ ಸನ್ನೀವೇಶ ಪಾತ್ರ ಘಟನೆಗಳನ್ನು ಹಿಡಿದಿಟ್ಟರುವುದು ಈ ಕಾದಂಬರಿಯ ವೈಶಿಷ್ಟ್ಯವಾಗಿದೆ.

ಇವೆಲ್ಲ ಸುರೇಶನಿಗೆ ನೆನಪಿಗೆ ಬಂದೊಡನೆ ಹೀಗೆ ಯೋಚಿಸುತ್ತಾನೆ.

> "ಕಾಲ ಮಿಂಚಿದ ಮೇಲೆ ಚಿಂತಿಸಿ ಫಲವಿಲ್ಲ. ರಾಜಪ್ಪನ ಬಗ್ಗೆಯೂ ಅವನು ಹೇಳಿದ್ದನ್ನೆಲ್ಲ ನಂಬುವಂತಿಲ್ಲ. ಕೆಂಪು ಮಫ್ಲರಿನಲ್ಲಿ ಕೊರಮನ ತಂಡ ನಮ್ಮನ್ನು ಹಿಂಬಾಲಿಸಿಕೊಂಡು ಕುಮರಿ ಸ್ಟೇಷನ್ನಿನಲ್ಲಿ ರೈಲು ಹಿಡಿದಿರ ಬೇಕಾದರೆ ರಾಜಪ್ಪನೂ ಇದೇ ರೀತಿ ನಮ್ಮನ್ನು ಹಿಂಬಾಲಿಸಿ ಒಂದೇ ರೈಲು ಹತ್ತಿರಬೇಕು" "42"

ಎಂದು ಅನುಮಾನಿಸಿ ರೈಲಿನಿಂದ ನೆಗೆದು ತಪ್ಪಿಸಿಕೊಳ್ಳಲು ಗೌರಿಗೆ ಹೇಳಿ ಇಬ್ಬರೂ ರೈಲಿನಿಂದ ಸುರಂಗದ ಮಧ್ಯೆ ನೆಗೆದು ತಪ್ಪಿಸಿಕೊಳ್ಳುತ್ತಾರೆ. ಇದರಿಂದ ಇವರೆಲ್ಲ ಏನೇ ನಿರಾಶೆಗಳು ಸುಳಿದರೂ ಆಶಾವಾದದಿಂದ ಗಂಭೀರ ಎದೆಗಾರಿಕೆಯ ಜೀವನ ದೃಷ್ಠಿಯನ್ನು ಕಾಣುತ್ತೇವೆ. ಇಲ್ಲಿ ಈ ಕಾದಂಬರಿಯ ಸೃಜನ ಶೀಲತೆಯನ್ನು ಗುರುತಿಸಬಹುದಾಗಿದೆ.

ಸುರಂಗದ ಮಧ್ಯೆ ಗೌರಿ ಸುರೇಶನ ಮಾತಿನಿಂದ ನಾಯಿತರಹ ಕೂಗುತ್ತಾಳೆ. ಆಗ ಸುರೇಶ..."ಯಾಕೇ ನಿನಗೆ ಕಾಡು ಪ್ರಾಣಿಗಳ ಹೆದರಿಕೆ ಏನೆ? ಬೊಗಳಿ ರಿಹರ್ಸಲ್ ತಗೋತಾ ಇದ್ದೀಯಲ್ಲ"

> "ಖಂಡಿತ ಇಲ್ಲ ಕಣ್ರೆ ಆ ಹಾಳು ಊರಿಗಿಂತ ಕಾಡು ಸಾವಿರ ಪಾಲಿಗೆ ವಾಸಿ. ಯಾರನ್ನೂ ಯಾರೂ ನಂಬೋ ಹಂಗೆ ಇಲ್ಲವಲ್ರೀ ಊರಲ್ಲಿ. ನನಗಂತೂ ಒಂದೇ ದಿನಕ್ಕೆ ಸಾಕಾಗಿ ಹೋಯ್ತು. ಈ ಸುರಂಗದೊಳಗೆ ಬೇಕಾದರೆ ಇದ್ದು ಬಿಡ್ತೀನಿ"."43"

ಗೌರಿಯ ಈ ಮಾತು ಕಾಡು ಮತ್ತು ನಾಡಿನ ಅನುಭವದ ವ್ಯತ್ಯಾಸಗಳನ್ನು ಸೂಚಿಸುವ ಮಾರ್ಮಿಕ ಮಾತಾಗಿದೆ. ಊರಿನ ಪರಿಸರದ ಅನುಭವದಿಂದ ತನ್ನ ಜೀವನ ಸಂತೋಷ ಕಾಣದ ಗೌರಿ "ಊರಿಗಿಂತ ಕಾಡು ಸಾವಿರ ಪಾಲಿಗೆ ವಾಸಿ". "ಈ ಸುರಂಗದೊಳಗೆ ಬೇಕಾದರೆ ಇದ್ದು ಬಿಡ್ತೀನಿ" ಎನ್ನುವಲ್ಲಿ ಊರಿನ ಬದುಕಿಗೆ ಬೇಸತ್ತು ಜೀವನ ದರ್ಥವನ್ನು ಕಾಡಿನಲ್ಲೆ ಕಂಡುಕೊಳ್ಳುವ ಬಗೆ ಗಮನಾರ್ಹ.

ಸುರಂಗದೊಳಗೆ ಗೌರಿ ಸುರೇಶರಿಗೆ 'ಕುಂಟರಾಮ'ನ ಜುಗಾರಿ ಕ್ರಾಸಿನ, ದೋಣಿಹೊಳೆಯ ಕೆಂಪುಕಲ್ಲಿನ ಕಾಳದಂಧೆಯ ವಹಿವಾಟಿನ ರಹಸ್ಯವನ್ನು ಇವರಿಗೆ ವಿವರಿಸುತ್ತಾನೆ. ಈ ಸುರಂಗದ ವಾಸಿ ಕುಂಟರಾಮನ ಹಣೆ ಬರಹವನ್ನು ನೆನೆದು ಸುರಂಗದಿಂದ ಗೌರಿ, ಸುರೇಶ ಹೊರಬರುತ್ತಾರೆ. ಬರುವಾಗ ಕಮಾನು ಸೇತುವೆ ಮೇಲೆ ಯಾವುದೋ ಗ್ಯಾಂಗಿನ ಮೂವರು ಇವರಿಗೆ ಸಾವಿನ ಬೆದರಿಕೆ ಹಾಕಿ ಒಬ್ಬ ಸುರೇಶನ ಪ್ಲಾಸ್ಟಿಕ್ ಪ್ಯಾಕೆಟ್ಟು ಕಿತ್ತುಕೊಂಡವ "ಇದರಲ್ಲೇನೂ ಇಲ್ಲ ಬಾಸ್, ಬರೀ ಎಂಥದೋ ಹಳೇ ಕಾಗದ" ಎನ್ನುತ್ತಾನೆ. ಆದರೆ ಇವರಿಗೆ ಬೇಕಿದ್ದು ಅರವತ್ತು ಸಾವಿರ ಹಣ. ಅದು ಸಿಗದಿದ್ದಾಗ ಹರಿಯುತ್ತಿದ್ದ ದೋಣಿಹೊಳೆಗೆ ಕಾವ್ಯದ ಪ್ಲಾಸ್ಟಿಕ್ ಪ್ಯಾಕೆಟನ್ನು ಎಸೆದು ಹೋಗುತ್ತಾರೆ. ಇದರಿಂದ ಜುಗಾರಿ ಕ್ರಾಸಿನ, ದೋಣಿ ಹೊಳೆಯ, ಕೆಂಪುಕಲ್ಲಿನ ರಹಸ್ಯದ ಸುಳಿವು ಸಿಕ್ಕರೂ ಅದನ್ನು ಕಾಣಲಾಗುವುದಿಲ್ಲ. ಈ ದೋಣಿಹೊಳೆಯ ರಹಸ್ಯದ ಸುಳಿವು ಮಾರ್ಗ ಇತ್ಯಾದಿ ಆಧಾರಗಳನ್ನು ತುಂಬಿಕೊಂಡ ಕಾವ್ಯ ಅದೆ ದೋಣಿ ಹೊಳೆಯಲ್ಲಿ ಬಿದ್ದು ಮನುಷ್ಯನಿಗೆ ಸುಳಿವು ನೀಡದಂತೆ, ಗೋಚರಗೊಳಿಸದಂತೆ ಹೊಳೆಯಲ್ಲಿ ಲೀನವಾಗುತ್ತದೆ.

ಕೊನೆಗೆ ಸುರೇಶ ರಾಜಪ್ಪನಿಗೆ ಗುರುರಾಜ ಕವಿಯ 'ದ್ವಿಸಂಧಾನ ಕಾವ್ಯ'ದ ರಹಸ್ಯವನ್ನು ತಾನು ಕಂಡುಕೊಂಡ ಕೆಲವು ಸುಳಿವು ಹೂಳವುಗಳನ್ನು ವಿವರಿಸುತ್ತಾನೆ. ಮೇಲೆ ಜುಗಾರಿ ಕ್ರಾಸಿನ, ದೋಣಿಹೊಳೆಯ, ಅಲ್ಲಿ ಸಿಗುವ ಕೆಂಪುಕಲ್ಲಿನ ಮೇಲೆ ಅವನಿಗೆ ತಿಳುವಳಿಕೆ ಮೂಡುತ್ತದೆ. ಆಗ ಕೆಂಪುಕಲ್ಲಿನ ಆಶಾವಾದಿತನದಲ್ಲೆ ಸುರೇಶ, ಗೌರಿ, ರಾಜಪ್ಪ ಮೂವರು ಜುಗಾರಿ ಕ್ರಾಸಿಗೆ ಬಸ್ಸು ಹತ್ತುತ್ತಾರೆ.

ಈ ಮಾನವನ ಸೃಜನ ಶೀಲ ಬದುಕಿಗೆ ಈ ಕಾದಂಬರಿ ಕಾಣಿಕೆಯಾಗಿ ನಿಲ್ಲುತ್ತದೆ. ಸಹ್ಯಾದ್ರಿ ಕಾಡುಗಳಲ್ಲಿಯ ನಿಸರ್ಗ ನಿಧಿಯಾಗಲಿ, ವನ್ಯ ಸಂಪತ್ತಾಗಲಿ ಇದರೆಲ್ಲಾ ಸಾಮಾಜಿಕ ಸ್ಥಿತ್ಯಂತರಕ್ಕೆ ಈ ಕಾದಂಬರಿ ಕಾಣ್ಕೆಯಾಗಿದೆ. ಅನೇಕ ವ್ಯವಹಾರ ಸಂಬಂಧವನ್ನೊಳಗೊಂಡ ಈ ಸರ್ಕಾರ, ಸಮಾಜಗಳ ಸಂಕೀರ್ಣ ಸಂಬಂಧವನ್ನು ಈ ಕಾದಂಬರಿ ಗರ್ಭೀಕರಿಸಿಕೊಂಡು ಆಧುನಿಕ ಸಾಹಿತ್ಯದ ವಿಶಿಷ್ಟ ಕೃತಿಯಾಗಿದೆ.

ಈ. ನಾಟಕ ಸಾಹಿತ್ಯ

ಆಧುನಿಕ ಕನ್ನಡ ನಾಟಕ ಸಾಹಿತ್ಯದಲ್ಲಿ ವರ್ಗ ಮತ್ತು ವರ್ಣ ಸಂಘರ್ಷದ ವಿಷಯವನ್ನೊಳಗೊಂಡ ನಾಟಕಗಳೆ ಜಾಸ್ತಿ. ಈ ವರ್ಗ ಸಂಘರ್ಷದೊಡನೆ, ನಿಸರ್ಗ, ಪರಿಸರದ ನಾಶ ಮತ್ತು ಈ ನಿಸರ್ಗ ನಾಶದಿಂದ ಮಾನವನ ನಾಶವನ್ನೊಳಗೊಂಡ ಸಂವೇದನೆ ನಾಟಕಗಳು ಸೃಷ್ಟಿಯಾಗುತ್ತಿರುವುದು ಮಾತ್ರ ಈ ಪ್ರಕಾರದ ವೈಶಿಷ್ಟ್ಯವಾಗಿದೆ.

ಇಂದು ನಾಟಕ ಸಾಹಿತ್ಯ ವಿಸ್ತಾರವಾಗಿ ಬೆಳೆದಿದೆ. ನಾಟಕ ಸಾಹಿತ್ಯವನ್ನೆ ಇಲ್ಲಿನ ಅಧ್ಯಯನಕ್ಕೆ ಒಳಪಡಿಸುವುದು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ 'ಪರಿಸರ ಪ್ರಜ್ಞೆ'ಗೆ ಸಂಬಂಧಿಸಿದ ಕೃತಿಗಳನ್ನಷ್ಟೆ ನೋಡಲು ಯತ್ನಿಸಲಾಗಿದೆ. ಪ್ರಸ್ತುತ ನಾಟಕ ಸಾಹಿತ್ಯದಲ್ಲಿ ಇಂದು ಬಹಳ ಚರ್ಚೆಗೊಳಪಟ್ಟಿರುವ ಲೇಖಕರಾದ ಶ್ರೀ ಎಚ್. ಎಸ್. ಶಿವಪ್ರಕಾಶಕರ 'ಮಂಟೇಸ್ವಾಮಿ ಕಥಾ ಪ್ರಸಂಗ' ಮತ್ತು ಡಾ|| ಚಂದ್ರಶೇಖರ ಕಂಬಾರರ ಮಕ್ಕಳ ನಾಟಕ 'ಪುಷ್ಪರಾಣಿ' ಎಂಬ ಈ ನಾಟಕಗಳನ್ನು ಪ್ರತಿನಿಧಿಕವಾಗಿ ಇಲ್ಲಿ

ವಿಶ್ಲೇಷಿಸಲಾಗಿದೆ. ಹಾಗೆಯೆ ಶಿವಪ್ರಕಾಶರ 'ಮಾದಾರಿ ಮಾದಯ್ಯ' ಕೂಡ ಇಲ್ಲಿಯ ವಿಷಯಕ್ಕೆ ಪೂರಕವಾದ ನಾಟಕವಾದ್ದರಿಂದ ಇದರ ಮುಖ್ಯಾಂಶಗಳನ್ನು 'ಮಂಟೇಸ್ವಾಮಿ ಕಥಾಪ್ರಸಂಗ' ದೊಡನೆ ಚರ್ಚೆಗೆ ಬಳಸಿಕೊಳ್ಳಲಾಗಿದೆ.

ಮೊದಲಿಗೆ 'ಮಂಟೇಸ್ವಾಮಿ ಕಥಾಪ್ರಸಂಗ' ನಾಟಕವನ್ನು ಕೈಗೆತ್ತಿಕೊಳ್ಳಬಹುದು. ಈ ನಾಟಕದಲ್ಲಿ ಮಂಟೇಸ್ವಾಮಿ ಪವಾಡ ಪುರುಷನಾಗಿ ಕಾಣುತ್ತಾನೆ. ಇವನ ಸಂಸ್ಕೃತಿಯ ಮೇಲೆ ಪ್ರಸ್ತುತ ಸಮಾಜ ಮತ್ತು ಪರಿಸರದ ಸ್ಥಿತಿಗತಿಗಳ ಬೆಸುಗೆಯಲ್ಲಿ ಈ ನಾಟಕ ರಚನೆಗೊಂಡಿದೆ. ಇದರ ಒಳಗನ್ನು ತೆರೆದು ಇದು ಚಿತ್ರಿಸಿರುವ ದರ್ಶನವನ್ನು ತಡಕಬಹುದು. ಮಠಾಧಿಪತಿಗಳು, ಆಳುವ ಜನ ಹಿಡಿದು ಹೊರಗಿನ ಶಕ್ತಿಗಳ ಬಾಲಂಗೋಚಿವರೆಗೆ, ಸಮಾಜ ಪರಿಸರವನ್ನು ಹಾಗೂ ಪ್ರಕೃತಿ ಪರಿಸರವನ್ನು ಹಿಂಡಿಹಿಪ್ಪೆ ಮಾಡುತ್ತಿರುವ ವಿಪರ್ಯಾಸ ಸ್ಥಿತಿಯನ್ನು , ಈ ಕೃತಿ ಗರ್ಭೀಕರಿಸಿಕೊಂಡಿದೆ. ಇದರ ಗರ್ಭದಲ್ಲಿ ಸಮಾಜ ಮತ್ತು ಪ್ರಕೃತಿ ಪರಿಸರಗಳ ದುರಂತ ಸ್ಥಿತಿ ಇದೆ. ಈ ಪರಿಸರ ಸರ್ವನಾಶದ ಸ್ಥಿತಿಯನ್ನು ಕುರಿತು ಯೋಚಿಸುವ ನೀಲಗಾರರ ಕ್ರಿಯಾಶೀಲ ಮನಸ್ಸು ಪ್ರಸ್ತುತ ಸಮಾಜ ಪರಿಸರದ ರಂಗೋಲಿ ಚಿತ್ರವಾಗಿ ಕಣ್ಣಿಗೆ ಕಟ್ಟುತ್ತದೆ.

ಈ ಕೃತಿಯಲ್ಲಿ ಮಂಟೇಸ್ವಾಮಿಯು, ಬಸವಣ್ಣ ನೀಲಾಂಬಿಕೆಯರಿಂದ ರಾಚಪ್ಪಾಜಿಯನ್ನು ಸಿಸುಮಗನನ್ನಾಗಿ ಪಡೆದುಕೊಂಡು ಬರುವಾಗ ಸಿಗುವ ಊರು; ಇಜಯ ನಗರ. ಈ ನಗರದ ಭವ್ಯ ಬದುಕನ್ನು ನೀಲಗಾರರು ಮನ ತುಂಬಿ ಹೀಗೆ ಹಾಡುತ್ತಾರೆ.

ನೀಲಗಾರರು; ವಜ್ಜೂರ ಪೆಟ್ಟಿಗೆ ಬೀಗ ಮುದ್ರೆಯೊಡೆದು

ಪ್ರಜ್ವಲಿಸಿತೊ ಈ ನಗರ
ಎಸರು ಇಜೆಯನಗರ।
ಪಚ್ಚೆಯ ಕಲ್ಲಿನ ಗಿಡ ಗಿಡದಿಂದಲಿ
ಗೊಂಚಲು ಹವಳ ಹೂ ಹಣ್ಣು
ಎಸರು ಇಜೆಯನಗರ।
ಕಲ ಕಲ ನೀಲಿ ಹರಳಿನ ನದಿಗೆ
ಚಿನ್ನದ ಮರಳಿನ ದಂಡೆ
ಎಸರು ಇಜೆಯನಗರ।
ಗೋಪುರ ಕಳಸದ ಎತ್ತರ ಏನೆಂಬೆ
ಭಾಪುರೆ ಗಂಟೆಯ ಮೊಳಗು
ಎಸರು ಇಜೆಯನಗರ।
ಆಗಲುಗನಸಿನ ತೊಗಲು ಗೊಂಬೆ ಮಾಡಿ
ಜೀವವ ತುಂಬಿದ ಜನರ
ಎಸರು ಇಜೆಯನಗರ।"44"

ಇದು ಸಮಾಜ ಪರಿಸರದ, ವಿಜಯನಗರ ಸಾಮ್ರಾಜ್ಯದ ವೈಭವ. ಈ ಸಾಮ್ರಾಜ್ಯದಲ್ಲಿ ಬಡವ ಬಲ್ಲಿದರ ಸುಳಿವಿಲ್ಲ. ಎಲ್ಲರು ಸಿರಿ ಸಂಪತ್ತಿನ ಸುಖಿಗಳು. ವಜ್ರ ವೈಡೂರ್ಯಗಳಿಂದ, ಸಂಪತ್ತು ಸೌಭಾಗ್ಯಗಳಿಂದ ತುಂಬಿ ತುಳುಕುತ್ತಿದ್ದಂತಹ ಒಂದು ಕಾಲದ ವಿಜಯನಗರ ಸಾಮ್ರಾಜ್ಯ ಪರಿಸರ; ಇಂದು ಹೇಳ ಹೆಸರಿಲ್ಲದಂತೆ ಹೋಗಿದೆಯಷ್ಟೇ.

ಇಂದಿನ ನಾಗರಿಕ ಸಮಾಜ ಬಡಬಗ್ಗರ, ಭಿಕ್ಷುಕ-ಭಿಕಾರಿಗಳ, ಹಸಿವು ಬಾಯಾರಿಕೆಗಳಿಗೆ, ಅನ್ನ, ನೀರನ್ನು ಭಿಕ್ಷೆ ನೀಡದಂಥದ್ದಾಗಿದೆ. ಈ ಸಮಾಜ ಪರಿಸರದಲ್ಲಿ ತುಳಿತದ ಜನ ತಮ್ಮ ಸುಖ ಜೀವನ ಕಾಣಲಾಗದ ಚಿತ್ರವಿದೆ. ರಾಚಪ್ಪಾಜಿ ಭಿಕ್ಷಕ್ಕೆ ಹೋಗಿ ನಗರದಲ್ಲಿ ಭಿಕ್ಷೇ ಸಿಗದೆ ಮಕ್ಕಳೊಟ್ಟಿಗೆ ಗೋಲಿಗಜ್ಜಿಗ ಆಡಿ ಅವರ ಗೋಲಿ ಗಜ್ಜಿಗ ಗೆದ್ದು ಬರುವಾಗ, ಮತ್ತೆ ಅವರಿಂದಲೇ 'ಕಳ್ಳ' ಎಂಬ ಆಪಾದನೆಗೆ ಸಿಕ್ಕಿ ಹೊಡೆತ ತಿಂದು ಬರುವ ಚಿತ್ರವೆ ಇದಕ್ಕೆ ಸಾಕ್ಷಿಯಾಗಿದೆ.

ಹಾಗೆಯೇ ನಿಸರ್ಗದ ಮಡಿಲಿನಲ್ಲಿ ಬದುಕುವ ಜನರ ಬಾಳಿಗೆ; ಪಟ್ಟಣದ ಬಣ್ಣ ಬಣ್ಣದ ಬದುಕಿನ ಜನರು ಲಗ್ಗೆ ಹಾಕುತ್ತಾರೆ. ಆಗ ನಿಸರ್ಗ ಮತ್ತು ನಿಸರ್ಗವನ್ನೆ ಆಶ್ರಯಿಸಿ ಬದುಕುವ ಜನ ಪಟ್ಟಣ ಮತ್ತು ನಗರಗಳನ್ನು ಸೇರುತ್ತಾರೆ. ಆದರೆ ಅಲ್ಲಿಯ ನಾಗರಿಕ ಪರಿಸರ ಮತ್ತು ಸಂಸ್ಕೃತಿಗೆ ದಿಗಿಲುಗೊಂಡು, ದಿಕ್ಕು ತಪ್ಪಿ ಧೂಳಾಗುವದು ಅವರ ಸ್ಥಿತಿಯಾಗಿದೆ. ಈ ಮಾತಿಗೆ ಪೂರಕವಾಗಿ ಇದೇ ಲೇಖಕರ 'ಮಾದಾರಿ ಮಾದಯ್ಯ' ನಾಟಕದ ಗುಡ್ಡರಾಡುವ ಮಾತು ಆಧಾರವಾಗಿದೆಃ

> ಗುಡ್ಡ ೧ಃ "ನಾನು ಆನೆ ಮಲೆ, ಅಲ್ಲಿ ಕಳ್ಳಕಾಕರೆಲ್ಲ ಆನೆ ಬ್ಯಾಟಿ ಆಡ್ತಾ ಅವ್ರೆ ಪೋಲೀಸ್ನೋರು ಕಳ್ಳರ ಬ್ಯಾಟಿ ಆಡ್ತಾ ಅವ್ರೆ ಅವ್ರು-ಇವ್ರು ಸೇರ್ಕಂಡು ಜನ್ ಗುಳ್ ಬ್ಯಾಟಿ ಆಡ್ತಾ ಅವ್ರೆ ಕೂಲಿನಾಲಿ ಮಾಡ್ಕಳಕೆ ಈ ಬೆಂಗ್ಳೂರ್ ಪಟ್ನ ಸೇರಕಂಡಿದ್ದೀನಿ.
>
> ಗುಡ್ಡ ೨ಃ ನಾನು ಜೇನು ಮಲೆ, ಜೇನು ಕುರುಬ, ಬೆಟ್ಟ-ಗುಡ್ಡ ಕಾಡು-ಮೇಡು ಅಲ್ದು ಮಡ್ಕೆ ತುಂಬಾ ಜೇನು ತಗೊಂಡ್ ಬಂದೆ. ಈ ಬೆಂಗ್ಳೂರ ಪಟ್ನದೊಳ್ಗೆ ಮಾರ್ದೆ. ಬಸ್ಟಾಂಡ್ ನಲ್ಲಿ ಯಾವೊನೊ ಒಬ್ಬ ನನ್ ಜೋಬ್ ಕತ್ತರಿಸ್ ಬಿಟ್ಟ ಆ ಕಳ್ಳನನ್ನ ಉಡೀಕ್ಕಂಡು ಈ ತುಂಬಿದ ಪಟ್ನ ಅಲೀತಾಇದೀನಿ"."45"

ಹೀಗೆ ಇಲ್ಲಿಯ ಆರೇಳು ಜನ ಗುಡ್ಡರು ಮಾತನಾಡುತ್ತ ತಾವು ಆನೆಮಲೆ, ಜೇನುಮಲೆ, ಕಾನುಮಲೆ, ನಾಗಮಲೆಗಳಿಂದ ಬಂದವರೆಂದು, ಪರಿಚಯಿಸಿಕೊಳ್ಳುವ ಮಾತಿನಲ್ಲೆ ಈ ಜನ ವರ್ಗ ಮತ್ತು ಅವರ ಸ್ಥಿತಿಗತಿ ಸಾಬಿತಾಗುತ್ತದೆ. ಇವರೆಲ್ಲ ಜೇನು, ಹಣ್ಣು, ಹಂಪಲು, ಗೆಡ್ಡೆ, ಗೆಣಸು, ಪ್ರಾಣಿ ಪಕ್ಷಿಗಳೆ ಆಹಾರವಾಗಿ ಈ ಕಾಡಿನ ಒಡನಾಡಿಗಳಾಗಿ ಜೀವಿಸುತ್ತಿದ್ದವರು. ಇವರ ಬಾಳಿಗೆ ಉಳ್ಳವರು ಲಗ್ಗೆ ಹಾಕಿ ಕಾಡನ್ನು ಬರಿದು ಮಾಡುತ್ತಾರೆ. ಆದರೆ ಕಾಡನ್ನು ಆಶ್ರಯಿಸಿದ ಜನ ವಲಸೆ ಹೋಗಿ ಪಟ್ಟಣ ಸೇರುತ್ತಾರೆ. ಆದರೆ ಅಲ್ಲಿ ಇವರಿಗೆ ಅತಂತ್ರ ಅಸ್ಥಿರಬಾಳು. ಜೇನುಮಲೆ ಗುಡ್ಡ ಜೇನು ತಂದು ಬೆಂಗಳೂರು ಪಟ್ಟಣದಲ್ಲಿ ಮಾರುತ್ತಾನೆ. ಆದರೆ ಆ ಹಣವನ್ನು ಜೇಬುಗಳ್ಳರು ಕದಿಯುತ್ತಾರೆ. ಅನ್ನವು ಇಲ್ಲದೆ ಹಣವು ಇಲ್ಲದೆ ಕದ್ದ ಕಳ್ಳನನ್ನು ಹುಡುಕುತ್ತ 'ಬಂದ ದಾರಿಗೆ ಸುಂಕವಿಲ್ಲದೆ' ಕಂಗಾಲಾಗುತ್ತಾನೆ. ಇಲ್ಲಿ ಮುಗ್ಧ ಜನರ ಅಂಧಃಪತನವನ್ನು ಕಾಣಬಹುದಾಗಿದೆ.

ಅದೆ ಬಡವ, ಭಿಕ್ಷುಕ ಮತ್ತು ಆದಿವಾಸಿ ಕಾಡು ಜನರು ನಿಸರ್ಗ ತಾಯಿಯನ್ನು ನಂಬಿ; ಅವಳ ಮಡಿಲಲ್ಲೆ ಹುಟ್ಟಿ ಬೆಳೆದವರು. ಇವರು ಅವಳ ಆನಂದಾನುಭವದಿಂದ ಬದುಕಿನ ಮಾನವೀಯ ಮೌಲ್ಯವನ್ನು ಕಂಡು ಅನುಭವಿಸಿದವರು. ಇವರಿಗೆ ಈ ಅನುಭವ ಆಧುನಿಕ ಮನುಷ್ಯ ಪರಿಸರದಲ್ಲಿ ಸಿಗಲಾರದು ಎಂಬುದಕ್ಕೆ 'ರಾಚಪ್ಪಾಜಿ ನಾಗರಿಕ ಮನುಷ್ಯರನ್ನು ಭಿಕ್ಷೆಕೇಳಿ ಹೊಡೆಸಿಕೊಂಡು ಬರಿಗೈಲಿ ಹಿಂದಿರುಗುವುದು ಮತ್ತು ಮಂಟೇಸ್ವಾಮಿ ಕಾಡೊಳಗೆ ಹೋಗಿ ಮರಗಿಡಗಳನ್ನು ಭಿಕ್ಷೆ ಬೇಡಿ ದ್ರಾಕ್ಷಿ ಹಣ್ಣು ತಂದು ರಾಚಪ್ಪಾಜಿ ಕೊಡುವ ಚಿತ್ರಗಳು ಸಾಕ್ಷಿಯಾಗಿವೆ. ರಾಚಪ್ಪಾಜಿ ಮತ್ತು ಗುಡ್ಡರು ಮಾನವ ಸಮಾಜದಿಂದ ಬದುಕಿನ ಮೌಲ್ಯ ಕಾಣಲಾರದ ಪಾತ್ರಗಳಾಗಿ ಇಲ್ಲಿ ಕಾಣಿಸಿಕೊಂಡಿವೆ. ಹಾಗೆಯೇ ಮಂಟೇಸ್ವಾಮಿ ಪಾತ್ರ ನಮಗೆ ಕಾಡಿನಿಂದ ಮನುಷ್ಯನ ಜೀವನ ಮೌಲ್ಯವನ್ನು ತುಂಬಿಕೊಡುತ್ತದೆ. ಹಾಗಾಗಿ ಮಂಟೇಸ್ವಾಮಿ ಪಾತ್ರ, ನಿಸರ್ಗ ಪರಿಸರದ ಮತ್ತು ಸಮಾಜ ಪರಿಸರದ ತಿಳುವಳಿಕೆಯುಳ್ಳ ಸಾಂಕೇತಿಕ ಪಾತ್ರವಾಗಿ ಈ ನಾಟಕದಲ್ಲಿ ಕಾಣಬರುತ್ತದೆ.

ಈ ನಾಟಕದ ಮುಂದಿನ ಪಾತ್ರಗಳು ಮತ್ತು ಪಾತ್ರದ ಹೆಸರುಗಳೇ ವಿಶಿಷ್ಟವಾದುವಾಗಿವೆ. ಇಲ್ಲಿಯ ಈರಣ್ಣ ಮಲತಾಯಿ ಪಾತ್ರಗಳು; ಈ ಜಗತ್ತಿನ ಪರಿಸರ ಸಂಬಂಧವಿಲ್ಲದೆ ನಿಸರ್ಗ ಪ್ರಕೃತಿಯ ಎಲ್ಲ ಸಂಪನ್ಮೂಲಗಳ ಸರ್ವನಾಶಕ್ಕೆ ಕಾರಣರಾದ ಪಾತ್ರಗಳಾಗಿವೆ. 'ದೊಡ್ಡಮ್ಮ'ನ ಪಾತ್ರ ಹೆಸರಿಗೆ ತಕ್ಕಂತೆ ಭೂಮಿತಾಯಿಯ ಸಂಕೇತವಾಗಿದೆ. 'ಈರಣ್ಣ' ಯೂರೋಪ್ ಮುಂತಾದ ರಾಷ್ಟ್ರಗಳ ವಸಾಹತುಶಾಹಿ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಬಂದು ನಮ್ಮ ಭೂಮಿಯನ್ನಾಕ್ರಮಿಸಿ ಆಧುನಿಕರಣಕ್ಕೆ ಮತ್ತು ನಮ್ಮ ಸಂಪತ್ತಿನ ಸರ್ವನಾಶಕ್ಕೆ ಕಾರಣವಾಗುವ ಪಾತ್ರವಾಗಿದೆ. 'ಮಲತಾಯಿ' ಯು ಈ ದೇಶದಲ್ಲಿ ಈರಣ್ಣನಂತ

ಹೊರರಾಷ್ಟ್ರ ಕಂಪನಿಗಳನ್ನು ನಮ್ಮಲ್ಲಿ ಸ್ಥಾಪಿಸಲು ಅವಕಾಶ ನೀಡಿ; ಅವರ ಉದ್ಧಾರಕ್ಕೆ ಮತ್ತು ತಮ್ಮ ನಾಶಕ್ಕೆ ತಾವೆ ಕಾರಣರಾಗುತ್ತಿರುವ ಮಲತಾಯಿ ಧೋರಣೆಯ ಪಾತ್ರವಾಗಿದೆ. ಆದರೆ ಮಂಟೇಸ್ವಾಮಿ ಪಾತ್ರ ಮೊದಲೆ ಹೇಳಿದಂತೆ ಸಮಾಜ ಮತ್ತು ನಿಸರ್ಗ, ಪ್ರಜ್ಞೆಯುಳ್ಳ ಸಾಂಕೇತಿಕ ಪಾತ್ರವಾಗಿ ರೂಪುಗೊಂಡಿದೆ.

ಈ ಪಾತ್ರಗಳ ಸ್ವಾಭಾವಿಕ ಚಟುವಟಿಕೆಯನ್ನು ನೋಡುವುದಾದರೆ; ಸಮಾಜದ ಮತ್ತು ನಿಸರ್ಗ ಪರಿಸರದ ತಿಳುವಳಿಕೆಯುಳ್ಳಮಂಟೇಸ್ವಾಮಿ, ದೊಡ್ಡಮ್ಮನೊಡನೆ ಭೂಮಿತಾಯಿಯ ಸಾಂಕೇತಿಕ ಗ್ರಹಿಕೆಯಲ್ಲಿ ಮಾತಾಡುವ ಮಾತಿನ ಸಂಭಾಷಣೆ ಇದುಃ

ಮಂಟೇಸ್ವಾಮಿಃ ಅಮ್ಮ ನೀನೀಗಾಗ್ಲೆ ಸತ್ತಿದೀಯ ಕಣಮ್ಮ. ಸತ್ತು ನರಕ್ ದೊಳಗೆ ಬಿದ್ದಿದೀಯ ಕಣಮ್ಮ.

ದೊಡ್ಡಮ್ಮಃ [ಕಿವಿ ಮುಚ್ಚಿಕೊಂಡು] ಅಂಗಾದ್ರೆ ಈ ಬಾವಿ? ಈ ಊರು? ಈ ಜನ?

ಮಂಟೇಸ್ವಾಮಿಃ ಎಲ್ಲಾ ಸತ್ತೋಗ್ಯಾರೆ ಕನವ್ವ. ಇದು ಸತ್ತ ನೆಲ. ಅದು ಸತ್ತ ಜಲ. ಇದು ಸತ್ತ ಗಾಳಿ.ಅದು ಸತ್ತ ಆಕಾಶ

ನೀಲಗಾರರೂಃ ನೆಲವೂ ಸತ್ತಿತು ತಾಯಿ

ನೀನು ಸತ್ತಾಗ।
ಜಲವೂ ಸತ್ತಿತು ತಾಯಿ
ನೀನು ಸತ್ತಾಗ।
ವಾಯೂ ಸತ್ತಿತು ತಾಯಿ
ನೀನು ಸತ್ತಾಗ।
ಗಗನ ಸತ್ತಿತು ತಾಯಿ
ನೀನು ಸತ್ತಾಗ। “46”

ಇಂತಹ ಸಂಭಾಷಣೆಯಿಂದ ದೊಡ್ಡಮ್ಮ ಪ್ರಕೃತಿಯ ಸಾಂಕೇತಿಕ ಪಾತ್ರವೆಂದು ಗುರುತಿಸ ಬಹುದಾಗಿದೆ. ಈರಣ್ಣನನ್ನು ದೊಡ್ಡಮ್ಮನ ಗಂಡನನ್ನಾಗಿ ಮಾಡುವುದರ ಮೂಲಕ ನಮ್ಮ ಪ್ರಕೃತಿ ಪರಿಸರವನ್ನು ಸ್ವಾಧೀನ ಪಡಿಸಿಕೊಂಡು ಯೂರೋಪ್ ರಾಷ್ಟ್ರಗಳ ಬಹು ರಾಷ್ಟ್ರೀಯ ಕಂಪನಿಗಳು ಭೂ ಒಡೆತನ ಸಾಧಿಸಿರುವುದಾಗಿದೆ. ವಸಾಹತುಶಾಹಿಗಳಿಗೆ ಪೂರಕವಾದ ಪಾತ್ರವಾಗಿರುವ ಈರಣ್ಣನ ಪಾತ್ರವನ್ನು ನೀರಿಗೆ ಬಂದ ಹುಡುಗಿಯರು ಮಾತಾಡುವ ಮಾತಲ್ಲಿ ಅನಾವರಣಗೊಳಿಸುತ್ತಾರೆ.

ಹುಡುಗಿ ೨ಃ “ಹೂಂ ಬೆಕ್ಕಿನ್ ಬಾಯ್ ತಪ್ಪಿಸ್ಕಂಡು, ಉಲೀ ಬಾಯೆ, ಸಿಕ್ಕಂಡಂಗಾಯ್ತು ಅವಳ್ ಗಂಡ ಆಗೋವ್ನು ಆ ದನದ್ ಯಪಾರಿ ಈರಣ್ಣ ಅವ್ನ ಮೂರು ಜನ ಎಡ್ತೀದಿರ ಎಣ. ಇಕ ಈ ಬಾವೀಲೇ ತೇಲಾಡಿತ್ತು.

ಹುಡುಗಿ ೧ಃ ಅವ್ನಾಗಂಡು? ದುಡ್ನಾಸೇಗೆ ಎಲ್ಲೋ ಆ ಚಿಕ್ಕವ್ವುಂದೀ ಇರ್‍ಬೇಕು ಈ ಕೆಲ್ಸ”.“47”

ಇಲ್ಲಿ ‘ದನದ್ ಯಾಪಾರಿ ಈರಣ್ಣ’ ಎಂಬ ಮಾತಿನಲ್ಲಿ ನಾಟಕವು ಈರಣ್ಣನ ಪಾತ್ರದ ಗುಣಲಕ್ಷಣಗಳನ್ನು ಹಿಡಿದಿಟ್ಟಿದೆ. ಇಲ್ಲಿ ಮಲತಾಯಿ ಪಾತ್ರದ ಚಿಕ್ಕಮ್ಮ ಆರ್ಥಿಕ ಮತ್ತು ರಾಜಕೀಯವಾಗಿ ಪ್ರಬಲವಾಗಿರುವತ್ತು, ಸರ್ಕಾರದಂತಹ ವ್ಯವಸ್ಥೆಯಾಗಿದೆ. ಇಲ್ಲಿ ದೊಡ್ಡಮ್ಮನ ಗಂಡನನ್ನಾಗಿ ‘ದನದ್ ಯಾಪಾರಿ ಈರಣ್ಣನನ್ನು ಆರಿಸಿರುವ, ಚಿಕ್ಕಮ್ಮನ ಕ್ರಮವನ್ನು ವಿರೋಧಿಸುವ ಈ ಹುಡುಗಿಯರಲ್ಲಿ ಈ ಸಮಾಜ ಪರಿಸರದ ಸಂವಾದ ವ್ಯಕ್ತವಾಗಿದೆ. ದೊಡ್ಡಮ್ಮನ ಗಂಡನ ಆಯ್ಕೆಗೆ “ದುಡ್ನಾಸೇಗೆ ಎಲ್ಲೋ ಆ ಚಿಕ್ಕವ್ವುಂದೇ ಇರ್‍ಬೇಕು ಈ ಕೆಲ್ಸ” ಎಂಬ ಇದರಲ್ಲಿ ಈ ದೇಶದ ಸರ್ಕಾರದ, ಮತ್ತು ಪ್ರಬಲ ವರ್ಗಗಳ ರೀತಿ, ನೀತಿಯ ವ್ಯಂಗ್ಯವಿದೆ.

ಹಾಗೆಯೆ ಮುಂದಿನ ಭಾಗದಲ್ಲಿ ಕೆಂಪಣ್ಣನ ಕುಲಮೆ ಇಂದಿನ ನಮ್ಮ ಆಧುನಿಕ ಸಮಾಜದ ಬಹುರಾಷ್ಟ್ರೀಯ ಕಂಪನಿಗಳ ಕಾರ್ಖಾನೆಯಾಗಿದೆ. ಇದರ ಮಾಲಿಕ ಕೆಂಪಣ್ಣ ಚಿನ್ನ, ಬೆಳ್ಳಿ, ಕಬ್ಬಿಣ ತಯಾರಿಸುವನಾಗಿ ಭೂಮಿಯ ಖನಿಜ ಸಂಪತ್ತನ್ನೆಲ್ಲ ನಾಶ ಮಾಡಿದ್ದಾನೆ.

ಇಂತಹ ಕೆಂಪಣ್ಣ ಈರಣ್ಣ ಮಲತಾಯಿ ಪಾತ್ರಗಳನ್ನು ಹೋಲುವ ಪಾತ್ರವಾಗಿ 'ಮಾದಾರಿ ಮಾದಯ್ಯ' ನಾಟಕದ 'ಶ್ರವಣ ದೊರೆ'ಯ ಪಾತ್ರವಿದೆ. ಇಲ್ಲಿಯ ಶ್ರವಣ ದೊರೆ ಕಾರ್ಖಾನೆಗಳಿಗಾಗಲಿ, ಅಥವಾ ಯಾವುದೋ ಒಂದು ದೇಶಕ್ಕಾಗಲಿ ದೊರೆಯಲ್ಲ. ಇವನು ತ್ರಿಲೋಕ ಜೀವ, ನಿರ್ಜೀವದ, ನಿಧಿ, ಸಂಪತ್ತಿಗೆ, ದೇವ ಮಾನವರಿಗೆಲ್ಲ ದೊರೆಯಾಗಿದ್ದಾನೆ. ಈ ದೊರೆಗೆ ಯಾರ್‍ಯಾರು ಹೇಗೆ ಶರಣಾಗುತ್ತಿದ್ದಾರೆಂಬುದನ್ನು ಗುಡ್ಡರು ತಮ್ಮ ಮಾತಿನ ಮೂಲಕ ವಿವರಿಸುತ್ತಾರೆ.

ಗುಡ್ಡ ೩: ಬಿಳೀ ಜನ್ರು ದೇಸ್ ದಿಂದ ಇಮಾನ್ ದೊಳೆ, ಒತ್ಕಂಡ್ ಬಂದು ಮದ್ದು-ಗುಂಡು ಮುಂತಾದ ಆಯುದ್ ಗುಳನ್ನೆಲ್ಲ ಸಮುಣ್ ದೊರೆ ಪಾದುಕ್ಕೆ ಒಪ್ಸವರೆ,
ಗುಡ್ಡ ೪: ಕರೀ ಜನ್ರು ದೇಸ್ ದೊಳ್ಗಿಂದ ಮುತ್ತು ರತ್ನ ಎತ್ ಕಂಡು ಬಂದು ಸಮುಣ್ ದೊರೆ ಪಾದುಕ್ ಒಪ್ಸವರೆ.
ಗುಡ್ಡ ೫: ಅಳ್ದೀ ಜನ್ರು ದೇಸ್ ದೊಳ್ಗಿಂದ ರೇಷ್ಮೆ, ಯಾಲಕ್ಕಿ ಲವಂಗ ಹಡಗ್ನಲ್ಲಿ ಎತ್ ಕಂಡು ಬಂದು ಸಮುಣ್ ದೊರೆ ಪಾದುಕ್ ಒಪ್ಸವರೆ.
ಗುಡ್ಡ ೬: ಸೂರ್ಯ ಅವನ್ ಕಾವ್ ತಂದೊಪ್ಸವನೆ
ಗುಡ್ಡ ೧: ಚಂದ್ರ ಅವನ್ ತಂಪು ತಂದೊಪ್ಸವನೆ

ಮಾದಯ್ಯ: ಇವರಿಗ ಸಮುಣ್ ದೊರೆ ತನ್ನ ದಾಸಿ ಬೂಮ್ತಾಯಿನ ತೊಡೆ ಮ್ಯಾಲೆ ಬಂದ್ ಕುಂತ್ಕೋತ ಬಲಾತ್ಕಾರ ಮಾಡ್ತಾನೆ. "48"

ಹೀಗೆ ಈ ಶ್ರವಣದೊರೆಗೆ ವಿಶ್ವದ ಜನರು, ಶರಣಾಗುವುದಷ್ಟೆ ಅಲ್ಲ. ಸೂರ್ಯ ಚಂದ್ರಾದಿಗಳು ಕೂಡ ಶರಣಾಗಿರುವುದು ಗಮನಾರ್ಹವಾಗಿದೆ. ಹಾಗೆಯೇ ಶ್ರವಣದೊರೆ ಭೂಮಿ ತಾಯಿಯನ್ನು ಬಲತ್ಕಾರ ಮಾಡುತ್ತಿರುವುದರಲ್ಲಿ; ಈ ಮನುಷ್ಯರ ದುರಂತವಡಗಿರುವುದನ್ನು ಕಾಣುತ್ತೇವೆ.

ಹಾಗೆಯೆ 'ಮಂಟೇಸ್ವಾಮಿ ಕಥಾ ಪ್ರಸಂಗ'ದ ಮುಂದಿನ ಭಾಗ ನೋಡುವುದಾದರೆ; ಇಂದಿನ ಆಧುನಿಕರಣ, ನಗರಿಕರಣಗಳು ಹಣದ ವ್ಯಾಮೋಹದ ಜನರನ್ನು ಮನಸೆಳೆದುಕೊಂಡಿವೆ. ಇದಕ್ಕೆ ಮಾರುಹೋದ ಪರಿಸರವೆ ವಿಶ್ವ ವ್ಯಾಪಿಯಾಗಿ ಹರಡಿದೆ. ಈ ಅತ್ಯಾಧುನಿಕತೆಗೆ ಬಲಿಯಾಗಿ ಕಾಡು, ನೀರು, ಗಾಳಿ, ವಾಯು, ಪ್ರಾಣಿ ಪಕ್ಷಿ, ಖನಿಜ ಸಂಪತ್ತುಗಳನ್ನೊಳಗೊಂಡ ನಿಸರ್ಗ ಜಗತ್ತು ಬಿದ್ದಿದೆ. ಆದರೆ ಪರಿಸರ ನಾಶಕ್ಕೆ ಕಾರಣರಾದವರು ಆ ಪರಿಸರ ವಿಕೋಪಕ್ಕೆ ಸಿಕ್ಕಿ ಬಲಿಯಾಗುತ್ತಾರೆ. ಅಂತಹ ಮಾನವರ ಮೂರ್ತ ಸ್ವರೂಪ ಈ ನಾಟಕದಲ್ಲಿ ಕಾಣಸಿಗುವುದು ಹೀಗೆ:

ಮಂಟೇಸ್ವಾಮಿ : ಏನು ಕಂಡಾದು ಕಂದ?
ಸಿದ್ದಪ್ಪಾಜಿ : ನಿಗಿ ನಿಗಿ ನಿಗಿ ನಿಗಿ ಕೆಂಡ. ಅತ್ತಕಡೆ ಇತ್ತಕಡೆ ಕಂದೋಗಿ ಕರಗ್ತಾ ಇರ ಕಾಡು.
ಮಂಟೇಸ್ವಾಮಿ : ಅದು ಭೂಲೋಕದಗಲ ಕುಲುಮೆ ಕಣಪ್ಪ ಇನ್ನೇನು ಕಾಣ್ತಾದಪ್ಪ

ಸಿದ್ದಪ್ಪಾಜಿ : ಏಳು ಬಿದಿಳು ಆ ಬೀದಿತುಂಬ ಉಳ ಉಪ್ಪೆಗಳಂಗೆ ನೆಲ ಅಗೀತಾ ಇರೊ ನರಜೀವಿಗಳು. ಅವರ ಮಕ ಮೈಯ್ಯಿ ಎಲ್ಲಾ ಒಂದು ಕೈ ರೂಪ್ ದಾಗೈತೆ.
ಮಂಟೇಸ್ವಾಮಿ : ಅಪ್ಪಾ ಮಗ, ಅದೇ ನೀನು ಓಗಬೇಕಾಗಿರ ಊರು. ಆಲಗೂರು. ಆ ಜನಗುಳು ಅಲಗೂರಿನ ಭೂಮಿ ಅಗಲದ ಕುಲ್ಮೆ ಒಳಗೆ ಜೀತ ಮಾಡ್ಕಂಡಿರ ಆಳಗುಳು. ಇನ್ನೇನ್ ಕಂಡದೊ ಕಂದ?.
ಸಿದ್ದಪ್ಪಾಜಿ : ಏಳ್ ಜನ ರಾಜರು ಏಳ್ ತಾ ಇರೊ ಜ್ವಾಲೆಗಳ ಮಧ್ಯೆ ಏಳು ಥಳ ಥಳಾ ಕಳಸ್ ಗಳು.

ಮಂಟೇಸ್ವಾಮಿ ಃ ಅವರು ನಿನ್ನ ಜಾತಿಯೋರು. ನಿನ್ನ ಕುಲದೋರು. ಪಾಂಚಾಳ ರಾಜ್ ರು.
ಸಿದ್ದಪ್ಪಾಜಿ ಃ ಅದೆಂತೆಂತ್ ದೋ ಆಯುದ್ ಗಳು, ಮದ್ದಿನ ಗುಂಡು, ಫಿರಂಗಿ ಗುಂಡು.
ಮಂಟೇಸ್ವಾಮಿ ಃ ಇವುನ್ನೆಲ್ಲ ಮಾಡ್ಸಿ ಆ ಪಾಂಚಾಳ ರಾಜ್ರು, ದೇಸ್ ದೇಸ್ ಗಳ ರಾಜರ್ ಗೆ ಅವುನ್ನ ಮಾರಿ ಬೇಕಾದಷ್ಟು ಸಂಪಾದ್ನೆ ಮಾಡ್ಕಂಡೌರಪ್ಪ.
ಸಿದ್ದಪ್ಪಾಜಿ ಃ ಬಿಚ್ಚಿದ್ ಮಂಡೆ ಬಿಟ್ಕಂಡು ಒಂದು ಕಣ್ಣೋಳೀಕ್ ಕೆಂಡ. ಇನ್ನೊಂದು ಕಣ್ಣೋಳ್ಗೆ ನದಿ. ಮೈಯೆಲ್ಲ ರಕ್ತ.
ಮಂಟೇಸ್ವಾಮಿ ಃ ಅಪ್ಪಾ, ಅವ್ರೇ ನೆಲದೇವತೆ, ಜಲದೇವತೆ, ವಾಯುದೇವತೆ, ಅಗ್ನಿದೇವತೆ, ಆ ಕಾಸ್ ದೇವತೆಗಳು. ಪಾಂಚಾಳ ರಾಜರ ಕುಲ್ಮೆಕೊಡದ್ ಬಿಸಿ ತಾಳಕ್ಕಾಗ್ದೆ ಅವರ ಆಯುದ್ ಗುಳ್ನ ಎದ್ರುಸಕಾಗ್ದೆ ಕಾಡೂ ಮೇಡು ಸೇರ್ಕಂಡು, ಕ್ವಾಪ ಮಾಡ್ಕಂಡು ಸೋಕ ಮಾಡ್ತಾ ಅವ್ರೆ."49"

ಇಲ್ಲಿ ಮಂಟೇಸ್ವಾಮಿ ಸಿದ್ಧಪ್ಪಾಜಿಗೆ ತನ್ನ ದಿವ್ಯ ದೃಷ್ಟಿಯಿಂದ ಅಂದರೆ ಈ ಜಗತ್ತಿನ ಮುಂದಿನ ಸ್ಥಿತಿಗತಿಗಳನ್ನು ಕಾಣಬಲ್ಲ ಕಲ್ಪನೆಯ ದೃಷ್ಟಿಯಲ್ಲಿ ತೋರಿಸಿದ್ದಾರೆ. ಇವರಿಬ್ಬರ ಸಂಭಾಷಣೆಯ ಮೂಲಕ ಅಭಿವೃದ್ಧಿಯ ಹೆಸರಿನಲ್ಲಿ ಕಾರ್ಯಶೀಲವಾಗಿರುವ ಮಾನವ ಸಮಾಜದ ಪರಿಸರ ಒಂದು ಕಡೆ ಇದೆ. ಇದರಿಂದ ಕಲ್ಮಶಗೊಂಡು ತನ್ನ ಅಸ್ತಿತ್ವ ಕಳೆದುಕೊಂಡ ಪ್ರಕೃತಿ, ನಿಸರ್ಗ ಸಂಪತ್ತು ಮತ್ತೊಂದು ಕಡೆ ಇದೆ. ಇವೆರಡನ್ನು ನಾಟಕ ಕಾರರು ತುಂಬ ಮಾರ್ಮಿಕವಾಗಿ ಕೃತಿಗಿಳಿಸಿದ್ದಾರೆ. ಇಲ್ಲಿಯ ಮಂಟೇಸ್ವಾಮಿ ಇಂದಿನ ಪ್ರಸ್ತುತ ಸಮಾಜ ಮತ್ತು ನಿಸರ್ಗದ ಸ್ಥಿತಿಗತಿಯನ್ನು ಈ ಮಾನವ ಜಗತ್ತಿಗೆ ತೆರೆದಿಟ್ಟಿದ್ದಾರೆ.

ಇಲ್ಲಿಯ ಏಳು ಜನ ಪಾಂಚಾಳ ರಾಜರು ಈ ನಿಸರ್ಗ ಸಂಪತ್ತನ್ನೆಲ್ಲ ಬಗೆದು ಬರಿದು ಮಾಡಿದ ಏಳು ಜನ ದೊರೆಗಳು. ಇವರು ಚಿನ್ನೋಜಿ, ಬೆಳ್ಳೋಜಿ, ರತ್ನೋಜಿ, ಮುತ್ತೋಜಿ, ಅವಳೋಜಿ, ಪಚ್ಚೋಜಿ, ವಜ್ರೋಜಿಗಳು. ಈ ದೊರೆಗಳು ವಸಾಹತುಶಾಹಿಗಳಿರಬಹುದು.; ದೊಡ್ಡ ದೊಡ್ಡ ಉದ್ಯಮಿಗಳಿರಬಹುದು. "ಈ ಏಳು ಕಳಸಗಳ ನೆಳ್ಳಲ್ಲಿ ಏಳು ಕೋಟಿ ಮಕ್ಕಳು, ಉಳುಗಳಂಗೆ ಗೂಡು ಕಟ್ಕಂಡು ಮೈಯೆಲ್ಲ ಕೈಯಾಗಿ ಜೀತ ಮಾಡ್ತುವ್ರೊ" ಎನ್ನುವ ನೀಲಗಾರರ ಈ ಮಾತು ಈ ಕಂಪನಿ ಕಾರ್ಖಾನೆಗಳ ಪರಿಸರದ ಜೀವಂತ ಚಿತ್ರವನ್ನೇ ಕಣ್ಮುಂದಿಡುತ್ತದೆ.

ಪಾಂಚಾಳ ದೊರೆಗಳಲ್ಲಿಗೆ ಸಿದ್ದಪ್ಪಾಜಿ ಕಬ್ಬಿಣ ಬಿಕ್ಸೆಗೆಂದು ಬಂದಾಗ ಈ ದೊರೆಗಳು ಮಾತನಾಡಿಸುವುದು ಅವರ "ಹಣದ ಚೀಲವನ್ನು ಗಲಗಲ ಅಲ್ಲಾಡಿಸುತ್ತ ತಮ್ಮ ವಿಶ್ವ ಭಾಷೆಯಲ್ಲಿ ಮಾತಾಡಿಸಿ, ಮಾತಾಡಿಕೊಳ್ಳುತ್ತಾರೆ".

ಇವರ ನಿಲುವನ್ನು ಗ್ರಹಿಸಿದ ಸಿದ್ದಪ್ಪಾಜಿ ಪ್ರತಿಕ್ರಿಯಿಸುವ ಮುಕ್ತ ಮನಸ್ಸಿನ ಮಾತು ಇದುಃ

ಸಿದ್ದಪ್ಪಾಜಿಃ "ಅಪ್ಪಾ ಪಾಂಚಾಳ್ರಾ, ಈಟೆಲ್ಲಾ ಸಂಪತ್ತಿದ್ರೂ ನಿಮ್ಗೆ ದುಡ್ಡಿನ ದಾವ್ರಾ ತೀರಿಲ್ಲ. ನಿಮ್ ದುರಾಸೆ ಒಳ್ಗಿಂದ ಬೆಟ್ಟ, ಗುಡ್ಡ, ನದಿ, ಸಮುದ್ರ ಪಂಚಭೂತಗೋಳು ಎಲ್ಲವೂ ಚಿತ್ರ ಇಂಸೆಯಿಂದ ಎಂಗ್ ಒದ್ದಾಡ್ತಾ ಅವೆ. ಗೋಳಾಡ್ತಾ ಅವೆ ಕೇಳಿಸ್ಕಳಿ"."50"

ಈ ಮಾತಿನಲ್ಲಿ ಸಿದ್ದಪ್ಪಾಜಿ ಮತ್ತು ಪಾಂಚಾಳ ರಾಜರ ಪರಿಸರದ ಬಗೆಗಿನ ತಿಳುವಳಿಕೆಯ ವ್ಯತ್ಯಾಸವನ್ನು ಕಾಣಬಹುದು. ಹಾಗೆಯೆ ಈ ದೊರೆಗಳ ಅತೀ ವ್ಯವಹಾರ, ಜ್ಞಾನವನ್ನು ಕಂಡುಕೊಂಡ ಸಿದ್ದಪ್ಪಾಜಿ, ಈ ದೊರೆಗಳಿಂದ ಕಂಗಾಲಾದಂತಹ ನಿಸರ್ಗ ದೇವತೆಗಳನ್ನು ಢಮರುಗ ಭಾರಿಸುತ್ತಾ ಹೀಗೆ ಕರೆಯುತ್ತಾರೆ.

ಸಿದ್ದಪ್ಪಾಜಿಃ "ಅಮ್ಮಾ ಜಲದೇವತೆಗಳಾ, ನೆಲದೇವತೆಗಳಾ, ವಾಯುದೇವತೆ, ಅಗ್ನಿ ಆಕಾಸ ದೇವತೆಗುಳಾ, ಮಾರೀರಾಗಿ, ಕಾಡು-ಮೇಡು ಒಕ್ಕೊಂಡು ಗೋಳಾಡ್ತಾ ಇರೋರಾ, ಬನ್ನಿ ಬನ್ನಿ...ಬನ್ನಿ... ಈ ನರ ರಕ್ಕಾಸರನ್ನು ಬಕ್ಸನೆ ಮಾಡಿ"."51"

ಎಂದು ಕರೆದು ಈ ಪ್ರಕೃತಿ ಸಂಪತ್ತಾದ ಗಾಳಿ, ನೀರು, ಭೂಮಿ, ಆಕಾಶ, ಕಾಡುಗಳೆ ಮಾರಿಗಳಾಗಿ ಬಂದು ಈ ಉದ್ಯಮಿ ಶಕ್ತಿಗಳನ್ನು ಓಡಿಸುವ ಕ್ರಿಯೆ ಇಲ್ಲಿ ಮಾರ್ಮಿಕವಾದುದಾಗಿದೆ.

ಈ ನಾಟಕ ಬರೆದ ಎಚ್.ಎಸ್. ಶಿವಪ್ರಕಾಶರ " 'ಮಹಾಚೈತ್ರ' 'ಮಂಟೇಸ್ವಾಮಿ ಕಥಾ ಪ್ರಸಂಗ'ದ ಮುಂದುವರಿದ ಭಾಗ ಈ 'ಮಾದಾರಿ ಮಾದಯ್ಯ'" ಹಾಗಾಗಿ ಈ ನಾಟಕದ ಕೊನೆ ಭಾಗದ ಉದಾಹರಣೆಗಳೊಂದಿಗೆ ಚರ್ಚೆ ಮುಗಿಸಬಹುದು. ಈ ನಾಟಕದಲ್ಲಿ ಶ್ರವಣ ದೊರೆ ಭೂಮಿತಾಯಿಯ ಗಂಡನಾಗಲು ಹೋದಾಗ ಮಾದಯ್ಯ ತಾನು ತಂದ ಚಪ್ಪಲಿ ತೊಡಿಸಿ ಆ ಮೂಲಕ ಶ್ರವಣದೊರೆಯನ್ನು ಕೊನೆಗೊಳಿಸಿ ನೆಲತಾಯಿಯನ್ನು ಮುಕ್ತಗೊಳಿಸುತ್ತಾನೆ. ಮುಕ್ತಿಗೊಂಡ ನೆಲ ತಾಯಿ ಮತ್ತೆ ತನ್ನ ಅಸ್ತಿತ್ವ ಪಡೆದುಕೊಳ್ಳುತ್ತಾಳೆ. ಕುರಿತು ಗುಡ್ಡರಾಡುವ ಮಾತು ಹೀಗಿದೆ.

ಗುಡ್ಡ ೧ಃ ನೆಲ್ತಾಯಿ ಎದೆವಳ್ಗೆ ಸಮುದ್ರ ತುಂಬ್ತು
ಗುಡ್ಡ ೨ಃ ಅವಳಾಕಾಸ್ ದೊಳ್ಗೆ ಮಳೆ ತರ ಮೋಡ ಕಟ್ತಾ ಅದೆ.
ಗುಡ್ಡ ೩ಃ ಅವಳ ಉಡೀವಳ್ಗೆ ಜೀವ ರಾಶಿ ಮೊಳಿತಾ ಅದೆ.
ಗುಡ್ಡ ೪ಃ ಅವಳ ಚಿಟಿಗಳೊಳ್ಗೆ ಆಲಿನ್ ಝರಿ ಅರಿತಾ ಅವೆ.
ಗುಡ್ಡ ೫ಃ ಅವಳ ಕಣಿವೆಗಳಲ್ಲಿ ಆಡುಪದ ಕೇಳ್ತಾ ಅವೆ."52"

ಒಟ್ಟಾರೆ 'ಮಂಟೇಸ್ವಾಮಿ ಕಥಾ ಪ್ರಸಂಗ' ದಲ್ಲಿ ನಿಸರ್ಗ, ಪರಿಸರ ಒಡೆದು ಹೋಳಾದ ಬಿಡಿಭಾಗಗಳಿಗೆ ಕೆಂಪಣ್ಣ, ಈರಣ್ಣ, ಮಲತಾಯಿ ಪಾತ್ರಗಳು ಬಿಡಿಬಿಡಿಯಾಗಿ ಪ್ರತಿನಿಧಿಸುತ್ತಿವೆ. ಆದರೆ 'ಮಾದಾರಿ ಮಾದಯ್ಯಾ' ದಲ್ಲಿ ಸಮಾಜ, ಪ್ರಕೃತಿ ಪರಿಸರನಾಶವನ್ನು ಶ್ರವಣದೊರೆ ಒಬ್ಬನೆ ಪ್ರತಿನಿಧಿಸುತ್ತಿರುವುದು, ಈ ಕೃತಿಯ ವಿಶೇಷವಾಗಿದೆ.

ಚಂದ್ರಶೇಖರ ಕಂಬಾರರು ಬರೆದ ಮಕ್ಕಳ ನಾಟಕ 'ಪುಷ್ಪರಾಣಿ'. ಈ ನಾಟಕದ ಕಥೆ ಹೀಗಿದೆ!

ಒಬ್ಬ ಮಹಾರಾಜ ವನರಕ್ಷಣೆಗೆಂದು ಹೋಗಿ, ಅಲ್ಲಿ ವನಪಾಲಕನ ಮಗಳು ಪುಷ್ಪರಾಣಿಯನ್ನು ಮದುವೆಯಾಗಿ ತನ್ನ ನಾಡಿಗೆ ಕರೆದುಕೊಂಡು ಬರುತ್ತಾನೆ. ಈ ನಾಡಿನ ಅರಮನೆಯಲ್ಲಿ ಪುತ್ರ ಸಂತಾನವಿಲ್ಲದೆ, ಗಿಳಿ ಗಿಡುಗನ ಬೇಟೆಯಾಟದಲ್ಲಿ ಆನಂದಿಸುತ್ತಿದ್ದ ಮಹಾರಾಣಿ ರಾಜನ ಮದುವೆಯ ವಿಷಯ ತಿಳಿದು ಕೆಂಡ ಕಾರುತ್ತಾಳೆ. ರಾಜ ಕರೆತಂದ ಪುಷ್ಪರಾಣಿ ಗರ್ಭವತಿಯಾದಾಗ, ಸವತಿಮಚ್ಚರದಲ್ಲಿ ಒಂದು ಸಂಚು ಹೂಡುತ್ತಾಳೆ. ಇದರಲ್ಲಿ ತನ್ನ ತಂದೆಗೆ ಗಂಡನನ್ನು ಆರೋಪಿಸಿ ಪತ್ರ ಬರೆದು ಗಂಡನನ್ನು ಯುದ್ಧಕ್ಕಟ್ಟುತ್ತಾಳೆ. ಯುದ್ಧಕ್ಕೆ ಹೊರಟ ರಾಜ, ಗರ್ಭವತಿ ಪುಷ್ಪರಾಣಿಯನ್ನು ಮಹಾರಾಣಿಗೆ ಒಪ್ಪಿಸುತ್ತಾನೆ. ಇದೇ ಸಮಯ ಕಾಯುತ್ತಿದ್ದ ಮಹಾರಾಣಿ ಮನರಂಜನೆಗಾಗಿ ತಂಗಿಯನ್ನು ಮರವಾಗುವ, ಹೂ ಬಿಡುವ ಆಟ ತೋರಿಸೆಂದು ಪುಸಲಾಯಿಸುತ್ತಾಳೆ. ಇದಕ್ಕೆ ಮಣಿದ ಪುಷ್ಪರಾಣಿ ವಿವರಣೆಯೊಂದಿಗೆ ನಾಲ್ಕು ಹರುಳುಗಲ್ಲುಗಳನ್ನು ಕೊಡುತ್ತಾಳೆ. ಮಹಾರಾಣಿ ಮರವಾಗಿಸಿ ಹೂವರಳಿಸಿ, ಹೂವುದರಿಸುವ ಮೂರು ಕಲ್ಲುಗಳೆಸೆದು, ನಾಲ್ಕನೆ ಕಲ್ಲೆಸೆಯದೆ ಪುಷ್ಪರಾಣಿಯನ್ನು ಮರವಾಗಿಸಿ ಆ ಮರಕಡಿಯಲು ಮರಕಟುಕರಿಗೆ ಹೇಳಿ ತನ್ನ ಸೇಡು ತೀರಿಸಿಕೊಳ್ಳುತ್ತಾಳೆ. ಆದರೆ ಹಕ್ಕಿ ಪಕ್ಷಿಗಳು ಮರ ಕಟುಕರನ್ನು ಕಚ್ಚಿ ಓಡಿಸಿ ಪುಷ್ಪರಾಣಿ ಮರವನ್ನು ರಕ್ಷಿಸುತ್ತವೆ.

ಪುಷ್ಪರಾಣಿಗೆ ಮಗು ಜನನವಾಗಿ, ಈ ಮಗುವಿನಿಂದ ಮಹಾರಾಣಿಯ ಕನಸಿನಲ್ಲಿ 'ಅಮ್ಮ' ಎಂದು ಕರೆಯುವಂತೆ ಸೂತ್ರಧಾರ, ಮೇಳದವರು ಮಾಡುತ್ತಾರೆ. ಯುದ್ಧದಲ್ಲಿ ಗೆದ್ದರಾಜ ಸಂತೋಷವಿಲ್ಲದೆ, ಹಕ್ಕಿ ಪಕ್ಷಿಗಳ ಸೂಚನೆ ಮೇರೆಗೆ ಕಳವಳದಿಂದ ವನಪಾಲಕನನ್ನು ಭೇಟಿಯಾಗಿ ಪುಷ್ಪರಾಣಿಯನ್ನು ಕೇಳಿದಾಗ; ಅವನು ಬಂದಿಲ್ಲವೆನ್ನುತ್ತಾನೆ. ಆಗ ರಾಜನನ್ನು ಹಿಂಬಾಲಿಸಿ ಬಂದ ಹಕ್ಕಿ ವನಪಾಲಕನಿಗೆ ಎಲ್ಲ ವಿವರ ನೀಡಿ

ತಾನು ತಂದ ನಾಲ್ಕನೆ ಕಲ್ಲನ್ನು ಕೊಟ್ಟು ಇಬ್ಬರನ್ನು ಕರೆದೊಯ್ಯುತ್ತದೆ. ಅಲ್ಲಿಗೆ ತನ್ನ ಪಾಪಕೃತ್ಯಗಳಿಂದ ಪಶ್ಚಾತ್ತಾಪಪಟ್ಟು ಬಂದ ಮಹಾರಾಣಿ; ರಾಜ ಮತ್ತು ಪುಷ್ಪರಾಣಿಯರಲ್ಲಿ ನನ್ನನ್ನು ಕ್ಷಮಿಸಬೇಡಿರೆಂದು ಕೇಳಿಕೊಂಡು, ರಾಜ ಕೊಟ್ಟ ನಾಲ್ಕನೆ ಕಲ್ಲನ್ನು ಮರದ ಮೇಲೆ ಎಸೆಯುತ್ತಾಳೆ. ಆಗ ಪುಷ್ಪರಾಣಿ ಪ್ರತ್ಯಕ್ಷವಾಗಿ, ತನ್ನ ಕಂದನಿಗೆ ಮಹಾರಾಣಿಯಾದ ಅಕ್ಕನನ್ನು ತಾಯಿಯನ್ನಾಗಿ ಮಾಡಿ, ಶಿಕ್ಷೆಯಿಂದ ಮುಕ್ತಗೊಳಿಸುತ್ತಾಳೆ. ನಾಡಿನ ಪ್ರತಿನಿಧಿ ಮಹಾರಾಜನಿಂದ ಕಾಡು ಮತ್ತು ಅಲ್ಲಿನ ಪ್ರಾಣಿ ಪಕ್ಷಿಗಳ ಸ್ವತಂತ್ರ ಜೀವನದ ಅಸ್ತಿತ್ವಕ್ಕೆ ಬಿನ್ನವಿಸಿಕೊಳ್ಳುತ್ತಾಳೆ.

ಇಷ್ಟು ಈ ನಾಟಕದ ಕಥೆಯ ಸಾರಾಂಶ.

ಈ ನಾಟಕದ ಮೊದಲ ದೃಶ್ಯದಲ್ಲೆ ನಾಟಕಕಾರರು ಕಾಡಿನ ಮತ್ತು ನಾಡಿನ ಸಂಬಂಧ, ಈ ಸಂಬಂಧದಿಂದ ಮನುಷ್ಯನ ಬದುಕನ್ನು ಮೇಳ ಮತ್ತು ಸೂತ್ರಧಾರನ ಮೂಲಕ ಕಟ್ಟಿಕೊಡುತ್ತಾರೆ.

ಸೂತ್ರಧಾರಃ ಕಾಡಿಗಂಟಿ ನಾಡಿದೆ.
ಮೇಳ ಃ ಅಂದರೆ ನಾಡಿಗಂಟಿ ಕಾಡಿದೆ. ತಾಯಿ ಮಕ್ಕಳಿದ್ದ ಹಾಗೆ. ಗಂಡ ಹೆಂಡತಿ ಹಾಗೆ.
ಸೂತ್ರಧಾರಃ ಕಾಡಿಗೆ ಋತುಮಾನ ಬಂದರೆ ನಾಡಿಗೆ ಬಣ್ಣವೇರುತ್ತಿತ್ತು.
ಮೇಳ ಃ ನಾಡು ತನ್ನ ಪಾಡಿಗೆ ತಾನು ಕೈ ಬಿಟ್ಟು ಆಡಿದರೆ ಕಾಡು ನಿರುಮ್ಮಳ ಮಲಗಿರುತ್ತಿತ್ತು.
ಸೂತ್ರಧಾರಃ ಕಾಡಿನ ಮೂಗುತಿಯ ಹಾಗೆ ಅಲ್ಲಿ ನೋಡ್ರಿ ಒಂದು ಪಟ್ಟಣ. "53"

ಇಲ್ಲಿ ಕಾಡು ನಾಡುಗಳ ಸಂಬಂಧ ತಾಯಿಮಕ್ಕಳಿದ್ದ ಹಾಗೆ, ಗಂಡ ಹೆಂಡತಿ ಹಾಗೆ. "ಎನ್ನುವ ಮೇಳದ ಮಾತು ಮಾತ್ಯ ಸಂಹಿತೆಯಲ್ಲಿ ಕಾಡಿನ ಸ್ಥಾನ ಮಾನವನ್ನು ಪ್ರತಿಷ್ಠಾಪಿಸುತ್ತದೆ. "ಕಾಡಿಗೆ ಋತುಮಾನ ಬಂದರೆ ನಾಡಿಗೆ ಬಣ್ಣವೇರುತ್ತಿತ್ತು", ಕಾಡಿನ ಮೂಗುತಿಯ ಹಾಗೆ ಪಟ್ಟಣ". ಎಂಬ ಸೂತ್ರಧಾರನ ಮಾತುಗಳು ಕಾವ್ಯಾತ್ಮಕವಾಗಿವೆ. ಇಲ್ಲಿ 'ಕಾಡಿನ ಋತು' 'ಹೆಣ್ಣಿನ ಋತು' ವನ್ನು ನೆನಪಿಸಿ ಸೃಷ್ಟಿಯ 'ಚಿಹ್ನೆ' ಯಾಗಿದೆ. ಇಂತಹ ಸೃಷ್ಟಿಯ 'ಋತು ಮಾನ' ಬಂದರೆ ನಾಡಿಗೆ ಬಣ್ಣವೇರುತ್ತಿತ್ತು. ಇದು ಸ್ಫೂರ್ತಿ ಸಂತೋಷ, ಕ್ರಿಯಾಶೀಲ ಚಟುವಟಿಕೆಗಳು ನಾಡ ತುಂಬ ಹರಡುವುದರಿಂದ ನಾಡಿಗೆ ಬಣ್ಣವೇರುವಂತಿತ್ತು. 'ಕಾಡಿನ ಮೂಗುತಿಯ ಹಾಗೆ ಪಟ್ಟಣ' ಎಂಬ ಮಾತಿನಲ್ಲಿ ವ್ಯಂಗ್ಯವಿದೆ. ಇಲ್ಲಿ ಕಾಡು ನಿರಾಭರಣ ಸುಂದರಿ, ಇದರ ಸೌಂದರ್ಯಕ್ಕೆ ಪಟ್ಟಣದಂತಹ ಮೂಗುತಿ ಬೇಕಾಗಿಲ್ಲ. ಅದೇ ನಾಡು ಕಾಡಿನ ಆಭರಣವಿಲ್ಲದೆ ಶೋಭಿಸಲಾರದು. ಸೌಂದರ್ಯವಿಲ್ಲದೆ, ನಾಡಿನ ಜೀವಕ್ಕೆ ಅಸ್ತಿತ್ವವೇ ಇಲ್ಲದಂತಾಗುತ್ತದೆ. ಹಾಗಾಗಿ 'ಕಾಡಿನ ಮೂಗುತಿಯ ಹಾಗೆ ಪಟ್ಟಣ'ವಲ್ಲ 'ಪಟ್ಟಣದ ಮೂಗುತಿಯ ಹಾಗೆ ಕಾಡು' ಎನ್ನುವ ಧ್ವನಿ ಈ ಮಾತಿನಲ್ಲಿದೆ.

ಈ ಮಾತುಗಳಲ್ಲಿ ಪ್ರಕೃತಿಯ ಸಂವಾದವನ್ನು ಕಾಣುತ್ತೇವೆ. ಇಂತಹ ಸಂವಾದದಿಂದ ಶಿವಾಪುರ ಪಟ್ಟಣದಲ್ಲಿ ಬೆಳದಿಂಗಳು, ಬಿಸಿಲಿಗೆ, ಬೆಳ್ಳಿ-ಬಂಗಾರದ ಅರಮನೆ ಇಂತಹ ಮನೆಗಳ ಮೇಲೆ ರತ್ನದ ಕಳಸ. ಇಂಥ ಪಟ್ಟಣದ ಚಂದ್ರನಿವಾಸ ಮನೆಗಳಿಗೆ ಚಂದ್ರನ ಒಡೆತನವಿದೆ. ಇದರಿಂದ ಶಿವಾಪುರ ಪಟ್ಟಣಕ್ಕೆ ಕಾಡೇ ಮೂಗುತಿಯಾಗಿರುವುದನ್ನು ಕಾಣಬಹುದು. ಹಾಗಾಗಿ ಮನುಷ್ಯನ ಮತ್ತು ಕಾಡಿನ ಸುಖ-ಸಂತೋಷದ ಭವ್ಯ ಬದುಕನ್ನು ಕಾಣಲು ಪ್ರಕೃತಿ ದೇವಿಯ ಪ್ರಸನ್ನತೆಯೇ ಕಾರಣ ಎಂಬುದು ವ್ಯಕ್ತವಾಗುತ್ತದೆ.

ಇಂತಹ ತಿಳುವಳಿಕೆ ಇಲ್ಲದಾಗ ಪ್ರಕೃತಿ ಬಲಿಯಾಗುತ್ತದೆ. ರಾಜನ ವೈರಿಸೈನಿಕರು ಉಪವನದಲ್ಲಿ ನುಗ್ಗಿ ಮರಗಳನ್ನು ಕಡಿದು ಹಾಕುವುದನ್ನು ವನ ಪಾಲಕ ರಾಜನಿಗೆ ಹೇಳುತ್ತಾನೆ. ಹೇಳುವಾಗ ಕಡಿದು ಬಿದ್ದ ಮರಗಳಿಂದ ಪಕ್ಷಿಗಳು ವನ್ಯ ಜೀವಿಗಳು ಕಿರುಚಿ ದಿಕ್ಕಪಾಲಾಗಿ ಓಡಿ ಹೋದವೆಂದು, ಹೇಳುತ್ತಾನೆ. ಈ ವನ್ಯಜೀವಿ ಕಂಗಾಲಾದದ್ದಕ್ಕೆ ರಾಜ ಸಿಟ್ಟಿನಿಂದ ಮಂತ್ರಿ ಸೇನಾಪತಿಗಳೊಡನೆ ರಕ್ಷಣೆಗೆ ಹೊರಡುತ್ತಾನೆ. 'ಕಾಡಿಗೂ ರಾಜ, ನಾಡಿಗೂ ರಾಜ' ಎಂಬ ಸೂತ್ರಧಾರನ ಮಾತಿಗೆ ಆಧಾರವಾಗಿ ಈ ಕ್ರಿಯೆ ರೂಪುಗೊಂಡಿದೆ. ಹಾಗಾಗಿ ರಾಜನ ಪಾತ್ರ ಸೃಜನ ಶೀಲ ಪಾತ್ರವಾಗಿ ಬೆಳೆಯುತ್ತ ಹೋಗುತ್ತದೆ.

ಕಾಡಿನ ಪ್ರತಿನಿಧಿಯಾದ ಪುಷ್ಪರಾಣಿಯನ್ನು ವನಪಾಲಕ ಅವಳ ಸ್ವಾಭಾವಿಕ ಚಟುವಟಿಕೆಗಳಿಂದ ರಾಜ ಮಂತ್ರಿಯರಿಗೆ ಪರಿಚಯಿಸುತ್ತಾನೆ. ಇದನ್ನು ನಂಬಲಾಗದ ರಾಜ ಹೀಗೆನ್ನುತ್ತಾನೆ.

ಮಹಗರಾಜಃ ನಿಜ ಹೇಳು ಈಕೆ ನಿನ್ನ ಮಗಳೋ? ಮಹಾರಾಜಃ
ವನಪಾಲಕಃ ನಾನ್ಯಾಕೆ ಸುಳ್ಳು ಹೇಳಲಿ? ಕಾಡಿನಲ್ಲಿ ಸಿಕ್ಕ ಕೂಸನ್ನೇ ಮಗಳೆಂದು ಭಾವಿಸಿ ಸಾಕಿದೆ ಪ್ರಭು. ಆಮೇಲೆ ತಿಳಿಯಿತು ಇವಳು ವನದೇವತೆಯ ಮಗಳೆಂದು. ಅವಳೆ ನಾಲ್ಕು ಚಿಕ್ಕ ಚಿಕ್ಕ ಕಲ್ಲು ಕೊಡುತ್ತಾಳೆ. ಒಂದೊಂದನ್ನು ಅವಳ ಮೇಲೆ ಎಸೆಯುತ್ತಾ ಹೋದರೆ ಒಂದರಿಂದ ಮರವಾಗುತ್ತಾಳೆ. ಇನ್ನೊಂದನ್ನೆಸೆದರೆ ಹೂ ಬಿಡುತ್ತಾಳೆ. ಮೂರನೆಯದರಿಂದ ಹೂ ಉದುರಿಸುತ್ತಾಳೆ. ನಾಲ್ಕನೆಯ ಕಲ್ಲು ಎಸೆದರೆ ಹೀಗೆ ಪುನಃ ಹುಡುಗಿಯಾಗುತ್ತಾಳೆ. ಪ್ರಭು."54"

ವನಪಾಲಕ 'ಕಾಡಿನಲ್ಲಿ ಸಿಕ್ಕ ಕೂಸನ್ನೇ ಮಗಳೆಂದು ಭಾವಿಸಿ, ಪ್ರಭು' ಎಂಬಲ್ಲಿ ವನಪಾಲಕನ ಪ್ರಕೃತಿಯ ತಿಳುವಳಿಕೆ ಇದೆ. ಇಂತಹ ತಿಳುವಳಿಕೆಯಿಂದ ಕಾಡಿನೊಡನೆ 'ಕೌಟುಂಬಿಕ ಸಂಬಂಧ' ವನ್ನು ಕಾಣಬಹುದಾಗಿದೆ. ಇಲ್ಲಿ ಬಳಕೆಯಾದ "ವನದೇವತೆ, ಹೆಣ್ಣು, ಮರ" ಇವುಗಳು ಸ್ತ್ರೀಲಿಂಗ ಪದಗಳಾಗಿ ಇವು ಸೃಷ್ಟಿಯ ಸಂಕೇತವಾಗಿವೆ. ಇಲ್ಲಿ ಎಸೆದ ನಾಲ್ಕು ಕಲ್ಲುಗಳಲ್ಲಿ "ಮರ ಹೂ ಬಿಡುವುದು, ಹೂ ಉದುರುವುದು ಮತ್ತೆ ಹುಡುಗಿಯಾಗುವುದು" ಈ ಕ್ರಿಯಾತ್ಮಕ ಸಂಬಂಧವೆ ಹೆಣ್ಣು ಮತ್ತು ಮರಗಳ ಸ್ವಾಭಾವಿಕ ಕ್ರಿಯೆಯನ್ನು, ಈ ಕ್ರಿಯೆಯ ಸೃಜನಶೀಲತೆಯನ್ನು ತಿಳಿಸಿಕೊಡುತ್ತವೆ. ಇಲ್ಲಿ ಬಳಕೆಯಾಗಿರುವ ನಾಲ್ಕು ಕಲ್ಲುಗಳು ಕಾಲದ, ಋತುಮಾನದ ಸಂಕೇತಗಳಾಗಿವೆ. ಮಂತ್ರಿಯ ಮಾತಿಗೆ ವನಪಾಲಕ "ಭೂತಚೇಷ್ಟೆಯೂ ಅಲ್ಲ, ಮಂತ್ರಗಾರಿಕೆಯೂ ಅಲ್ಲ ಸ್ವಾಮಿ" ಎನ್ನುವಲ್ಲಿ ಸ್ವಾಭಾವಿಕ ಋತುಮಾನಗಳ ಕ್ರಿಯಾಶೀಲ ಸತ್ಯದ ಅರಿವಿದೆ.

ರಾಜ ವನಪಾಲಕನ ಮಾತು ಮತ್ತು ಕ್ರಿಯೆಗಳಿಂದ ಪ್ರೇರಿತನಾಗಿ ಪುಷ್ಪರಾಣಿಯನ್ನು ತಾನೆ ಪ್ರಯೋಗಕ್ಕೊಳಪಡಿಸುತ್ತಾನೆ. ಆಗ ಪುಷ್ಪರಾಣಿ ತನ್ನೆಲ್ಲ ದರ್ಶನವನ್ನು ನೀಡಿ ಕೊನೆಗೆ ರಾಜನೆದುರು ಮೊದಲಿನ ಪುಷ್ಪರಾಣಿಯಾಗಿ ನಿಲ್ಲುತ್ತಾಳೆ. ರಾಜ ಆಶ್ಚರ್ಯದಿಂದ ಪುಷ್ಪರಾಣಿಗೆ ಮನಸೋತು ವನಪಾಲಕನನ್ನು ಕೇಳಿ ಮದುವೆಯಾಗುತ್ತಾನೆ. ಈ ಕ್ರಿಯೆ ಮೊದಲ ದೃಶ್ಯದಲ್ಲಿ ಸೂತ್ರಧಾರ, ಮೇಳದವರ ಸಂಭಾಷಣೆಯಲ್ಲಿ ಬರುವ "ನಾಡಿಗಂಟೆ ಕಾಡಿದೆ. ತಾಯಿ ಮಕ್ಕಳಿದ್ದ ಹಾಗೆ, ಗಂಡ ಹೆಂಡತಿ ಹಾಗೆ" ಎಂಬ ಮಾತಿನಂತೆ ರಾಜ 'ಗಂಡ ಹೆಂಡತಿ ಹಾಗೆ' ಎಂಬ ಮಾತಿಗೆ ಪೂರಕವಾಗಿ ಕಾಡಿನ ಪುಷ್ಪರಾಣಿಯನ್ನು ಮದುವೆಯಾಗಿ ನಾಡಿಗೆ ಕರದೊಯ್ಯುತ್ತಾನೆ.

ಈ ಘಟನೆ ಸಾಂಪ್ರದಾಯಿಕ ಸಂಬಂಧದ ರೀತಿ ಹೆಣೆಯಲ್ಪಟ್ಟಿದ್ದರೂ ಕೂಡ ಇಂತಹ ದೃಶ್ಯದಿಂದ ನಾಟಕದ ಆಶಯಕ್ಕೆ ಭಂಗವಾಗಿದೆ. ಯಾಕೆಂದರೆ ಮುಗ್ಧ ಕಾಡು ಜನ ಅಥವಾ ಕಾಡಿನ ಪ್ರತಿನಿಧಿ ಪುಷ್ಪರಾಣಿಯನ್ನು ಕಾಡು ನಾಡಿನ ಪ್ರಭುವೆನ್ನಿಸಿಕೊಂಡ ರಾಜ ಕಾಡಿನ ಪುಷ್ಪರಾಣಿಯನ್ನು ತನ್ನ ನಾಡಿನ ಅರಮನೆಗೆ ಕರೆದೊಯ್ಯುವುದು ಯುಕ್ತವಾಗಿಲ್ಲ. ಯಾಕೆಂದರೆ ಕಾಡು ಪ್ರಭುಗಳ ದಾಸಿಯಾದಂತೆ ಆಗಿದೆ. ಪ್ರಭುಗಳು ಕಾಡು ಮತ್ತು ಕಾಡು ಜನರನ್ನು ಬಲಿಪಶುಗಳನ್ನಾಗಿ ಮಾಡುವುದನ್ನು ಮುಂದೆ ನಾಟಕವೆ ಚಿತ್ರಿಸುತ್ತದೆ.

ರಾಜ ಅರಮನೆಗೆ ಪುಷ್ಪರಾಣಿಯನ್ನು ಕರೆದುಕೊಂಡು ಹೊರಟಾಗ, ವನಪಾಲಕ ಪುಷ್ಪರಾಣಿಯನ್ನು ಹೀಗೆ ಬೀಳ್ಕೊಡುತ್ತಾನೆ.

ಪುಷ್ಪರಾಣಿ ಃ ಅಂದರೆ ನಾನು ಈಗಲೇ ತಂದೆಯನ್ನು ಬಿಟ್ಟು ಹೊರಡಬೇಕೆ?
ವನಪಾಲಕಃ ಹೌದು ಹೆಣ್ಣಿಗೆ ತೌರುಮನೆ ಕೊನೆಯಲ್ಲಿ ಮಗಳೆ ಆಗಲೇ ದೊಡ್ಡವಳಾಗಿದ್ದೀ. ಮಹಾರಾಜರ ಅರಮನೆಗೆ ಬೆಳಕಾಗಿ, ಅವರ ವಂಶ ವಿಸ್ತರಿಸಿ, ಉದ್ಧಾರ ಮಾಡು ನೀನು ವನದೇವತೆಯ ಮಗಳಾದ್ದರಿಂದ ಹ್ಯಾಗೂ ಬೆಳೆದು ದೊಡ್ಡವಳಾಗುತ್ತಿದ್ದೆ. ಆದರೆ ನಿನಗೆ ತಂದೆ ತಾಯಿ ಆಗುವ ಎರಡು ಭಾಗ್ಯಗಳನ್ನು ನನಗೆ ದಯಮಾಡಿ ಕೊಟ್ಟೆ ತಾಯಿ. ನೀನು ನನ್ನ ಕಾಳಜಿ ಬಿಟ್ಟು ಅರಮನೆಯಲ್ಲಿ ಸುಖವಾಗಿರು. ನನಗೆ ಜೊತೆಗಾರರಾಗಿ ಈ ಹಸಿರಿದೆ. ನಿನ್ನ ಅಗಲಿಕೆಯ ಕಣ್ಣೀರಿದೆ. "55"

ಈ ಪಾತ್ರದ ಮಾತುಗಳಲ್ಲಿ ಸಮಾಜ ಪರಿಸರದ ಸಂವೇದನೆಯಿದೆ. ಅಪ್ಪ-ಅಮ್ಮನ ಕರ್ತವ್ಯವನ್ನು ಮುಗಿಸಿ ಪುತ್ರಿ ಪ್ರೇಮದಿಂದ ಹರಸಿ ತವರಿಂದ ಮಗಳನ್ನು ಕಳಿಸಿಕೊಡುವ ಈ ದೃಶ್ಯ ಬಾವಪೂರ್ಣವಾಗಿದೆ.

ಹಾಗೆಯೇ ಪುಷ್ಪರಾಣಿ ತಂದೆಯ ಪುತ್ರಿ ವಾತ್ಸಲ್ಯದ, ಭಾವ ಪೂರ್ಣ ಮಾತಿನಿಂದ ದುಃಖಪಡುತ್ತಾಳೆ. ಇವಳು ಗಂಡನೊಡನೆ ಹೊರಟಾಗ, ತಂದೆಯ ಯೋಗ ಕ್ಷೇಮದ ಜವಾಬ್ದಾರಿಯನ್ನು ತನ್ನ ಪ್ರತಿನಿಧಿಗಳಾದ ಮರ, ಪ್ರಾಣಿ, ಪಕ್ಷಿಗಳಿಗೆ ಹೀಗೆ ವಹಿಸಿಕೊಡುತ್ತಾಳೆ.

ಪುಷ್ಪರಾಣಿಃ "ನನ್ನ ಪ್ರೀತಿಯ ಮರಗಳೇ, ಪಕ್ಷಿಗಳೇ, ನನ್ನ ವೃದ್ಧ ತಂದೆಯನ್ನು ಚೆನ್ನಾಗಿ ನೋಡಿಕೊಳ್ಳಿ. ನನ್ನನ್ನು ಕಣ್ತುಂಬ ಕಂಡಲ್ಲದೆ ಬಾಯಲ್ಲಿ ನೀರು ಕೂಡ ಹಾಕುತ್ತಿರಲಿಲ್ಲ. ನನ್ನ ನೆನಪೇ ಅವನಿಗೆ ಸಂಜೀವಿನಿ. ಆದ್ದರಿಂದ ಅವನಿಗೆ ದಿನಾ ನನ್ನ ಯೋಗ ಕ್ಷೇಮದ ವರದಿ ಒಪ್ಪಿಸಿ. ಬೆಳಗಿನ ಚಳಿಗೆ ಅವನ ಪಕ್ಕ ಮರೆಯದೆ ಒಂದಿಷ್ಟು ಬೆಂಕಿ ಮಾಡಿಕೊಡಿ". "56"

ಪುಷ್ಪರಾಣಿಯ ಈ ಮಾತು ಕಾಳಿದಾಸನ 'ಶಾಕುಂತಲ' ನಾಟಕದಲ್ಲಿ ಗಂಡನ ಮನೆಗೆ ಹೊರಟ ಶಕುಂತಲೆಯ ಮಾತಿಗೆ ಹತ್ತಿರವಾಗಿದೆ. ಆ ಶಕುಂತಲೆ ಸಖಿ ಮತ್ತು ತಂದೆಯವರಿಗೆ ತನ್ನ ಪ್ರೀತಿಯ ಒಡನಾಡಿಗಳಾದ ಗಿಡ ಬಳ್ಳಿ, ಪ್ರಾಣಿ ಪಕ್ಷಿಗಳ ಯೋಗಕ್ಷೇಮದ ಜವಾಬ್ದಾರಿಯನ್ನು ಹೀಗೆ ವಹಿಸುತ್ತಾಳೆಃ

ಶಕುಂತಳೆಃ "ಸಖಿಯರೆ ಈ ಮೊಲ್ಲೆಯ ಬೀಳನ್ನು ನಿಮ್ಮಿಬ್ಬರ ಕೈಗೆ ಒಪ್ಪಿಸಿದ್ದೇನೆ.
.... ಶಕುಂತಲೆಃ ತಂದೆ,
ಎಲೆ ಮನೆಯ ಬಳಿ ಮಲ್ಲಿಗೆ ಸುಳಿಯುವ ಪೂರ್ಣ ಗರ್ಭಿಣಿಯಾದ ಈ ಹುಲ್ಲೆಗೆ ಸುಖ ಪ್ರಸವವಾದ ಒಡನೆಯೆ ನನಗೆ ಕುಶಲ ಪತ್ರಿಕೆ ಕಳುಹಿಸಿಕೊಡಿ." "57"

ಇಲ್ಲಿ ಈ ಎರಡು ಪಾತ್ರಗಳು ಒಂದೊಂದು ಒಂದೊಂದರ ಪ್ರತಿನಿಧಿಯಾಗಿ ತಮ್ಮವರಿಗೆ ತಮ್ಮೊಳಗಿನ ಪ್ರತಿನಿಧಿಗಳ ರಕ್ಷಣೆ ಮತ್ತು ಯೋಗಕ್ಷೇಮದ ಜವಾಬ್ದಾರಿ ಹೊರಿಸುವುದನ್ನು ಕಾಣುತ್ತೇವೆ. ಅಂದರೆ ಪುಷ್ಪರಾಣಿ ತನ್ನ ತಂದೆಯ ಯೋಗ ಕ್ಷೇಮವನ್ನು ಮರಗಿಡ, ಪ್ರಾಣಿಪಕ್ಷಿಗಳಿಗೆ ವಹಿಸಿಕೊಡುತ್ತಾಳೆ. ಮತ್ತು ಶಕುಂತಳೆ ಗಿಡಬಳ್ಳಿ, ಪ್ರಾಣಿ ಪಕ್ಷಿಗಳ ಯೋಗ ಕ್ಷೇಮವನ್ನು ತಂದೆ ಮತ್ತು ಸಖಿಯರಿಗೆ ವಹಿಸಿಕೊಡುತ್ತಾಳೆ. ಹಾಗಾಗಿ ಈ ಎರಡು ನಾಟಕದ ಎರಡು ಸಂದರ್ಭಗಳಲ್ಲೂ ಸಮಾಜ ಪರಿಸರದ, ಹಾಗೂ ಪ್ರಕೃತಿ ಪರಿಸರಗಳ ಸಂವಾದ ಸಂಬಂಧದ ಬೆಸುಗೆಯನ್ನು ಕಾಣುತ್ತೇವೆ.

ಮುಂದಿನ ದೃಶ್ಯದಲ್ಲಿ ಮಹಾರಾಣಿಯ ಹಿಂಸಾ ಸ್ವಭಾವವನ್ನು ಸೂತ್ರಧಾರ ಹೀಗೆ ಕಟ್ಟುತ್ತಾನೆ.
ಸೂತ್ರಧಾರಃ

"ಕಾಡಿನ ಥರಾವರಿ ಹಕ್ಕಿ ಪಕ್ಷಿಗಳನ್ನು ಹಿಡಿಸಿ ಅವುಗಳನ್ನು ಕೆಳಗಡೆಯಿಂದ ಹಾರಿ ಬಿಟ್ಟು ಅರಮನೆ ಮ್ಯಾಲಿಂದ ಗಿಡುಗನ್ನು ಬಿಡೋದು-ಗಿಡುಗ ಪುಟ್ಟ ಪುಟ್ಟ ಹಕ್ಕಿಗಳ ಮ್ಯಾಲೆ ಎರಗಿ, ಕೊಕ್ಕಿನಿಂದ ಕುಕ್ಕಿಸೊಕ್ಕಿನ ಬೇಟೆ ಆಡುತ್ತಿದ್ದರೆ ಮಹಾರಾಣಿ ಹಾ ಅಂತ ಆನಂದ ಪಡೆಯುತ್ತಿದ್ದಳು. ಕಂದಾ ನಿನ್ನ ಹಕ್ಕಿ ಬಿಟ್ಟೆಯಾ? ನನ್ನ ಗಿಡುಗ ರೆಡಿ"."58"

ಇದು ಮಹಾರಾಣಿಯ ಸ್ವಭಾವ. ಈ ರಾಣಿಗೆ ಗುಣವಂತ ಒಂದು ಗಿಳಿಮರಿ ತಂದು " ಇದು ಸಾಮಾನ್ಯ ಹಸಿರು ಗಿಳಿಯಲ್ಲ. ಪಂಚರಂಗಿ ಗಿಳಿ". ಎಂದು ಕೊಡುವನು ಇದಕ್ಕೆ ಮಹಾರಾಣಿಯ ಆಲೋಚನೆ ಹೀಗಿದೆ.

ಮಹಾರಾಣಿಃ " ಇದರ ಜೊತೆ ಇದೇ ವಯಸ್ಸಿನ ಒಂದು ಗಿಡುಗ ಸಿಕ್ಕಿದ್ದರೆ ಚೆನ್ನಾಗಿತ್ತು. ಕೆಳಕ್ಕೆ ಬಣ್ಣದ ಚಿಟ್ಟೆಯಂತೆ ಇದು ಹಾರಬೇಕು. ಮೇಲಿಂದ ಕೆಳಕ್ಕೆ ಇದರ ಮೇಲಕ್ಕೆ ಗಿಡುಗ ಎಗರಿ ಬೇಟೆಯಾಡುತ್ತಿದ್ದರೆ ನೋಡುವುದಕ್ಕೆ ಎಷ್ಟು ಚನ್ನಾಗಿರುತ್ತದೆ"!."59"

ಈ ರಾಣಿ ಪ್ರಕೃತಿಯ ತಿಳುವಳಿಕೆ ಇಲ್ಲದೆ, ಸಾವು ನೋವಿನ ಅರಿವಿಲ್ಲದೆ ಗಿಡುಗನ ಬೇಟೆಯ ಹಿಂಸಾ ಕೃತ್ಯಗಳಿಂದ ಆನಂದ ಪಡುತ್ತಾಳೆ. ಇವಳು ಹೆಣ್ಣಾದರೂ ಸಂತಾನವಿಲ್ಲದೆ, ಸೃಷ್ಟಿಯ ಕ್ರಿಯೆಯಿಲ್ಲದೆ ಬಂಜೆಯಾಗಿದ್ದಾಳೆ. ಇವಳಿಗೆ ಗಂಡಾದರೂ ರಾಜನಲ್ಲಿರುವ ಪ್ರೀತಿ, ಸೌಹಾರ್ದ, ಕಾಳಜಿ, ಕನಿಕರ, ಮಾತೃಸಂಹಿತೆಯಂತಹ ಮಾನವೀಯ ಗುಣಗಳಿಲ್ಲ. ಕ್ರೂರ ಗುಣಗಳಿಂದ ಅಮಾನವೀಯತೆಯ ತುತ್ತ ತುದಿಗೇರಿದ್ದಾಳೆ.

ಮಹಾರಾಣಿ ಮತ್ತು ಪುಷ್ಪರಾಣಿ ಪಾತ್ರಗಳು ತಮ್ಮತಮ್ಮ ಗುಣ ಸ್ವಭಾವಗಳಲ್ಲೇ ಗಿಡುಗನನ್ನು ಹಾಗೂ 'ಗಿಳಿ'ಯನ್ನು ಪ್ರತಿನಿಧಿಸುವ ಪಾತ್ರಗಳಾಗಿವೆ. ಮುಂದೆ 'ಮಹಾರಾಣಿಯ ಸಂಚಿಗೆ ಸಿಕ್ಕಿ ಪುಷ್ಪರಾಣಿ ಬಲಿಯಾಗುವ ಕ್ರಿಯೆಗೆ ಈ ಗಿಳಿ ಗಿಡುಗನ ಬೇಟೆಯಾಟ ಸಾಂಕೇತಿಕವಾಗಿದೆ. ಹಾಗೂ ಮುಂದಿನ ಕ್ರಿಯೆಗೆ ಪೀಠಿಕೆ ಹಾಕಿದಂತಿದೆ.

ಮುಂದೆ ಪುಷ್ಪರಾಣಿ, ಗಿಳಿ ಕೂಗಿನ ಸೂಚನೆಯಂತೆ, ರಾಜನಿಗೆ ನೀವು ಯುವರಾಜನ ತಂದೆಯಾತ್ತೀರಂತೆ ಎನ್ನುತ್ತಾಳೆ. ಕದ್ದು ಕೇಳಿದ ಮಹಾರಾಣಿಗೆ ಸಿಟ್ಟು, ಕೋಪ ಮತ್ತು ಹೊಟ್ಟೆಕಿಚ್ಚು ಭುಗಿಲೇಳುತ್ತದೆ. ಇದನ್ನು ಸೂತ್ರಧಾರ ಹೀಗೆ ವಿವರಿಸುತ್ತಾನೆ.

ಸೂತ್ರಧಾರಃ "ಅದಾಗಲೇ ದೊಡ್ಡ ಪ್ರಾಣಿಯಾಗಿ ಬೆಳೆದು ಬೇಟೆಗೆ ಸಿದ್ದವಾಗಿದೆ. ಯಾರ್‍ಯಾರ ರಕ್ತ ಹೀರಲಿದೆಯೋ.." "59"

ಇಲ್ಲಿಯವರೆಗೆ ರಾಣಿ ಪ್ರಾಣಿಗಳನ್ನು ಬಿಟ್ಟು ಆನಂದ ಪಡುತ್ತಿದ್ದಳು. ಈಗ ಸ್ವತಃ ತಾನೆ ಬೇಟೆಗೆ ಸಿದ್ದವಾದ 'ದೊಡ್ಡ ಪ್ರಾಣಿ' ಯಾಗಿದ್ದಾಳೆ. ಇವಳು ಸಿಟ್ಟು, ಕೋಪ, ಹೊಟ್ಟೆಕಿಚ್ಚಿನ ಸ್ವಭಾವದಿಂದ, ಮನುಷ್ಯತನವನ್ನು ಕಳೆದುಕೊಂಡು ಮೃಗವಾಗಿದ್ದಾಳೆ. ಈ ಮೃಗ "ಯಾರ್‍ಯಾರ ರಕ್ತ ಹೀರಲಿದೆಯೋ" ಎನ್ನುವಲ್ಲಿ ಪುಷ್ಪರಾಣಿ ಮತ್ತು ಅವಳ ಪರಿವಾರದವರನ್ನೆಲ್ಲ ಬಲಿತೆಗೆದುಕೊಳ್ಳುವುದರ ಸೂಚನೆ ಇದೆ.

ಹೀಗಾಗಿ ಮಹಾರಾಣಿ ಮಹಾರಾಜರನ್ನು ಯುದ್ಧಕ್ಕೆ ಕಳುಹಿಸುವ ಸಂಚು ಮಾಡುತ್ತಾಳೆ. ಈ ಯುದ್ಧಕ್ಕೆ ಹೋಗುವ ರಾಜ, ಗರ್ಭವತಿ, ಪುಷ್ಪರಾಣಿಯನ್ನು ಮಹಾರಾಣಿಗೆ ಒಪ್ಪಿಸುತ್ತಾನೆ. ಇದೆ ಸಮಯ ಕಾಯುತ್ತಿದ್ದ ಮಹಾರಾಣಿ ಮನರಂಜನೆಗಾಗಿ 'ತಂಗಿ ನೀನು ಬಯಸಿದಾಗ ಮರವಾಗುತ್ತೀಯಂತೆ, ಹೂ ಬಿಡುತ್ತೀಯಂತೆ ಆ ಆಟವನ್ನಾದರೂ ನಮಗೆ ತೋರಿಸು ಎಂದು ಕರೆದೊಯ್ಯುತ್ತಾಳೆ.

ಇವಳ ಸಂಚನ್ನರಿಯದ ಕಾಡಿನ ಮುಗ್ಧೆ ಪುಷ್ಪರಾಣಿ; ತನ್ನ ಅಕ್ಕನಿಗೆ ತನ್ನ ಆಟದ ನಿಯಮಗಳನ್ನು ಹೇಳಿಕೊಡುತ್ತಾಳೆ. ಆದರೆ ಮಹಾರಾಣಿ ಗರ್ಭವತಿ ಪುಷ್ಪರಾಣಿಯನ್ನು ವಂಚಿಸಿ ಮರವಾಗಿಸುತ್ತಾಳೆ. ಆ ಮರಕಡಿಯಲು ಮರಕಟುಕರಿಗೆ ಹೇಳಿ ತನ್ನ ಸೇಡು ತೀರಿಸಿಕೊಳ್ಳುತ್ತಾಳೆ. ಕಡಿಯ ಬಂದ ಮರಕಟುಕರನ್ನು ಪುಷ್ಪರಾಣಿಯ ಒಡನಾಡಿ ಮಿತ್ರರಾದ ಹಕ್ಕಿ ಪಕ್ಷಿ, ಪ್ರಾಣಿಗಳು ಹಿಂಸಿ ಓಡಿಸಿದ್ದನ್ನು ಮರ ಕಟುಕರು ಹೀಗೆ ಹೇಳುತ್ತಾರೆ.

ಮರಕಟುಕ ೨ಃ ಮಹಾರಾಣಿ ಕಾಪಾಡಬೇಕು. ನೀವು ಹೇಳಿದ ಮರ ಕಡಿಯಲಿಕ್ಕೆ ಹೋದೊಡನೆ ಸಾವಿರಾರು ಕ್ರೂರ ಹಕ್ಕಿಗಳು ಬಂದು ನಮ್ಮ ನೆತ್ತಿಯನ್ನು ಕುಕ್ಕುತ್ತಿವೆ. ಮ್ಯಾಲಕ್ಕೆ ಏರಿ ವಿಚಿತ್ರ ಶಬ್ಧ ಮಾಡುತ್ತ ನಮ್ಮನ್ನು ಸಿಕ್ಕ ಸಿಕ್ಕಲ್ಲಿ ಗಾಯ ಮಾಡುತ್ತಿವೆ.

ಮರಕಟುಕ ೧ಃ ಮರದ ಕಾಡಿನ ಕ್ರೂರ ಪ್ರಾಣಿಗಳೆಲ್ಲ ಕೂಡಿ, ಅದರ ಸಮೀಪಕ್ಕೆ ನಾವು ಬರದ ಹಾಗೆ ಹೆದರಿಸುತ್ತಿವೆ. ಓಡಿ ಆಸರೆಯ ಮರೆಗೆ ನಿಂತರೆ ದೂರದಲ್ಲಿ ನಿಂತು ಎರಗುವುದಕ್ಕೆ ಹೊಂಚುತ್ತಿವೆ. ಮರ ಕಡಿಯುವುದಿರಲಿ ಅರಮನೆಗೆ ಓಡಿ ಬರುವುದೇ ಕಷ್ಟಕರವಾಯಿತು. ನೀವೇ ಕಾಪಾಡಬೇಕು". "60"

ಇಲ್ಲಿ ನಿಸರ್ಗದ ಜೀವಿಗಳಿಗೆ ಮಾನವ ಸಂವೇದನೆಯ ಕಾಣುತ್ತೇವೆ. ಇದು ಜೀವಿ ಜೀವಿಗಳ ನಡುವೆ ಇರುವ ಮಾನವ ಸೌಹಾರ್ದ ಗುಣಗಳು. ಇದರಿಂದ ಪ್ರಕೃತಿಯೂ ಕೂಡ ಪ್ರೀತಿಸುವವರನ್ನು ಪ್ರೀತಿಸಿ ರಕ್ಷಿಸುತ್ತದೆ. ಪ್ರೀತಿ ಇಲ್ಲದ ದುಷ್ಟರನ್ನು ಶಿಕ್ಷಿಸುತ್ತದೆ ಎಂಬುದಕ್ಕೆ ಸಾಕ್ಷಾಧಾರವಾಗಿದೆ. ಮನುಷ್ಯ [ಪುಷ್ಪರಾಣಿ] ನಿಗೆ ಪ್ರಕೃತಿ ತಿಳುವಳಿಕೆ, ಪ್ರಕೃತಿ [ಗಿಡ-ಮರ, ಪ್ರಾಣಿ-ಪಕ್ಷಿ] ಗೆ ಮನುಷ್ಯ ತಿಳುವಳಿಕೆ ಇರುವುದನ್ನು ಇಲ್ಲಿ ಕಾಣುತ್ತೇವೆ.

ನಂತರ ಸೂತ್ರಧಾರ ಮತ್ತು ಮೇಳಕ್ಕೆ ಒಂದು ಗಿಳಿಮರಿ ಬಂದು "ಪುಷ್ಪರಾಣಿ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ." ಎಂದು ಹೇಳುತ್ತದೆ. ಆಗ ಮೇಳ ಮತ್ತು ಸೂತ್ರಧಾರರು ಮಹಾರಾಣಿಗೆ ಕನಸಿನ ಮೂಲಕ ಗಿಳಿ 'ಅಮ್ಮ' ಎಂದು ಕರೆಯುವಂತೆ ಮಾಡುತ್ತಾರೆ. ಗಿಳಿಯ ಈ ನುಡಿಗೆ ಮುದುಡಿದ ಅವಳ ಮನ ಅರಳಿ ಪ್ರಕೃತಿಯ ತಿಳುವಳಿಕೆ ಬರುತ್ತದೆ; ಈ ಮಹಾರಾಣಿಯನ್ನು ಕನಸಿನ ಸುಪ್ತ ಪ್ರಜ್ಞೆ ತಿಳಿಗೊಳಿಸುವುದು ಹೀಗೆಃ

ಗಿಳಿ ಃ " 'ಅಮ್ಮಾ'
ಮೇಳಃ ಅಮ್ಮಾ ತಾಯಿ ಹಡೆದಮ್ಮ
ಮಕ್ಕಳು ನಮ್ಮ ಪೊರೆಯಮ್ಮ
ಮಹಾರಾಣಿಃ ಗಿಳಿಮರಿಗಳ ನುಡಿಗೆ ನನ್ನ ಹೃದಯದ ಮೊಗ್ಗರಳಿ ಹೂವಾದ ಅನುಭವವಾಗುತ್ತಿದೆ." "61"

ಗಿಳಿಮರಿಗಳ ಹಸಿರಾದ ಹಾಡಿನಲ್ಲಿ ನಾನು ಮುಳುಗಿ ಹೋಗುತ್ತಿದ್ದೇನೆಂದು ಅನ್ನಿಸುತ್ತದೆ".

ಈ ಮಾತಿನಿಂದ ಮಹಾರಾಣಿಯ ಬದಲಾವಣೆಯು ಸುಪ್ತ ಪ್ರಜ್ಞೆಯಿಂದ ಬಂದ ತಿಳುವಳಿಕೆಯಿಂದಾಗಿದೆ. "ವಾಸ್ತವದಲ್ಲಿ ಕಾಣಲಾಗದ್ದನ್ನು, ಅನುಭವಿಸಲಾರದ್ದನ್ನು ಕನಸ್ಸಿನಲ್ಲಿ ಕಂಡು ಅನುಭವಿಸಿ ತೀರಿಸಿಕೊಳ್ಳುತ್ತಾರೆ. "ಎಂಬುದಕ್ಕೆ ಇದು ನಿದರ್ಶನವಾಗಿದೆ. ರಾಣಿಗೆ ವಾಸ್ತವದಲ್ಲಿ ಮಕ್ಕಳು ಪಡೆಯುವ ಫಲವಂತಿಕೆಯಿಲ್ಲ. ಆದರೆ ಇವಳ ಹಂಬಲ ಕನಸಿನಲ್ಲಿ ಗಿಳಿ 'ಅಮ್ಮಾ' ಎಂದು ಕರೆಯುವುದರ ಮೂಲಕ ಫಲಿಸಿದೆ. ಇಲ್ಲೆಲ್ಲ ಮಾತೃ ಪ್ರೇಮ ವ್ಯಕ್ತವಾಗಿದೆ. ಮೊದಲ ದೃಶ್ಯದಲ್ಲಿ ಮೇಳ ಹೇಳುವ ನಾಡಿಗಂಟಿ ಕಾಡಿದೆ ತಾಯಿ ಮಕ್ಕಳಿದ್ದ ಹಾಗೆ" ಎಂಬ ಮಾತು ಕಾಡಿನ ಪ್ರತಿನಿಧಿ ಪುಷ್ಪರಾಣಿಯ ಮಗು, ನಾಡಿನ ಮಹಾರಾಣಿಯನ್ನು 'ಅಮ್ಮಾ' ಎಂದು ಕರೆಯುವುದರ ಮೂಲಕ ಇಲ್ಲಿ ಜೀವ ಪಡೆದು ಸತ್ಯಶೀಲವಾಗಿದೆ. ಈ 'ಅಮ್ಮಾ' ಎಂಬ ಶಬ್ದದಲ್ಲೆ ಲೀನವಾದ ಮಹಾರಾಣಿ ಈ 'ಅಮ್ಮಾ' ಶಬ್ದದಿಂದ ಪ್ರಜ್ಞಾವಂತ ತಾಯಿಯಾಗುತ್ತಾಳೆ. ಈ ಪ್ರಜ್ಞೆಯಿಂದಾಡುವ ಮಹಾರಾಣಿಯ ಮಾತುಗಳಿವುಃ

ಮಹಾರಾಣಿಃ "ಪಕ್ಷಿಗಳೇ, ನನ್ನ ಹೃದಯದಲ್ಲಿ ಕತ್ತಲು ತುಂಬಿ ಏನು ಮಾಡುತ್ತಿದ್ದೇನೆಂದು ಅರಿಯದೆ ಪುಷ್ಪರಾಣಿಯನ್ನು ಮರವಾಗಿಸಿದ್ದೇನೆ. ಕೈ ಮುಗಿದು ಕೇಳಿಕೊಳ್ಳುತ್ತೇನೆ. ಮರವಾಗಿರುವ ನನ್ನ ತಂಗಿಯನ್ನು ಪುನಃ ಮನುಷ್ಯಳಾಗಿ ಪಡೆಯುವ ಉಪಾಯವನ್ನು ನೀವಾದರೂ ಹೇಳಿಕೊಡಿ"."62"

ಎನ್ನುವಲ್ಲಿ ಪಶ್ಚಾತ್ತಾಪದಿಂದ ಬಂದ ಮಾನವೀಯ ಪ್ರಜ್ಞೆಯಿದೆ. ಇದು ಮಹಾರಾಣಿಯಲ್ಲಿ ನಿಸರ್ಗದ ಹಾಗೂ ತಾಯ್ತನದ ಸಂವೇದನೆಯ ಬೀಜವನ್ನು ಬಿತ್ತುತ್ತಿದೆ.

ನಾಟಕದ ಕೊನೆಗೆ ರಾಜ ಯುದ್ಧಕ್ಕೆ ಹೋಗಿ ಬರುವಾಗ ಮೇಳ, ಮತ್ತು ಹಕ್ಕಿ ಪಕ್ಷಿಗಳಿಂದ ಪುಷ್ಪರಾಣಿಯ ದುರಂತ ಸ್ಥಿತಿಯನ್ನು ಕೇಳುತ್ತಾನೆ. ಆತಂಕದಿಂದ ರಾಣಿಯ ರಕ್ಷಣೆಗೆ ಹೊರಟ ಅವನ ಪಾತ್ರ ಮೊದಲ ದೃಶ್ಯದಲ್ಲೆ ಮೇಳಃ 'ರಾಣಿಗೂ ರಾಜ' ಎಂದಿದ್ದ ಮಾತಿನ ಸಾರ್ಥಕತೆ ಫಲಿಸುತ್ತದೆ. ರಾಜ ಮಹಾರಾಣಿಯ ಕೈಯಿಂದ ನಾಲ್ಕನೆ ಕಲ್ಲನ್ನು ಮರವಾಗಿದ್ದ ಪುಷ್ಪರಾಣಿಗೆ ಎಸೆಸಿದಾಗ ಪುಷ್ಪರಾಣಿ ಪ್ರತ್ಯಕ್ಷವಾಗುತ್ತಾಳೆ. ರಾಜ ರಾಣಿಯರ ಮಂಗಳಕರ ವಾತಾವರಣದ ಸಂಭಾಷಣೆ ಹೀಗಿದೆಃ

ಪುಷ್ಪರಾಣಿ ಃ ಅಕ್ಕಾ ಪ್ರಭು ಇವನು ಮ್ಮ ಕಂದ
ಮಹಾರಾಜಃ ಇದಕ್ಕೆಲ್ಲಾ ಕಾರಣಳಾದ ಮಹಾರಾಣಿಗೆ ಶಿಕ್ಷೆಯಾಗಲೇಬೇಕು.
ಮಹಾರಾಣಿಃ ಹೌದು ಪ್ರಭು.
ಮಗು ಃ 'ಅಮ್ಮ'
ಸೂತ್ರಧಾರಃ ಪ್ರಭು, ಇವನು ಮಹಾರಾಣಿಯ ಮಗ. ಯಾಕೆಂದರೆ ಆಕೆಗೆ ಇವನು ಪ್ರಪ್ರಥಮವಾಗಿ ಕನಸಿನಲ್ಲಿ 'ಅಮ್ಮಾ' ಅಂದದ್ದು. ತಾಯಿ ಮಕ್ಕಳನ್ನು ಆಗಲಿಸಬಾರದು ಪ್ರಭು.
ಪುಷ್ಪರಾಣಿ ಃ ಹೌದು ಪ್ರಭು ತಾಯಿಗೆ ಮಗು. ನನಗೆ ಅಕ್ಕ ಮತ್ತು ನೀವು ಸಿಕ್ಕ ಸಂದರ್ಭದಲ್ಲಿ ದಂಡ, ಶಿಕ್ಷೆ ಃ ಯಾಕೆ ಬೇಕು?.
ಮಹಾರಾಣಿಃ ನನ್ನನ್ನು ಧನ್ಯಳಾಗಿಸಿದೆ ತಂಗಿ. "63"

ಈ ಮಾತುಗಳಲ್ಲಿ ಸೂತ್ರಧಾರನ, ಮತ್ತು ಪುಷ್ಪರಾಣಿಯ ಮಾತುಗಳು ಅರ್ಥಪೂರ್ಣವಾಗಿವೆ. ಇವು ಕಾಡು ಮತ್ತು ನಾಡನ್ನು, ನಾಡಿನ ಜನರನ್ನು 'ತಾಯಿ ಮಕ್ಕಳ ಸಂಬಂಧ'ದಲ್ಲಿ ಬೆಸೆಯುತ್ತವೆ.

'ಅಮ್ಮಾ' ಎಂಬ ಪದ ನಾಟಕದ ಮಾತೃ ಸಂವೇದನೆಯ ಆಶಯದ ಸಂಕೇತವಾಗಿದೆ. ಇದು ಈ ಪ್ರಕೃತಿ ಪರಿಸರದ ತಿಳುವಳಿಕೆಯ ಪರಿವರ್ತನೆಗೆ ಆಧಾರವಾಗಿದೆ. ಕಾಡು ಮತ್ತು ಕಾಡಿನ ಜನಕ್ಕೆನಾಡು ಮತ್ತು ನಾಡಿನ ಜನರನ್ನು ಕ್ಷಮಿಸುವ ಕ್ಷಮಾಗುಣವಿದೆ. ಇದಕ್ಕೆ ಪುಷ್ಪರಾಣಿ, ಮಹಾರಾಣಿಯ ದುಷ್ಟಗುಣಗಳನ್ನು ' ಮರೆತು ಅವಳನ್ನು ದಂಡ ಶಿಕ್ಷೆಗಳಿಂದ ಮುಕ್ತಿಗೊಳಿಸಿ, ಅಕ್ಕರೆಯ ಅಕ್ಕನನ್ನಾಗಿ ಸ್ವೀಕರಿಸಿರುವುದು ಆಧಾರವಾಗಿದೆ.

ಹಾಗೆಯೇ ರಾಜ "ನಮ್ಮೆಲ್ಲರ ಜೀವ ಕಾಪಾಡಿದ ಪಕ್ಷಿಗಳಿಗೆ ಹ್ಯಾಗೆ ಕೃತಜ್ಞತೆ ಹೇಳುವುದು ದೇವಿ" ಎಂದು ಕೇಳಿದಾಗ ಪುಷ್ಪರಾಣಿ, "ಅವುಗಳ ಪಾಡಿಗೆ ಅವನ್ನು ಬಿಡಿ. ನೀವು ಅರಣ್ಯ ನಾಶ ಮಾಡದಿದ್ದರೆ ನಿಮಗೆ ಅವು ಕೃತಜ್ಞವಾಗಿರುತ್ತವೆ". ಎನ್ನುತ್ತಾಳೆ. ಈ ಮಾತಿನಲ್ಲಿ ಪುಷ್ಪರಾಣಿ ಪ್ರಕೃತಿಯ ಪ್ರತಿನಿಧಿಯಾಗಿ ಈ ಮಾನವ ಸಮಾಜದ ಜನರನ್ನೆ ಕೇಳಿಕೊಂಡಂತೆ ವ್ಯಕ್ತವಾಗಿರುವುದು ತುಂಬ ಮಾರ್ಮಿಕವಾಗಿದೆ.

ಹೀಗೆ ಈ ನಾಟಕದ ತುಂಬ ಹಲವಾರು ಅಂಶಗಳು ಮೇಳೈಸಿ ನಿಂತಿವೆ. ಈ ನಾಟಕದಲ್ಲಿ ಮನಸ್ಸನ್ನು ಸೆರೆಹಿಡಿಯುವಂತಹ ಪಾತ್ರ, ಘಟನೆ, ಸನ್ನಿವೇಶಗಳಿವೆ. ಇಲ್ಲಿ ರಾಜ, ಮಹಾರಾಣಿ, ಪುಷ್ಪರಾಣಿ, ಗಿಳಿಗಿಡುಗ, ಗಿಡಮರ, ಹಕ್ಕಿ ಪಕ್ಷಿಗಳಂತಹ ಪಾತ್ರಗಳಿವೆ. ಮಾಯ ಮಂತ್ರಗಳಂತೆ ಬದಲಾಗುವ ವನ ಸೃಷ್ಟಿಯ ಘಟನೆ, ಗಿಳಿಗಿಡುಗನ ಭೇಟಿಯಾಡಿಸುವಂತಹ ಕೆಲವು ಸನ್ನಿವೇಶ ಇವೆ ಯುದ್ಧಗಳಿವೆ. ಇವೆಲ್ಲ ಮಕ್ಕಳ ಮನದಾಳದಲ್ಲಿ ನೆಲೆ ನಿಲ್ಲುವಂತಹ ಪಾತ್ರ ಘಟನೆ ಸನ್ನಿವೇಶದ ಸೃಷ್ಟಿಗಳಾಗಿವೆ. ಇವು ಮಕ್ಕಳಿಗಷ್ಟೇ ಆಕರ್ಷಣೀಯವಾದ ತಿಳುವಳಿಕೆಯಾಗಿಲ್ಲ ಎಂಬುದರಲ್ಲಿ ಎರಡು ಮಾತಿಲ್ಲ. ಈ ನಾಟಕ ಕಾಡು ನಾಡಿನ ಸಂಬಂಧವನ್ನು; ತಾಯಿ ಮಕ್ಕಳ, ಗಂಡ ಹೆಂಡತಿಯರ ಸಂಬಂಧವಾಗಿ ಬೆಸೆದಿದೆ. ಹಾಗೂ ನಾಟಕ ತುಂಬ ನಾಡು, ಕಾಡುಗಳ ಅನೋನ್ಯ ಭಾವವಿದೆ. ಈ ಮೂರರಲ್ಲಿಯೂ ಹೆಣ್ಣಿನ ತಾಯ್ತನದ ಆಶಯವನ್ನು ಹೊತ್ತು ಅದರ ಮೂಲಕ ಮಕ್ಕಳ ಮತ್ತು ಓದುಗ, ಸಹೃದಯರ ಮನಸ್ಸನ್ನು ಗೆಲ್ಲುವುದರ ಮೂಲಕ ಈ ನಾಟಕದ ಆಶಯ ಯಶಸ್ವಿಯಾಗಿದೆ. ಇದರ ಮೂಲಕ ಜನಕ್ಕೆ ಮಕ್ಕಳಿಗೆ ಪ್ರಕೃತಿಯ, ನಿಸರ್ಗದ ತಿಳುವಳಿಕೆ ಮೂಡಿಸುವಂತಹ ಈ ನಾಟಕ ರಚನೆ ಅಪೂರ್ವವಾದುದಾಗಿದೆ. ಈ ಕೃತಿಯಲ್ಲಿ ಕಾಡು ಮತ್ತು ಕಾಡಿನ ಜನರು, ನಾಡು ಮತ್ತು ನಾಡಿನ ಜನರಿಗೆ ದಾಸರಾಗುವ ಪ್ರವೃತ್ತಿಯನ್ನು ಒಪ್ಪಲಾಗುವುದಿಲ್ಲ. ಆದರೂ ಈ ಕೃತಿ ಪರಿಸರ ಸಂವೇದನೆಯನ್ನು ಮತ್ತು ಅದರ ಮೌಲ್ಯವನ್ನು ಕಾಣುವ, ಕಟ್ಟುವ ಸೃಜನಾತ್ಮಕ ಕ್ರಿಯಾ ರೂಪವಾಗಿದೆ. ಇದು ಮುಗ್ಧ ಮಕ್ಕಳಿಗಷ್ಟೆ ಅಲ್ಲ. ಮನುಷ್ಯ ಸಮಾಜವನ್ನೇ ಆತ್ಮ ಪರಿಶೀಲನೆಗೊಳಪಡಿಸುತ್ತದೆ.

ಊ. ಪ್ರವಾಸ ಕಥನ ಸಾಹಿತ್ಯ

ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಪ್ರವಾಸ ಕಥನ ಕೂಡ ಒಂದು. ಈ ಪ್ರಕಾರ ಕಾವ್ಯ ಕಾದಂಬರಿಯಂತೆ ಸವಿಸ್ತಾರವಾಗಿ ಬೆಳೆಯದಿದ್ದರೂ; ಇಂದು ಸಾಕಷ್ಟು ದೊರೆಯುತ್ತದೆ. ಈ ಸಾಹಿತ್ಯವನ್ನು ಈಗ ನಾವು ಮೂರು ಹಂತದಲ್ಲಿ ಗುರುತಿಸಬಹುದು.

ಮೊದಲ ಹಂತಃ

ಭಾರತೀಯರು ಇಂಗ್ಲೆಂಡ್, ಅಮೇರಿಕ, ಜರ್ಮನಿಯಂತಹ ಯೂರೋಪಿಯನ್ ದೇಶಗಳಿಗೆ ಪ್ರವಾಸ ಕೈಗೊಂಡಿದ್ದು ಯಾಕೆಂದರೆ ನಮ್ಮನ್ನಾಳಿದ ಯೂರೋಪು ನಮ್ಮನ್ನು ಕರಿಯರೆಂದು ಕೀಳಾಗಿ ಕಂಡು ವಸಾಹತು ಸ್ಥಾಪನೆ ಮಾಡಿ; ಆಧುನಿಕತೆಯ ಹೊಸ ಸಂಸ್ಕೃತಿಯನ್ನು ಹುಟ್ಟುಹಾಕಿತು. ಹಾಗಾಗಿ ಭಾರತೀಯರಿಗೆ ಇವರ ನಾಡು, ನುಡಿ, ಸಂಸ್ಕೃತಿ ನೋಡಬೇಕೆಂದು ಅನ್ನಿಸಿ ಯೂರೋಪಿಯನ್ ದೇಶಗಳ ಪ್ರವಾಸ ಮಾಡಿದ್ದು ಈ ಮೊದಲ ಹಂತದ ಪ್ರವಾಸ ಕಥನ. ಇಂತಹ ಪ್ರವಾಸದ ಕೃತಿಗಳೆಂದರೆ ಗೊರೂರು ರಾಮಸ್ವಾಮಿ ಅಯ್ಯಂಗಾರರ "ಅಮೇರಿಕದಲ್ಲಿ ಗೊರೂರು" ಶಿವರಾಮ ಕಾರಂತರ 'ಅಪೂರ್ವ ಪಶ್ಚಿಮ' ಇತ್ಯಾದಿ ಕೃತಿಗಳು.

ಎರಡನೆ ಹಂತಃ

ಈ ಸಾಹಿತ್ಯ ಭಾಷೆ, ಸಂಸ್ಕೃತಿ ಬೆಳವಣಿಗೆಯಾದಂತೆ ನಮ್ಮ ದೇಶದ ಸಂಸ್ಕೃತಿಯನ್ನೆ ನೋಡಿ ಅರಿಯದ ನಮಗೆ; ಬೇರೆ ದೇಶದ ಸಂಸ್ಕೃತಿಗಳು ಯಾಕೆ ಮುಖ್ಯವೆಂದು ತಿಳಿದ ಲೇಖಕರು ನಮ್ಮ ಅಕ್ಕ ಪಕ್ಕ ರಾಜ್ಯಗಳಾದ ಕೇರಳ ತಮಿಳುನಾಡುಗಳಂತಹ ರಾಜ್ಯಗಳ ಪ್ರವಾಸದಿಂದ ನಮ್ಮ ದೇಶ ರಾಜ್ಯಗಳ ಜನ ಭಾಷೆ ಸಂಸ್ಕೃತಿಗಳನ್ನು ಅರಿಯಲು ಒಲವು ತೋರಿಸಿದರು. ಈ ನಿಲುವಿನ ಕೃತಿಗಳೆಂದರೆ ಎಚ್.ಎಸ್. ರಾಘವೇಂದ್ರರಾವ್ ಬರೆದ "ಜನಗಣಮನ" ಫಕೀರ ಮಹಮದ್ ಕಟ್ಪಾಡಿಯವರ "ಕೇರಳದಲ್ಲಿ ಹದಿನೈದು ದಿನಗಳು" ಮತ್ತು ಇತರ ಕೃತಿಗಳು.

ಮೂರನೆ ಹಂತಃ

ಈ ಹಂತದಲ್ಲಿ ನಮ್ಮ ಸಾಹಿತ್ಯ ಲೇಖಕರು "ನಿನ್ನ ಹೊರಗರಿಯುವ ಮುನ್ನ ನಿನ್ನ ಒಳಗರಿ" ಎಂಬ ನಾಣ್ನುಡಿಯ ತಿಳುವಳಿಕೆಗೆ ಬಂದರು. ಇವರು ಯೂರೋಪಿಯನ್ ದೇಶಗಳ ಪ್ರವಾಸಕ್ಕಿಂತ ನಮ್ಮ ಹೊರ ರಾಜ್ಯಗಳ ಪ್ರವಾಸಕ್ಕಿಂತ, ನಮ್ಮ ಕರ್ನಾಟಕದಲ್ಲೆ ನಮ್ಮ ಕನ್ನಡಿಗರ ಜನ, ಭಾಷೆ, ಸಂಸ್ಕೃತಿಯನ್ನು ತಿಳಿಯುವ ಸಲುವಾಗಿ ಪ್ರವಾಸ ಕೈಗೊಂಡಿದ್ದನ್ನು ಕಾಣುತ್ತೇವೆ. ಇಂತಹ ಪ್ರವಾಸ ಅಧ್ಯಯನವೇ ಮಹಬಲೇಶ್ವರ ಕಾಟ್ರಹಳ್ಳಿ ಅವರ "ಬಾ ಗಿಳಿಯೇ ಬಾಗಳಿಗೆ" ಇದು ಒಂದು ಹಳ್ಳಿಯ ಪ್ರವಾಸ ಕಥನ ಪುಸ್ತಕ ಹಿ.ಚಿ. ಬೋರಲಿಗಂಯ್ಯನವರ "ಗಿರಿಜನ ನಾಡಿಗೆ ಪಯಣ" ಇದು ಒಂದು ಪ್ರಾಂತ್ಯದ ಅಧ್ಯಯನವನ್ನೊಳಗೊಂಡ ಬುಡಕಟ್ಟು, ಗಿರಿಜನ ಸಂಸ್ಕೃತಿ ಅಧ್ಯಯನದ ಕೃತಿಯಾಗಿದೆ. ಇವು ಮೂರನೆ ಹಂತದ ಕೃತಿಗಳು.

"ಗಿರಿಜನ ನಾಡಿಗೆ ಪಯಣ" ಕೃತಿಗೆ ಕೆಲವು ದಶಕದ ಪೂರ್ವದಲ್ಲೇ ಬುಡಕಟ್ಟುಗಳನ್ನು ಕುರಿತಾದ ಒಂದು ಕೃತಿ ಬಂತು. ಅದೇ 'ವೆರಿಯರ್ ಎಲ್ವಿನ್' ಬರೆದಂತಹ "The Tribal World". ಈತ ಇಂಗ್ಲೆಂಡಿನ ಒಬ್ಬ ಪಾದ್ರಿ, ಇವನು ಕ್ರಿಶ್ಚಿಯನ್ ಧರ್ಮ ಪ್ರಚಾರಕ್ಕೆಂದು ಭಾರತಕ್ಕೆ ಬಂದವನು ಬುಡಕಟ್ಟು ಜನರ ಅಧ್ಯಯನಕ್ಕೆ ತೊಡಗಿ, ಬುಡಕಟ್ಟು ಹೆಣ್ಣುಮಗಳನ್ನು ಮದುವೆಯಾಗಿ ಅವರೊಟ್ಟಿಗೆ ಬದುಕಿ ಬಾಳಿದವನು ಅವನು ಬರೆದ ಆತ್ಮ ಕಥನವೇ 'The Tribal World' ಈ ಕೃತಿಯನ್ನು ಎಚ್.ಎಲ್.ನಾಗೇಗೌಡರು 'ಗಿರಿಜನ ಪ್ರಪಂಚ' ಎಂಬ ಹೆಸರಲ್ಲಿ ಅನುವಾದಿಸಿದರು. ಇದು ಬುಡಕಟ್ಟು ಜನರ ಸಂಸ್ಕೃತಿಗೆ, ಅವರ ಬದುಕಿಗೆ ಒಂದು ಛಲದ ಬಲ ತುಂಬಿ ಕಾಡಿನ ಶಕ್ತಿಯನ್ನು ಎತ್ತಿಹಿಡಿದ ಕೃತಿ. ಇದು ಬುಡಕಟ್ಟು ಜನರ ಸಜೀವ ಚಿತ್ರಣವನ್ನೊಳಗೊಂಡ ವಿಶಿಷ್ಟ ಕೃತಿಯಾಗಿದೆ.

ಇದೇ ರೀತಿ ಬುಡಕಟ್ಟು ಜನ ಜೀವನವನ್ನೊಳಗೊಂಡ ಕೃತಿಯೇ 'ಗಿರಿಜನ ನಾಡಿಗೆ ಪಯಣ' ಈ ಕೃತಿ 'ಗಿರಿಜನ ಪ್ರಪಂಚ' ವನ್ನುಳಿದು ಇನ್ನಿತರ ಬೇರೆ ಪ್ರವಾಸ ಕಥನಗಳಿಗೆ ಹೋಲಿಸಿದರೆ ವಿಶಿಷ್ಟ ಕೃತಿಯಾಗಿದೆ. ಆದ್ದರಿಂದ ಈ ಪ್ರವಾಸ ಕಥನ ಸಾಹಿತ್ಯ ಚರ್ಚೆಯ ಸಂದರ್ಭದಲ್ಲಿ ಈ "ಗಿರಿಜನ ನಾಡಿಗೆ ಪಯಣ" ದಂತಹ ಕೃತಿಗೆ ಈ ನಿಬಂಧದ ಚರ್ಚೆಯಲ್ಲಿ ಮುಖ್ಯಸ್ಥಾನವಿದೆ.

ಈ ಕೃತಿ ಗಿರಿಜನರ ಮತ್ತು ಅಲ್ಲಿಯ ಹಲವಾರು ಬುಡಕಟ್ಟು ಜನರ ನಡೆ, ನುಡಿ, ಸಂಸ್ಕೃತಿ ಮತ್ತು ಜೀವನ ವಿಧಾನ, ಅವರ ಬದುಕಿನ ಬವಣೆ ಹಾಗೂ ಅವರ ಪರಿಸರದ ತಿಳುವಳಿಕೆಗಳಂತಹ ನಾನಾ ವಿಷಯಗಳನ್ನು ತನ್ನೊಳಗೆ ತುಂಬಿ ಕೊಂಡಿದೆ. ಹಾಗಾಗಿ ಈ ಜನರ ಜೀವನವನ್ನು ಅರಿಯಲು ಈ ಕೃತಿ ಉಪಯುಕ್ತವಾಗಿದೆ.

ಲೇಖಕರು ತಮ್ಮ ಗೆಳೆಯರೊಡಗೂಡಿ ಸಹ್ಯಾದ್ರಿ ಶ್ರೇಣಿಯ ಆಜು ಬಾಜಿನ ಎಲ್ಲ ಗಿರಿಜನರಲ್ಲಿಗೆ ಪಯಣ ಬೆಳಸಿದ್ದಾರೆ. ಇವರು ಸಹ್ಯಾದ್ರಿ ಶ್ರೇಣಿಗಳ ಕಣಿವೆಯೊಳಗಿನ ನಾಗವಳ್ಳಿ, ಹಾಡುವಳ್ಳಿಗಳ ಸುತ್ತ ಮುತ್ತ ದಟ್ಟ ಕಾಡಿನ ಒಡಲೊಳಗಿರುವ ಗೊಂಡ, ಮತ್ತು ದೀವರ ಜನಾಂಗವಲ್ಲದೆ; ಸಾವಿರಾರು ಅಡಿ ಎತ್ತರದ ಪರ್ವತದಲ್ಲಿ ವಾಸವಾಗಿರುವ 'ಕುಣಬಿ' ಜನರನ್ನು ಕೂಡ ಭೇಟಿಯಾಗುತ್ತಾರೆ. ಅಲ್ಲಿ ಈ ಜನರ ಯಜಮಾನ 'ಯಂಕು' ಲೇಖಕರ ಪ್ರಶ್ನೆಗೆ ಉತ್ತರಿಸುತ್ತ ತಾವು ಬಂದು ನೆಲೆ ನಿಂತ ಹಿನ್ನೆಲೆ ಮತ್ತು ಕಾರಣಗಳನ್ನು ಕೊಡುತ್ತಾನೆಃ ಅದನ್ನು ಲೇಖಕರು ಹೀಗೆ ವಿವರಿಸುತ್ತಾರೆ.

> "ಈಗ ಲಿಂಗನಮಕ್ಕಿ ಅಣೆಕಟ್ಟು ಇರುವ ಪ್ರದೇಶದಲ್ಲಿ ಮೊದಲಿಗೆ ಇವರು ಜೀತದಾಳುಗಳಾಗಿಯೇ ಇದ್ದರು ಅಣೆಕಟ್ಟು ಕಟ್ಟಲು ಆರಂಭ ಮಾಡಿದ ತರುವಾಯ ಇವರುಗಳನ್ನು ಎತ್ತಂಗಡಿ ಮಾಡಲಾಯಿತು. ಈಗಾಗಲೇ ಅಲ್ಲಿ ಮಾಲೀಕರಾಗಿದ್ದ ಮೇಲ್ವರ್ಗದವರಿಗೆ ಸರ್ಕಾರ ಯಥಾಪ್ರಕಾರ ಜಮೀನು ಮಂಜೂರು ಮಾಡಿ ಒಂದು ದಾರಿ ತೋರಿಸಿತು. ಆದರೆ ಅಲ್ಲಿ ಜೀತದಾಳುಗಳಾಗಿದ್ದ ಕುಣಬಿಯವರು, ಹಸಲರು ಮುಂತಾದವರಿಗೆ ಯಾವ ಜಮೀನು ಇಲ್ಲ. ವಸತಿಯೂ ಇಲ್ಲ. ಸರಿ ಬಡಪಾಯಿ ಕುಣಬಿಯರ ಒಂದೆರಡು ಪಂಗಡಗಳು ಬದುಕು ಅರಸುತ್ತಾ ಅಲೇದಾಡ ಹತ್ತಿದವು. ಯಾವ ಒಡೆಯನ ಮನೆಗೆ ಹೋದರೂ ಒಂದು ಸೇರಕ್ಕಿ ನಾಲ್ಕಾಣೆ ಬಿಟ್ಟರೆ ಹೆಚ್ಚಿನದೇನೂ ಇಲ್ಲ. ಗುಡ್ಡ ಹತ್ತಿ ಗುಡ್ಡ ಇಳಿದು ಸ್ವಂತ ಜಮೀನಿಗಾಗಿ ಪರದಾಡ ಹತ್ತಿದರು. ಎಲ್ಲಿಯೂ ಸಿಗಲಿಲ್ಲ. ಕೊನೆಗೆ ತಮ್ಮ ಕಣ್ಮುಂದೆ ಕಡಿದಾಗಿ ನಿಂತ ತನ್ನ ನೀಳ ಶರೀರವನ್ನೆ ಹಸ್ತವಾಗಿ ಚಾಚಿದ ಮೇಗಾನೆ ಪರ್ವತ ಇವರಿಗೆ ಆಶ್ರಯ ನೀಡಿತು. ಕುಣಬಿಯರು ಮೇಗಾನೆಯ ಸುಂದರ ನೆಲದಲ್ಲಿ ನೆಲೆನಿಂತು ಸ್ವತಂತ್ರ ಜೀವಿಗಳಾದರು". "64"

ಈ ಯಜಮಾನ 'ಯಂಕು' ವಿನ ಮಾತಿನ ಹಿನ್ನೆಲೆಯಲ್ಲಿ ಕಥೆ, ನಾಟಕಗಳ ಚರ್ಚೆಯಲ್ಲಿ ಬುಡಕಟ್ಟು ಕೆಳವರ್ಗದ ಜನರ ಸ್ಥಿತಿಗತಿ ತಿಳುವಳಿಕೆಯು ಸೂಕ್ಷ್ಮವಾಗಿ ಬಂದಿದೆ. ಲಿಂಗನಮಕ್ಕಿ ಅಣೆಕಟ್ಟಿನಿಂದಾಗಿ ಹೇಗೋ ಜೀತದಾಳಾಗಿ ಜೀವನ ಸಾಗಿಸುತ್ತಿದ್ದ 'ಕುಣಬಿ'ಗಳು ಬೀದಿ ಪಾಲಾದರು. ಇಂತಹ ಎಷ್ಟೋ ಅಣೆಕಟ್ಟು ಕಾರ್ಖಾನೆಗಳು ಬಂದು ಎಷ್ಟೋ ಲಕ್ಷಾಂತರ ಕೆಳವರ್ಗ, ಬುಡಕಟ್ಟು ಜನ ನಿರಾಶ್ರಿತರಾಗಿದ್ದಾರೆ. ಈ ಜನರ ಮೇಲೆ ಸರ್ಕಾರ ಸಮಾಜಕ್ಕೆ ಕರುಳು. ಕಣ್ಣಿಲ್ಲದಂತಾದರೆ; ಅದೇ ಅಣೆಕಟ್ಟಿನಿಂದ ಮುಳುಗಡೆಯಾದ ಮಾಲಿಕ, ಮೇಲ್ವರ್ಗದವರಿಗೆ ಸರ್ಕಾರ ಜಮೀನು ಮಂಜೂರು ಮಾಡಿ ದಾರಿ ತೋರಿಸಿತು. "ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ" ದಂತಹ ಸರ್ಕಾರದ ನೀತಿ ಸಂಪತ್ತಿನ ಅಸಮಾನ ಹಂಚಿಕೆಗೆ ಇದು ಸಾಕ್ಷಿಯಾಗಿದೆ. "ಜೀತದಾಳು ಗಳಾಗಿದ್ದ ಕುಣಬಿಯವರು, ಹಸಲರು, ಮುಂತಾದವರಿಗೆ ಯಾವ ಜಮೀನು ಇಲ್ಲ. ವಸತಿಯೂ ಇಲ್ಲ", ಯಾವ ಒಡೆಯನ ಮನೆಗೆ ಹೋದರೂ ಒಂದು ಸೇರಕ್ಕಿ ನಾಲ್ಕಾಣೆ ಬಿಟ್ಟರೆ ಹೆಚ್ಚಿನದೇನೂ ಇಲ್ಲ" ಈ ಕೃತಿಯ ಮುಂದಿನ ಲೇಖನಗಳಲ್ಲಿ ಈ ಬುಡಕಟ್ಟುಗಳ ದುರ್ಬಲ ಆರ್ಥಿಕ ಸ್ಥಿತಿಯನ್ನು ಕಾಣುತ್ತೇವೆ. ಹಾಗೆಯೇ ಕಂಗಾಲಾಗಿ ಗುಡ್ಡ ಗುಡ್ಡ ಹತ್ತುತ್ತಿದ್ದ ಈ ಜನರಿಗೆ "ತಮ್ಮ ಕಣ್ಮುಂದೆ ಕಡಿದಾಗಿ ನಿಂತು ತನ್ನ ನೀಳ ಶರೀರವನ್ನೆ ಹಸ್ತವಾಗಿ ಚಾಚಿದ ಮೇಗಾನೆ ಪರ್ವತ ಇವರಿಗೆ ಆಶ್ರಯ ನೀಡಿತು"."65" ಎಂಬ ಮಾತಿನಿಂದ ಸರ್ಕಾರ ಸಮಾಜಗಳಿಗಿಲ್ಲದ ಮಾನವೀಯ ಹೃದಯ ನಿಸರ್ಗತಾಯಿ

ಯಲ್ಲಿರುವುದನ್ನು ಕಾಣುತ್ತೇವೆ. ಈ ಮಾತೃವಾತ್ಸಲ್ಯದ ನೆಲದಲ್ಲಿ ಈ ಜನ ನೆಲೆ ನಿಂತು ಸ್ವತಂತ್ರ ಜೀವಿಗಳಾಗಿದ್ದಾರೆ ಎನ್ನುವ ಮಾತು ಕುಣಬಿ ಜನಕ್ಕಷ್ಟೆ ಅಲ್ಲ; ಈ ದೇಶದ ಕೆಳವರ್ಗದ ಎಲ್ಲ ಬುಡಕಟ್ಟು ಗಿರಿಜನರ ಸ್ಥಿತಿ ಇದಾಗಿದೆ.

ಇಂತಹ ಬುಡಕಟ್ಟು ಗಿರಿಜನರ ಪರಿಸರವೇ ಗಿರಿ ಕಾಡುಗಳು. ಈ ಪರಿಸರ ಈ ಜನರ ಮೈಯುಂಡು ನಿಂತಿದೆ. ಈ ಮಾತಿಗೆ ಕುಡುಗಂಜಿ ಹಸಲರ ಹನುಮಂತಪ್ಪ; ಲೇಖಕರ ಒಂದು ಪ್ರಶ್ನೆಗೆ ಪ್ರತಿಕ್ರಿಯಿಸಿ "ನಮ್ ಬಾಳೇ ಇಲ್ಲಿ ಸ್ವಾಮಿ, ದಿನ ಬೆಳಗಾದರೆ ನಾವು ತುಳಿಯೋ ಭೂಮ್ಯೇ ಇದು". ಹಾವು, ಹಲ್ಲಿ, ಹಕ್ಕಿ-ಪಕ್ಷಿ ಬಿಟ್ಟು ಈ ಗಡ್ಡೆಗಳಲ್ಲಿ ಬೇರೆ ಪ್ರಾಣಿಗಳಂತೂ ಇರಲು ಸಾಧ್ಯವಿಲ್ಲ. ಎಂಬ ಮಾತು ಸಾಕ್ಷಿಯಾಗಿದೆ. "ನಮ್ಮ ಬಾಳೇ ಇಲ್ಲ ಸ್ವಾಮಿ" ಎನ್ನುವಲ್ಲಿ ಈ ಜನರ ಮೈ ಮನಸ್ಸೆಲ್ಲ ಆ ಕಾಡಿನ ಪರಿಸರದಲ್ಲಿ ಲೀನವಾಗಿ ಅಲ್ಲಿನ ಪ್ರಾಣಿ ಪಕ್ಷಿ ಸಸ್ಯಗಳೊಡನೆ ಸಹಬಾಳ್ವೆಯ ಜೀವನದ ತಿಳುವಳಿಕೆಯಾಗಿದೆ. ಇಂತಹ ಜನಕ್ಕೆ ಬದುಕಲು ಅನ್ನ ಸಿಗದಿದ್ದಾಗ, ಕುಡುಗಂಜಿಯ ಹಸಲರು ಬೈನೆ ಮರದ ಚಕ್ಕೆಯನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಇಂತಹ ಪರಿಸರದ ಸಿರಿಯಲ್ಲೆ ಶುದ್ಧ ಜೀವನವನ್ನು ಕಂಡುಕೊಂಡ ಹಳೆಯ ತಲೆಮಾರಿನ ಜನ ಈ ಪರಿಸರವನ್ನು ಇಂದು ಬಿಡಲೊಪ್ಪುತ್ತಿಲ್ಲ. ಆದರೆ ಇಂದಿನ ಆಧುನಿಕ ಪರಿಸರ. ಈ ಗಿರಿ ಕಾಡುಗಳಲ್ಲಿ ಹುಟ್ಟುವ ಮಕ್ಕಳ ಮನಸೆಳೆದು ಈ ಜನರ ನಿಸರ್ಗ ಸಂಬಂಧ ಸಡಿಲವಾಗುತ್ತಿದೆ. ಇದಕ್ಕೆ ಹಸಲರ ದತ್ತಪ್ಪ ಹೆಗ್ಗಡೆಯ ಮಾತೆ ಆಧಾರಃ

"ನನ್ನ ಮಕ್ಕಳೆಲ್ಲರೂ ದ್ವೀಪ ಬಿಟ್ಟು ಬೇರೆಲ್ಲಾದರೂ ಹೊಸ ಜಾಗದಲ್ಲಿ ನೆಲಸೋಣ ಎನ್ನುತ್ತಾರೆ. ಆದರೆ ನನಗೆ ಈ ಸ್ಥಳ ಬಿಡಲು ಮನಸ್ಸೇ ಬರುತ್ತಿಲ್ಲ"."66"

ಸಹ್ಯಾದ್ರಿ ಶ್ರೇಣಿಗಳನ್ನು ಸುತ್ತಿ ಸುತ್ತಿ ' ಮಲೆ ಕುಡಿಯರ'ನ್ನು ಸಂರ್ಕಿಸಿದಾಗ ಆ ಮುಗ್ಧ ಜನರಿಗೆ ಲೇಖಕ ಮತ್ತು ಅವರ ಗೆಳೆಯರು ದೇವಲೋಕದಿಂದ ಬಂದವರಂತಾಗಿದ್ದರು. ಇವರಿಗೆ ಈ ಜನ ನೀಡಿದ ಅಥಿತ್ಯ; ಶ್ರೀಮಂತ ಮನಸ್ಸು ಹೃದಯಗಳ ಸತ್ಕಾರವಾಗಿತ್ತು. ಇಂತಹ ಜನರಲ್ಲಿ ನವನಾಗರೀಕ ಸಮಾಜದಲ್ಲಿ ಕಾಣಸಿಗದ; ನಡೆ, ನುಡಿ, ಸಂಸ್ಕೃತಿ ಪರಿಸರದ ತಿಳುವಳಿಕೆ ಮಾನವೀಯ ಮನಸ್ಸುಗಳು ಇಂದು ಬುಡಕಟ್ಟು ಸಮಾಜದಲ್ಲಿ ಜೀವಂತವಾಗಿ ಉಳಿದಿವೆ. ಈ ಜನರು ಗಿರಿಕಾಡುಗಳಲ್ಲೆ ತಮ್ಮ ಜೀವನ ಮೌಲ್ಯವನ್ನು ಕಂಡುಕೊಂಡು ಅಲ್ಲೆ ಉಳಿದದ್ದರಿಂದ ಇನ್ನು ಈ ಗುಣಗಳು ಉಳಿದಿದೆ ಎನ್ನಬಹುದೇನೋ?

ಇಂತಹ ಕಾಡುಜನರ ಮೇಲೆ, ಕಾಡಿಗೆ ಲಗ್ಗೆ ಹಾಕಿದ ಬಂಡವಾಳ ಶಾಹಿಗಳು ಕಾಡಿನ ಸಂಪತ್ತಿನ ಮೇಲೆ ಅಕ್ರಮಣ ಮಾಡುತ್ತಿದ್ದಾರೆ; ಕಾಡು ಜನರ ಸ್ವತಂತ್ರ ಸಮಾನತೆಯ ಮೂಲಭೂತ ಹಕ್ಕುಗಳ ಮೇಲೂ ನಿರಂಕುಶ ಪ್ರಭುಗಳಾಗಿ ವರ್ತಿಸುತ್ತಿದ್ದಾರೆ. ಇದು ಪ್ರಜಾಪ್ರಭುತ್ವ ಸರ್ಕಾರದ ದುರಂತವಲ್ಲದೆ ಮತ್ತೇನು?

ಯಾಕೆಂದರೆ ಲೇಖಕ ಮತ್ತು ಗೆಳೆಯರು; ಹಸಲರು, ಮುಕುಡಿಯರ ಸಂಸ್ಕೃತಿಯನ್ನು ಚಿತ್ರಿಕರಿಸಿಕೊಂಡು ಅವರಿಂದ ಬೀಳ್ಕೊಂಡು ಹೋಗುವಾಗ ರಸ್ತೆಯ ಅಕ್ಕಪಕ್ಕ ದಿಮ್ಮಿ ತುಂಬಿಕೊಂಡು ಲಾರಿಗಳು ದಾರಿಗೆ ಅಡ್ಡ ನಿಂತಿದ್ದವು. ಈ ಲಾರಿ ವಾರಸುದಾರರನ್ನು ಪ್ರಶ್ನಿಸಿದಾಗ ಅವರುಃ "ಮಂಗಳೂರಿನಲ್ಲಿರುವ ನಮ್ಮ ಧಣಿಯಿಂದ ಅಪ್ಪಣೆ ಪಡೆಯದೆ ನೀವು ಹೇಗೆ ಈ ಪ್ರದೇಶ ಪ್ರವೇಶಿಸಿದಿರಿ""67" ಎಂದು ಮರು ಪ್ರಶ್ನೆಯೊಡ್ಡುತ್ತಾರೆ. ಅದಕ್ಕೆ "ಹೊಳೆ ನೀರಿಗೆ ದೋಣೆನಾಯಕನ ಅಪ್ಪಣೆ" ಎಂಬಂತೆ ಸಾವಿರಾರು ವರ್ಷಗಳಿಂದ ಆ ಮಣ್ಣಿನಲ್ಲಿ ಬದುಕುತ್ತಿರುವ ಮಲೆಕುಡಿಯರನ್ನು ನೋಡಲು ಕೇರಳದ ಬಂಡವಾಳ ಶಾಹಿಯ ಅಪ್ಪಣೆ ಪಡೆಯಬೇಕಂತೆ? ಇದು ನಮ್ಮ ಪ್ರಜಾಪ್ರಭುತ್ವ!"68" ಎಂದು ಲೇಖಕರು ವಿಷಾದಿಸುತ್ತಾರೆ. ಎಲ್ಲಿಯವರೋ ಬಂದು ಇಲ್ಲಿಯ ಪ್ರದೇಶ, ಜನರ ಮೇಲೆ ಅಧಿಕಾರ, ಹಿಡಿತ ಸಾಧಿಸಿ ಶೋಷಣೆಗೊಳಪಡಿಸುವುದು ಸಹಿಸಲಾಸಧ್ಯ ಸ್ಥಿತಿ. ಇದು ನಮ್ಮ ಪ್ರಜಾಪ್ರಭುತ್ವ ಸರ್ಕಾರದ ವ್ಯವಸ್ಥೆಯಾಗಿದೆ. ಇಂತಹ ವ್ಯವಸ್ಥೆಯಿಂದ ಮಲೆನಾಡಿನ. ಸಹ್ಯಾದ್ರಿಯ ಗಿರಿಕಾಡುಗಳ ಸಂಪತ್ತೆಲ್ಲ ದಿವಾಳಿಯಾಗಿ ರೋದಿಸುತ್ತಿವೆ. ಗಿರಿಕಾಡುಗಳನ್ನು ಆಶ್ರಯಿಸಿದ ಗಿರಿಜನರು ತಲ್ಲಣಿಸುತ್ತಿದ್ದಾರೆ. ಕರ್ನಾಟಕದ ಹೆಮ್ಮೆ ಎನಿಸಿದ್ದ ಸಹ್ಯಾದ್ರಿ ಬೋಳಾಗುತ್ತಿದೆ. ಹಾಗಾಗಿ ಇಂತಹ ಸಂಕೀರ್ಣ ಸ್ಥಿತಿಯ ಈ ಪರಿಸರದ ಅರಿವು ಯಾರು ಯಾರಿಗೆ ಹೇಗಾಗಬೇಕೆಂಬುದು ನಮ್ಮೆದುರಿರುವ ಪ್ರಶ್ನೆಯಾಗಿದೆ.

ನಿಸರ್ಗದ ದಿವಾಳಿತನಕ್ಕೆ ಸರ್ಕಾರವೇ ಕಾರಣವೆಂಬುದಕ್ಕೆ ಇನ್ನೊಂದು ಉದಾಹರಣೆ ಎಂದರೆ; "ಲಾವಂಚ" ಮತ್ತು 'ಲೆಮನ್ ಗ್ರಾಸ್' ಹುಲ್ಲಿನಿಂದಾಗುತ್ತಿರುವ ಕಾಡಿನ ನಾಶ. ಹೇಗೆಂದರೆ ಇವುಗಳಿಂದ ಸುಗಂಧ ಎಣ್ಣೆತೆಗೆಯುವುದು; ಕೇರಳದಲ್ಲಿ ಪ್ರಾರಂಭವಾಗಿ ಈ ಹುಲ್ಲಿನ ಮಹತ್ವ ಹೆಚ್ಚಾಯಿತು. ಈ ಎಣ್ಣೆಯನ್ನು ಪರಿಮಳ ದ್ರವ್ಯ ಸಾಬೂನು, ಸೋಂಕು ನಿವಾರಕ ಔಷಧಿ 'ಎ' ಅನ್ನಾಂಗ ತಯಾರಿಕೆ ಮುಂತಾಗಿ ಹಲವು ವಿಧದಲ್ಲಿ ಬಳಸುತ್ತಾರೆ. "ಈ ಹುಲ್ಲನ್ನು ಭಟ್ಟಿ ಇಳಿಸಿ 2 ಲಕ್ಷ ರೂಪಾಯಿನ ಎಣ್ಣೆ ತೆಗೆದರೆ; ಇದಕ್ಕೆ 2 ಲಕ್ಷ ರೂಪಾಯಿನ ಮೌಲ್ಯದ ಉರುವಲು ಖರ್ಚಾಗುತ್ತದೆ ಎಂಬುದು ಅಲ್ಲಿಯ ಗಾರ್ಡನ ಹೇಳಿಕೆಯಾಗಿದೆ"."69"

ಇಲ್ಲಿ ಸರ್ಕಾರ ಕೇವಲ ಎಣ್ಣೆಯ ಮಹತ್ವಕ್ಕಾಗಿ ಇಡೀ ಅರಣ್ಯವನ್ನೇ ಕಡಿದು ಸುಟ್ಟು ಬೂದಿ ಮಾಡಲು ಬಂಡವಾಳಶಾಹಿಗಳಿಗೆ ಅನುಮತಿ ನೀಡಿದೆ. ಆದರೆ ಶ್ರೀಗಂಧ ಮರಕ್ಕಾಗಿ ಕಾಡಿನ ಹೊರಗೆ ಬಿಗಿ ಭದ್ರತೆ ಏರ್ಪಡಿಸುವ ಸರ್ಕಾರ, ಕಾಡಿನೊಳಗೆ ಕಾಡನ್ನು ನುಂಗುತ್ತಿರುವ 'ಲಾವಂಚ' 'ಲೆಮನ್ ಗ್ರಾಸ್' ಹುಲ್ಲು ಮತ್ತು ಇದರ ಹೆಸರಿನಲ್ಲಿ ಆಗುವ ಕಾಳದಂಧೆಯ ಬಗ್ಗೆ ಎಚ್ಚರ ವಹಿಸದಿರುವುದು ವಿಷಾದನೀಯ. ಹಾಗಾಗಿ ಸರ್ಕಾರದ ಈ ಜಾಣ ಕುರುಡಿನ ಹಿನ್ನೆಲೆ ಮಾತ್ರ ಸ್ಪಷ್ಟವಾಗಿದೆ.

ಹೀಗೆ ಈ ಸರ್ಕಾರ ಹಲವಾರು ರೀತಿ, ನೀತಿ, ಧೋರಣೆಯ ಕಾರ್ಯಕ್ರಮಗಳನ್ನು ರೂಪಿಸಿದರೂ ಇವೆಲ್ಲ ಉಳ್ಳವರ ಪರವಾದುವೇ ವಿನಾ, ಇಲ್ಲದವರ ಪರವಾದುವಲ್ಲ. ಇದು ಈ ಕೆಳವರ್ಗದ ಬುಡಕಟ್ಟು ಜನಗಳ ದೌರ್ಭಾಗ್ಯ ಇಂತಹ ಸಮಾಜ, ಇರುವವರೆಗೆ ಪರಿಸರ ತಿಳುವಳಿಕೆಯುಳ್ಳ ಕೆಲವೇ ಕೆಳವರ್ಗ, ಬುಡಕಟ್ಟು ಗಿರಿಜನರಿಗೆ ಸ್ವತಂತ್ರ ಸಮಾನತೆಗಳ ಮಾನವೀಯ ಬಾಳು ದೊರೆಯುವುದು ಅಸಾಧ್ಯ ಮತ್ತು ಪರಿಸರ ಸಂರಕ್ಷಣೆಯಾಗುವುದು ಸಹ, ಕಷ್ಟಕರ.

ಗಿರಿಜನ ಬುಡಕಟ್ಟುಗಳ ಕಷ್ಟ ಸುಖಗಳ ವಿಷಯಗಳನ್ನೊಳಗೊಂಡ ಈ ಕೃತಿ ಅಪೂರ್ಣವೆನಿಸುತ್ತದೆ. ಯಾಕೆಂದರೆ ಇದರಲ್ಲಿ ಸಾಮಾಜಿಕ, ರಾಜಕೀಯವಾಗಿ ಶೋಷಣೆಗೆ ಒಳಗಾಗಿರುವ ಹಲವಾರು ಬುಡಕಟ್ಟು ಜನರ ಅನುಭವದ ಅಭಿವ್ಯಕ್ತಿ ಇಲ್ಲಿ ಆಗಿಲ್ಲ. ಸಾಮಾಜಿಕ ಶೋಷಣೆ ಭಾರತೀಯ ಸಮಾಜದಲ್ಲಿ ನಿರಂತರವಾಗಿ ಸಾಗುತ್ತಿರುವಂತಹ ಹೀನಾಯ ಪ್ರವೃತ್ತಿ. ಈ ಪ್ರವೃತ್ತಿಯಿಂದ ಕೆಳವರ್ಗ ತಮ್ಮ ಸ್ವಾಭಿಮಾನ, ಆತ್ಮಗೌರವವನ್ನು ಕಳೆದುಕೊಂಡು; ಅವರ ಅಭಿವೃದ್ಧಿ ಮತ್ತು ಗೌರವಗಳು ಕುಂಠಿತವಾಗುತ್ತವೆ. ಇದು ಈ ಕೃತಿಯಲ್ಲಿ ಕಾಣಸಿಗುವುದಿಲ್ಲ. ಕೇವಲ ಸರ್ಕಾರ ಮತ್ತು ಬಂಡವಾಳಶಾಹಿಗಳಿಂದ ಶೋಷಣೆಗೆ ಒಳಪಡುವುದನ್ನು ಕಾಣುತ್ತೇವೆ ಅಷ್ಟೆ. ಈ ಮುಗ್ಧ ಜನರು ಬಲಿಪಶುಗಳಂತೆ ಎಲ್ಲರಿಂದ ಎಲ್ಲರೀತಿಯಿಂದಲೂ ವಂಚಿತರಾದ ಜನರಾಗಿದ್ದಾರೆ. ಹೀಗೆ ತಿಳುವಳಿಕೆ ಇಲ್ಲದ ಜನರಿಗೆ ರಾಜಕೀಯ ಸ್ಥಾನ ಮಾನ ಅವಕಾಶಗಳು ದೊರೆಯುವುದು ದುರ್ಲಭ. ದೊರೆತರೂ ಅಧಿಕಾರವನ್ನು ಕೇಂದ್ರೀಕರಿಸಿಕೊಂಡ ಸರ್ಕಾರ ಇವರನ್ನು ನಾಮ ಮಾತ್ರ ಸದಸ್ಯರನ್ನಾಗಿಸಿದೆ. ಇಂತಹ ಸಾಮಾಜಿಕ ಪರಿಸರದ ತಿಳುವಳಿಕೆ ಇಲ್ಲದವರಾಗಿ; ಹಸಲರ ರಾಮಪ್ಪ, ಗೊಂಡರ ಸೋಮಯ್ಯಗೊಂಡರುಗಳಾಗಿದ್ದಾರೆ. ತಮ್ಮ ಜನಾಂಗದವರ ಹಿತರಕ್ಷಣೆಯ ತಿಳುವಳಿಕೆ. ಅಧಿಕಾರವಿಲ್ಲದ ಇವರು ಮಂಡಲ ಪಂಚಾಯ್ತಿ ಸದಸ್ಯ ಉಪಪ್ರಧಾನ ಸ್ಥಾನಗಳು ದಕ್ಕಿದ್ದರೂ ಅಧಿಕಾರವಿಲ್ಲದೆ ಇದ್ದರೂ ಇಲ್ಲದಂತಾಗಿದ್ದಾರೆ. ಇದು ನಮ್ಮ ಪ್ರಜಾಪ್ರಭುತ್ವ ಮಾದರಿಯ ಸರ್ಕಾರದ ವ್ಯವಸ್ಥೆಯಾಗಿದೆ. ಇದು ಇಂದಿನ ಈ ನಮ್ಮ ಸಮಾಜ, ಸರ್ಕಾರಗಳ ಸಂಕೀರ್ಣ ಸ್ಥಿತಿ.

ಒಟ್ಟಾರೆ ಈ ಕೃತಿ ಗಿರಿಜನರ ಪರಿಸರ ತಿಳುವಳಿಕೆಯನ್ನು ಹಿಡಿದಿಟ್ಟಿದೆ. 20ನೇ ಶತಮಾನ ಮುಗಿಯುತ್ತ ಬಂದರೂ ಮೇಗಾನೆಯಂತ ಜನ ಸೈಕಲ್ಲನ್ನು ಕಾಣದೆ ಇರುವಂತಹವರು. ನಿಸರ್ಗದ ಆಶ್ರಯದಲ್ಲೆ ಅವರ ಬದುಕಿನ ಮೌಲ್ಯವನ್ನು ಕಂಡುಕೊಂಡು ಜೀವಿಸುತ್ತಿರುವಂತಹ ಆಶ್ಚರ್ಯದ ವಿಶಿಷ್ಟಾಂಶವನ್ನು ಪರಿಚಯಿಸಿಕೊಡುತ್ತದೆ. ಈ ಪುಸ್ತಕ ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಬುಡಕಟ್ಟು ಗಿರಿಜನರು ಹೇಗೆ ವಂಚಿತವಾಗಿ ದುರ್ಬಲರಾಗಿದ್ದಾರೆ ಎಂಬುದನ್ನು ತೋರಿಸಿಕೊಡುತ್ತದೆ. ಅಂತೆಯೇ ಇವರು ಪ್ರಕೃತಿ ಪರಿಸರದ ತಿಳುವಳಿಕೆಯಲ್ಲಿ ನಿಸರ್ಗ ಮಡಿಲಿನಲ್ಲಿ ತಮ್ಮದೆ ಆದ ಸಂತೃಪ್ತಿ ಜೀವನ ಕಾಣುವಲ್ಲಿ ಉಳ್ಳ ಎಲ್ಲ ವರ್ಗಕ್ಕಿಂತ ಪ್ರಬಲರಾಗಿರುವುದನ್ನು ನಾವು ಅರಿಯಬಹುದು. ಗಿರಿಜನ ಮತ್ತು ಕಾಡಿನ ನಡುವಿನ

ಸಂಬಂಧವನ್ನು ಬಿಡಿಸುವ ಕಾನೂನುಗಳನ್ನು ವ್ಯವಸ್ಥೆ ಮಾಡಿತು. ಇದನ್ನು ಕುರಿತದ್ದೆ ಬಂಜಗೆರೆ ಜಯಪ್ರಕಾಶರ 'ಮಹೂವಾ' ಪದ್ಯ ಇಂತಹ ಕಾನೂನು, ಯೋಜನೆ ಕಾರ್ಯಕ್ರಮಗಳಿಂದ, ಕಾಡು ಮತ್ತು ಗಿರಿಜನರ ಮೇಲೆ ಸರ್ಕಾರ ಬಂಡವಾಳಶಾಹಿಯಂತಹ ಉಳ್ಳವರ್ಗ ಹೇಗೆ ಆಕ್ರಮಣಕಾರಿ ಕೆಲಸಗಳಿಂದ ಶೋಷಣೆಗೊಳಪಡಿಸುತ್ತಿದೆ ಎಂಬುದು ವ್ಯಕ್ತವಾಗಿದೆ. ಈ ಕೃತಿ ಅತ್ಯಾಧುನಿಕ ಯುಗದೊಳಗೆ, ಪ್ರಾಚೀನ, ಶಿಲಾಯುಗದ ಜೀವಂತ ಸುಳಿವು. ಹೊಳವುಗಳನ್ನು ತೋರಿಸಿಕೊಡುತ್ತದೆ. ಇದರ ಮೂಲಕ ಇತಿಹಾಸ, ವಿಜ್ಞಾನಗಳಿಗೆ ಸವಾಲಾಗಿ ಈ ಸಾಹಿತ್ಯ ಕೃತಿ ಬಂದಿರುವುದು ಈ ಸಾಹಿತ್ಯಕ್ಕೂ ಸಮಾಜಕ್ಕೂ ಒಂದು ಕಾಣಿಕೆಯಾಗಿದೆ.

ಊ. ವೈಚಾರಿಕ ಲೇಖನ ಸಾಹಿತ್ಯ

'ಪರಿಸರವನ್ನೇ ಕುರಿತಾದ ಸಾಹಿತ್ಯವಿಲ್ಲ' ಎಂಬ ಮಾತನ್ನು ಮೊದಲೇ ಪ್ರಾಸ್ತಾಪಿಸಿದೆ. ಆದರೆ ಪರಿಸರವನ್ನೇ ಕುರಿತಾದ ಪತ್ರಿಕಾ ಲೇಖನಗಳು ನಮಗೆ ದೊರೆಯುತ್ತವೆ. ಹಾಗಾಗಿ ಇಂದಿನ ಪರಿಸರವನ್ನು ಕುರಿತ ವಿಚಾರಶೀಲ ವೈಚಾರಿಕ ಲೇಖನಗಳ ಚರ್ಚೆಯನ್ನು ಇಲ್ಲಿ ಕೈಗೆತ್ತಿಕೊಳ್ಳಬಹುದು.

ಇಲ್ಲಿ ನಾಗೇಶ ಹೆಗ್ಗಡೆಯವರ "ಇರುವುದೊಂದೇ ಭೂಮಿ "ಕೃತಿಯ ಲೇಖನಗಳನ್ನು ಮುಖ್ಯವಾಗಿ ಚರ್ಚಿಸಲಾಗಿದೆ. ಈ ಚರ್ಚೆಗೆ ಪೂರಕ ಹಿನ್ನೆಲೆಯಾಗಿ ಬರುವ ಹಿ.ಚಿ. ಬೋರಲಿಂಗಯ್ಯನವರ, "ಕಾಡು ಕಾಂಕ್ರೀಟ ಮತ್ತು ಜಾನಪದ "ಕೃತಿಯನ್ನು ಮತ್ತು ಇತರ ಪತ್ರಿಕಾ ಲೇಖನಗಳನ್ನು ಚರ್ಚೆಗೆ ಬಳಸಿಕೊಳ್ಳಲಾಗಿದೆ. "ಇರುವುದೊಂದೇ ಭೂಮಿ". "ಕಾಡು ಕಾಂಕ್ರೀಟ ಮತ್ತು ಜಾನಪದ" ಕೃತಿಗಳು ಲೇಖನಗಳ ಸಂಗ್ರಹಗಳು. ಈ ಲೇಖನಗಳೆಲ್ಲ ಪತ್ರಿಕಾ ಲೇಖನಗಳಾಗಿರುವುದರಿಂದ, ಹಾಗೂ ಇಲ್ಲಿ ಚರ್ಚಿಸುವ ಎಲ್ಲ ಲೇಖನಗಳು ಪರಿಸರ ಕುರಿತಾದ ವೈಚಾರಿಕ ಲೇಖನಗಳಾಗಿರುವುದರಿಂದ ಇವನ್ನು 'ವೈಚಾರಿಕ ಸಾಹಿತ್ಯ' ವೆಂದು ಪರಿಗಣಿಸಿ ವಿಶ್ಲೇಷಿಸಲಾಗಿದೆ.

ನಾಗೇಶ ಹೆಗ್ಗಡೆಯವರು "ಇರುವುದೊಂದೇ ಭೂಮಿ" ಯ 'ಬಂತು 29ನೇ ದಿನ' ಎಂಬ ಲೇಖನದೊಳಗಿನ ಚರ್ಚೆ; ಈ ಕೃತಿಯ ಎಲ್ಲಾ ಲೇಖನಗಳ ಅಂತಃಸತ್ವವನ್ನು ಒಳಗೊಂಡಿದೆ. ಇಡೀ ಜಗತ್ತಿನ ನಿಸರ್ಗ ಸಂಪತ್ತಿನ ಪರಿಸರ ವಿನಾಶವನ್ನೊಳಗೊಂಡಿದೆ. ಇಲ್ಲಿ ಲೇಖಕರು ಜಗತ್ತಿನ ಎಲ್ಲಾ ಪರಿಸರ ಪರಿಸ್ಥಿತಿಗಳ ಸಂಕೀರ್ಣ ಕಥೆಯನ್ನು 'ಪಾಚಿ' ಯ ಒಂದು ಸಂಕೇತದಲ್ಲಿ ನಿರೂಪಿಸಿದ್ದಾರೆ. ಒಟ್ಟು 30 ದಿನಗಳಿಗೆ ಪರಿಗಣಿಸಿ; ಪ್ರಸ್ತುತ ಕಾಲವನ್ನು 29ನೇ ದಿನವನ್ನಾಗಿಸಿದ್ದಾರೆ. 1 ರಿಂದ 29ನೇ ದಿನದವರೆಗೆ ಈ ನಿಸರ್ಗ, ಪ್ರಕೃತಿ ಪರಿಸರದ ದುಸ್ಥಿತಿ ಬೆಳೆದು ನಿಂತಿದೆ. ಬೆಳೆದ ಈ ದುಸ್ಥಿತಿಯಲ್ಲಿ ನಾವು ದುರಂತದ ಹೊಸಿಲ ಬಳಿಗೆ ಬಂದು; ಇಂದು ಈ 29ನೇ ದಿನಕ್ಕೆ ಕಾಲಿಟ್ಟಿದ್ದೇವೆ. ಹಾಗಾಗಿ 30ನೇ ದಿನವಾದ ನಾಳೆ; ನಾವು ಸರ್ವನಾಶದ ಶೂನ್ಯ ಪ್ರಪಂಚದ ಬಳಗಡೆ ಹೋಗಬೇಕೆ? ಅಥವಾ ಪ್ರಜ್ಞಾವಂತರಾಗಿ ಸ್ವತಂತ್ರ ಬದುಕಿನ ವೈವಿಧ್ಯ ಜೀವ ಜಗತ್ತಿನೊಡನೆ ತಿಳಿಗೊಂಡು, ಬದುಕಿನ ಎಲ್ಲ ಸಮತೋಲನವನ್ನು ಕಾಪಾಡಿಕೊಂಡು, ನಗುವಿನ ನಂದನವನವಾದ ಮೊದಲನೆ ದಿನಕ್ಕೆ ಮರಳಬೇಕೆ? ಎಂಬ ತಿಳುವಳಿಕೆಯಲ್ಲಿ 29 ದಿನಗಳನ್ನು ಕುರಿತು ಚರ್ಚಿಸಿದ್ದಾರೆ.

ಇಲ್ಲಿ ಒಂದು ಸರೋವರವಿದೆ. ಆ ಸರೋವರದೊಳಗೆ ಅಗೋಚರ ಸ್ಥಿತಿಯಲ್ಲಿದ್ದ ಒಂದು 'ಪಾಚಿ 29ನೇ ದಿನಕ್ಕೆ ಬರುವಷ್ಟರಲ್ಲಿ ಇಡೀ ಸರೋವರನ್ನೇ ಹೇಗೆ ನುಂಗಿ ನೊಣೆಯುತ್ತಿದೆ ಎಂಬುದನ್ನು ಸಾಂಕೇತಿಕವಾಗಿ ಬಳಸಿದ್ದಾರೆ. ಇಲ್ಲಿ ಸರೋವರ ಭೂಮಿ, ಹಾಗೂ ನಿಸರ್ಗ, ಪ್ರಕೃತಿಯ ಸಂಕೇತವಾದರೆ; ಪಾಚಿಯನ್ನು ಭೂಮಿ, ನಿಸರ್ಗ ಪ್ರಕೃತಿಯನ್ನು ಹಾಳುಮಾಡುವ ದುರಂತ ವ್ಯವಸ್ಥೆಯನ್ನೊಳಗೊಂಡ ಪರಿಸರದ ಸಂಕೇತವಾಗಿದೆ.

ಈ ಚರ್ಚೆಯಲ್ಲಿ 29ನೇ ದಿನಕ್ಕೆ ಕಾಲಿಟ್ಟ ಮಾನವನ ಸ್ಥಿತಿಗೆ ಅವನ ಬೇಜವಾಬ್ದಾರಿಗಳೇ ಕಾರಣ ಎಂದು ತೋರಿಸುತ್ತಾರೆ. 30ನೇ ದಿನಕ್ಕೆ ಕಾಲಿಡುವಮುನ್ನ ಮುನ್ನೆಚ್ಚರಿಕೆಯಾಗಿ ಪರಿಸರದ ಅರಿವು ತಿಳುವಳಿಕೆಯನ್ನು ಈ ಕೃತಿಯ ಮುಂದಿನ ಲೇಖನಗಳಲ್ಲಿ ಸವಿವರವಾಗಿ ಚರ್ಚಿಸಿದ್ದಾರೆ. ಕೊನೆಗೆ 'ಭೂಮಿಯ ಅಳಿವು ಉಳಿವಿನ ಆಯ್ಕೆಯ ತೀರ್ಮಾನವನ್ನು ಈ ಸಮಾಜದ ಜನರಿಗೆ ಬಿಟ್ಟಿದ್ದಾರೆ. ಕೊನೆಯ 'ಇರುವುದೊಂದೇ ಭೂಮಿ' ಲೇಖನವನ್ನು ಮೊದಲನೆ ಲೇಖನದ 29ನೇ ದಿನವನ್ನಾಗಿಸಿಃ ಧೃತಿಗೆಡುವುದು ಬೇಡ, ಈಗಲಾದರೂ ಕಾರ್ಯ ಪ್ರವೃತ್ತರಾಗೋಣ ಇನ್ನೂ ಕಾಲ ಮಿಂಚಿಲ್ಲ ಎಂದು ಧೈರ್ಯ ಮತ್ತು ಉತ್ಸಾಹಗಳೊಡನೆ ಕೊನೆಗೊಳಿಸುತ್ತಾರೆ. ಹೀಗೆ ಪರಿಸರಕ್ಕೆ ಸಂಬಂಧಿಸಿದ ಹಲವಾರು ಮುಖಗಳನ್ನು ಕೆದಕಿ ಓದುಗರ ಅರಿವಿಗೆ ಅವರ ಜಾಗೃತ ಪ್ರಜ್ಞೆಗೆ ಈ ಕೃತಿ ಕಾರಣವಾಗಿದೆ.

ಇನ್ನು ಪ್ರಾರಂಭದ ' ಬಂತು 29ನೇ ದಿನ'ದ ಲೇಖನದಿಂದ ಕೊನೆಯ 'ಇರುವುದೊಂದೇ ಭೂಮಿ' ಲೇಖನಗಳ ನಡುವಿನ ಲೇಖನಗಳ ಚರ್ಚೆಯನ್ನು ಈಗ ಕೈಗೆತ್ತಿಕೊಳ್ಳಬಹುದು. ಅದರಂತೆ " ಮಾನವ ನಿರ್ಮಿತ ಮಹಾಸಮಸ್ಯೆಗಳು" ಲೇಖನದಿಂದ ಆರಂಭಿಸಬಹುದು.

> "ಇಂದು ಇಡೀ ಭೂಮಂಡಲವೆ ಸಮಸ್ಯೆಗಳ ಮಡುವಾಗಿದೆ. ಹಿಂದೆಲ್ಲ ದುಷ್ಟ ಉದ್ದೇಶಗಳಿಂದಾಗಿಯೇ ಸಮಸ್ಯೆಗಳ ಸೃಷ್ಟಿಯಾಗುತ್ತಿತ್ತು. ಇಂದು ಹಾಗಲ್ಲ. ತನ್ನವರ ಏಳಿಗೆಯ ಸದುದ್ದೇಶದಿಂದ ಮಾನವ ಮಾಡುವ ಕೆಲಸಗಳಿಂದಲೇ ಹೊಸ ಹೊಸ ಸಮಸ್ಯೆ ಉದ್ಭವವಾಗುತ್ತಿವೆ. ನಮ್ಮ ಸೌಕರ್ಯಗಳು ಇನ್ನು ಹೆಚ್ಚುತ್ತಾ ಹೋಗಬೇಕೆ? ಅಥವಾ ಇಷ್ಟು ಪ್ರಗತಿಯಾದದ್ದೇ ಸಾಕೆಂದು ಏಳಿಗೆಯನ್ನೆ ಸ್ಥಗಿತಗೊಳಿಸಬೇಕೆ?". "70"

ಎಂಬ ಸಂಕೀರ್ಣ ಪ್ರಶ್ನೆಗಳೊಡನೆ ನಾಗೇಶ ಹೆಗಡೆ ಚರ್ಚೆಯನ್ನಾರಂಭಿಸುತ್ತಾರೆ. ಸಾವಿರಾರು ಸಮಸ್ಯೆಗಳನ್ನು ಹೊತ್ತ ಈ ಭೂಮಿ "ಅಡಕತ್ರಿಗೆ ಸಿಕ್ಕ ಅಡಕೆ" ಯಂತಾಗಿದೆ. ಹಾಗಾಗಿ ಈಗಿರುವ ನಮ್ಮ ಮುಂದಿನ ಪ್ರಶ್ನೆ ಈ ಅಡಕೆಯನ್ನು ಕತ್ತರಿಸಬೇಕೆ? ಇಲ್ಲ ಅಡಕತ್ರಿಯಿಂದ ಅಡಕೆಯನ್ನು ರಕ್ಷಿಸಬೇಕೆ? ಎಂಬುದು. ಈ ಭೂಮಂಡಲದ ಪ್ರಸ್ತುತ ಸಮಸ್ಯೆ ಸ್ಥಿಗತಿಗೆ ಜೀವ ವೈವಿಧ್ಯಗಳಲ್ಲಿ ಆದ್ಯ

> "ಪರಿಸರದ ಪರಿಸ್ಥಿತಿ ತೀರ ಬಿಗಡಾಯಿಸಿದ್ದು ಇಡೀ ಭೂಮಿಯ 'ಜೀವ ಜಾಲ'ವೇ ವಿನಾಶದ ಅಂಚಿನಲ್ಲಿ ನಿಂತಿದೆ. ಕ್ಯಾನ್ಸರ್ ಹಬ್ಬಿಸಬಲ್ಲ ವಿಷಾಕ್ತ ರಾಸಾಯನಿಕಗಳು ಹೆಚ್ಚುತ್ತಿದೆ. ವಾತಾವರಣದ ಓಜೋನ್ ವಲಯ ಛಿದ್ರವಾಗುತ್ತಿವೆ. ಹುಳಿ ಮಳೆ ಸುರಿಯಲಾರಂಭಿಸಿದೆ. ಮರುಭೂಮಿ ವಿಸ್ತರಿಸುತ್ತಿದೆ. ಉರುವಲು ಕಟ್ಟಿಗೆ ಕಡಿಮೆಯಾಗುತ್ತಿದೆ. ಕುಡಿಯುವ ನೀರು ದುರ್ಲಭವಾಗುತ್ತಿವೆ. ಭೂಮಿಯು ಕಾವೇರುತ್ತಿದೆ. ಹವಾಮಾನದಲ್ಲಿ ಅನಿರೀಕ್ಷಿತ ಸ್ಥಿತ್ಯಂತರಗಳಾಗುತ್ತಿವೆ...". "71"

ಎಂದು ಹೇಳುತ್ತಾ ಲೇಖಕರು ಪರಿಸರ ಸಮಸ್ಯೆಗಳ ಪಟ್ಟಿ ಮಾಡುತ್ತಾ ಹೋಗುತ್ತಾರೆ. ಆದರೆ ಇಂತಹ ಸಮಸ್ಯೆಗಳ ಪಟ್ಟಿಗೆ ಕೊನೆಯಿಲ್ಲ. ಇಂತಹ ಸ್ಥಿತಿಯಲ್ಲಿ ನಮ್ಮ ಬದುಕಿನ ಉಳಿವಿಗೆ ಇರುವ ಏಕೈಕ ದಾರಿ ಎಂದರೆ; ಜೀವರಾಶಿ ತುಂಬಿ ತುಳುಕುವ ತುಂಬ ಅಪರೂಪ ಗ್ರಹ ಭೂಮಿಯನ್ನು ಉಳಿಸಿಕೊಳ್ಳಬೇಕಾಗಿರುವುದು. ಯಾಕೆಂದರೆ ಈ ಭೂಮಿಯು ಇಂತಹ ಸಸ್ಯ ಪ್ರಾಣಿ, ಕ್ರಿಮಿ, ಕೀಟ ಮತ್ತು ಮನುಷ್ಯನಂತಹ ವೈವಿಧ್ಯಮಯ ಜೀವ ಜಗತ್ತು; ಗಾಳಿ, ನೀರು ಬೆಳಕಿನಂತಹ ಪಂಚಭೂತಗಳು ಮತ್ತು ಭೂಗರ್ಭದಲ್ಲಿ ಸಿಗುವ ಖನಿಜ ಸಂಪತ್ತು ಇತ್ಯಾದಿ ವೈವಿಧ್ಯ ಸಂಪತ್ತಿನಿಂದಾಗಿದೆ.

ಈ ಕೃತಿಯಲ್ಲಿ ಅಭಿವೃದ್ಧಿಯನ್ನು ಕುರಿತಾದ ಚರ್ಚೆ 'ಪ್ರಗತಿಗೂ ಮಿತಿಬೇಕು' 'ಅಣು ಚಳಿಗಾಲಃ ಅಡಗಲು ಸ್ಥಳವೆಲ್ಲಿ?' ಅಣುಶಕ್ತಿವರವೆ? ಶಾಪವೆ? 'ಬುಲ್ ಡೋಜರ್ ಸಂಸ್ಕೃತಿ' ಇತ್ಯಾದಿ ಲೇಖನಗಳಲ್ಲಿ ಹರಡಿಕೊಂಡಿದೆ.

ಒಟ್ಟಾರೆ ಈ ಲೇಖನಗಳ ಚರ್ಚೆಯಲ್ಲಿ 'ಬೆಳವಣಿಗೆ ಬೇಕು' ಆದರೆ ಈ ಬೆಳವಣಿಗೆಯಿಂದಾಗುವ ನಾಶ ಬೇಡ' ವೆಂಬ ವಾದವಿದೆ. ಅಂದರೆ ಉಕ್ಕು ಕಬ್ಬಿಣಬೇಕು. ಅದರಿಂದ ಬರುವ ಹೊಗೆಯಾಗಲಿ, ಕಲ್ಮಶ ನೀರಾಗಲಿ ಬೇಡವೆಂಬ ವಾದ. ಇದು "ನೆಂಟರು ಉಣ್ಣಬೇಕು. ಅಕ್ಕಿ ಮುಗಿಯಬಾರದು" ಎಂಬ ಗಾದೆಯಂತಿದೆ. ಇದು ಹೇಗೆ ಸಾಧ್ಯ? ಲೇಖಕರು ಪ್ರಗತಿ [ಅಭಿವೃದ್ಧಿ] ಯನ್ನು ಒಪ್ಪಿಯೇ ಇದರ ದುಸ್ಥಿತಿಯನ್ನು ಚರ್ಚಿಸುತ್ತಾರೆ. ಅಭಿವೃದ್ಧಿಯನ್ನು ಒಪ್ಪಿಕೊಂಡ ಮನಸ್ಸು ಇನ್ನೊಂದು ಬಾರಿ ಬೇಡವೆನ್ನುವುದು ಕಷ್ಟ . ಈ ತರ್ಕಕ್ಕೆ ಲೇಖಕರ ಮಾತುಗಳನ್ನು ಉದಾಹರಿಸ ಬಹುದಾಗಿದೆ. ಅವರು ಜನಸಂಖ್ಯೆ ಹೆಚ್ಚಳವನ್ನು ಹಾಗೂ ಔದ್ಯಮಿಕ ಉತ್ಪಾದನೆಯನ್ನು ಕುರಿತು ಹೀಗೆನ್ನುತ್ತಾರೆಃ

> "ಜನ ಸಂಖ್ಯೆ ವರ್ಷಕ್ಕೆ ಶೇಕಡ 2ರಷ್ಟು ಏರುತ್ತಿದ್ದು ಔದ್ಯಮಿಕ ಉತ್ಪಾದನೆ ಶೇ 7ರಷ್ಟು ಹೆಚ್ಚುತ್ತಿದ್ದರೆ ನಾವು ಖುಷಿಪಡಬೇಕು ತಾನೆ"?. ಮತ್ತು "ತಂತ್ರಜ್ಞಾನದ ವಿಕಾಸವಾಗಬೇಕು. ನಿಜ. ತ್ಯಾಜ್ಯ ಪದಾರ್ಥಗಳ ಪುನರ್ಬಳಕೆ ಜನನ ನಿಯಂತ್ರಣದ ಸರಳ ವಿಧಾನ. ಪರಿಸರ ಮಾಲಿನ್ಯದ ಹತೋಟಿ. ಇವಕ್ಕೆಲ್ಲ ತಂತ್ರಜ್ಞಾನ ಬೇಕೆಬೇಕು. ಇದರ ಜೊತೆಗೆ ಈ ಸೀಮಿತ ಜಗತ್ತಿನಲ್ಲಿ ಬೆಳವಣಿಗೆಗೆ ಕಟ್ಟು ಪಾಡು ಹಾಕಬೇಕಾದುದೂ ತೀರಾ ಅವಶ್ಯ". "72"

ಲೇಖಕರ ಇಂತಹ ದ್ವಂದ್ವ ಮನಸ್ಸಿನ ತಾತ್ವಿಕ ನಿಲುವು ಹೇಗೆ ಸಾಧ್ಯ?. ಅಭಿವೃದ್ಧಿ ಬೆಳವಣಿಗೆ ಮತ್ತು ಭೋಗ ಸಂಸ್ಕೃತಿಗಳ ಇದೇ ಚರ್ಚೆಯನ್ನು ಹಿ.ಚಿ. ಬೋರಲಿಂಗಯ್ಯನವರ "ಕಾಡು ಕಾಂಕ್ರೀಟ್ ಮತ್ತು ಜಾನಪದ" ಕೃತಿಯ 'ಕಾಡಿನ ಸಂಸ್ಕೃತಿಯೂ ಕಾಂಕ್ರೀಟ್ ಸಂಸ್ಕೃತಿಯೂ" ಎಂಬ ಲೇಖನದಲ್ಲಿ ನೋಡಬಹುದು. ಇದರಲ್ಲಿ ಲೇಖಕರು ಸೃಷ್ಟಿಸುವ ಮತ್ತು ಭೋಗಿಸುವ ಸಂಸ್ಕೃತಿಗಳ ಚರ್ಚೆ ಮಾಡುತ್ತಾರೆ. ಇದರಿಂದ ಸೃಷ್ಟಿಸುವವನಿಗೆ ಭೋಗಿಸುವ ಅದೃಷ್ಟವಿಲ್ಲ. ಹಾಗೂ ಭೋಗಿಸುವವನಿಗೆ ಸೃಷ್ಟಿಸುವ ಶ್ರಮವಿಲ್ಲ. ಇಂತಹ ಅಸಮಾನ ವಿಧಾನಗಳಿಂದ ತುಂಬಿದ ಸಂಪತ್ತುಗಳ ಅಸಮಾನ ಹಂಚಿಕೆಯ ಸಂಸ್ಕೃತಿಯಾಗಿದೆ. ಇದು ಹಳ್ಳಿ ರೈತನಿಗೂ, ಕಾಡು ನಿವಾಸಿಗಳಿಗೂ ಮತ್ತು ನಗರ ನಿವಾಸಿ ಎನಿಸಿದ ರಾಜಕೀಯ ಶಾಹಿ, ಅಧಿಕಾರ ಶಾಹಿ, ನೌಕರ ಶಾಹಿ, ವ್ಯಾಪಾರ ಶಾಹಿ ಇತ್ಯಾದಿ ವರ್ಗಗಳಿಗೂ ಇರುವ ಬದುಕಿನ ತಾರತಮ್ಯ

> "ಬೃಹತ್ ಅಣೆಕಟ್ಟೆಗಳ ಸಂಸ್ಕೃತಿ ಇನ್ನೊಂದು ಅನಾಹುತಕ್ಕೆ ದಾರಿ ಮಾಡಿದೆ. ಈ ಕಾಂಕ್ರೀಟ್ ಅಣೆಗಳು ಎಷ್ಟು ಕಾಡನ್ನು ನುಂಗಿವೆ, ಅದರೊಳಗಿನ ಎಷ್ಟೆಲ್ಲ ಜೀವ ಜಗತ್ತನ್ನು ನಾಶಪಡಿಸಿವೆ. ಮತ್ತು ಇವುಗಳಿಂದ ಪರಿಸರ ಅಸಮತೋಲನವಾಗಿದೆ"."73"

ಎನ್ನುತ್ತಾರೆ ಲೇಖಕರು. ಹೌದು, ಇಲ್ಲಿ 'ಭಾರತದಂತಹ ಸಮೃದ್ಧ ಜನಸಂಖ್ಯೆಯ ನಿರುದ್ಯೋಗ, ಬಡತನವುಳ್ಳ ರಾಷ್ಟ್ರಗಳಿಗೆ ಕೃಷಿಯಭಿವೃದ್ಧಿಗಾಗಿ ಅಣೆಕಟ್ಟೆಗಳು ಅನಿವಾರ್ಯ' ವೆನ್ನುವ ವಾದವಿದೆ. ಆದರೆ ಅಮೇರಿಕ, ಯೂರೋಪ್ ನಂತಹ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಬಡತನ ನಿರುದ್ಯೋಗಗಳಿಲ್ಲವೆ?. ಅವರು ಈ ದಾರಿ ಹಿಡಿದಿದ್ದಾರೆಯೇ? ಅಣೆಕಟ್ಟೆಗಳೊಂದೆ ಈ ಸಮಸ್ಯೆಗಳಿಗೆ ಪರಿಹಾರವೆ? ಎಂದು ಚಿಂತಿಸಬೇಕಾಗುತ್ತದೆ. ಅದರಲ್ಲೂ ಈಗಿರುವ ಅಣೆಕಟ್ಟೆಗಳು ಕೃಷಿಗಾಗಿಯೇ ಎಷ್ಟು ಮೀಸಲಾಗಿವೆ. ಎಂದು ಪ್ರಶ್ನಿಸಿ ಹೊರಟರೆ ಉತ್ತರ ಅಸಾಧ್ಯ ಕೃಷಿಯ ಹೆಸರಿಂದ ಅಂತರಾಷ್ಟ್ರೀಯ ಕೈಗಾರಿಕೋದ್ಯಮಿಗಳ ಪ್ರಗತಿಗೆ, ಬಳಕೆಯಾಗಿ, ಕೃಷಿ ಎಂದಿನಂತೆ ಸ್ಥಗಿತಗೊಂಡು ನಿರುದ್ಯೋಗ, ಬಡತನ ಸಮಸ್ಯೆ ನಿರಂತರವಾಗಿ ಸಾಗುತ್ತಿದೆ. ಈ ಕೈಗಾರಿಕೆಗಳಿಂದ ನದಿ ಸಾಗರಗಳ ನೀರೆಲ್ಲ ಕಲ್ಮಶಗೊಂಡಿದೆ. ಕೃಷಿಯಭಿವೃದ್ಧಿಯಿಂದ ಭೂಮಿಗೆ ಕೀಟನಾಶಕ ಔಷಧ, ರಾಸಾಯನಿಕ ಗೊಬ್ಬರಗಳನ್ನು ಸುರಿದು ಭೂಮಿ ತನ್ನ ಸತ್ವವನ್ನು ಕಳೆದುಕೊಂಡು ಫಲಹೀನವಾಗುತ್ತಿದೆ. ಹಾಗಾಗಿ ಪ್ರಸ್ತುತ ಸಮಾಜಕ್ಕೆ ಇಂತ ಅಣೆಕಟ್ಟೆಗಳ ಒಳಿತು ಕೆಡಕುಗಳ ಗಂಭೀರ ಪರಿಶೀಲನೆಯಿಂದ, ಅಭಿವೃದ್ಧಿಯ ಬೇಕು ಬೇಡಗಳ ತೀರ್ಮಾನ ಅನಿವಾರ್ಯವಾಗಿದೆ.

ಅಭಿವೃದ್ಧಿ ಬೆಳವಣಿಗೆಯಂತಹ ಕಾರ್ಯ ಚಟುವಟಿಕೆಗಳಿಂದ ಉಂಟಾಗುತ್ತಿರುವ ಸಮಸ್ಯೆ ತುಂಬ ಜಟಿಲವಾದದ್ದು. ಇದು ಊರು, ನಾಡು, ದೇಶದ್ದಷ್ಟೆ ಅಲ್ಲ; ಹೆಚ್ಚಾಗಿ ದೇಶದೇಶಗಳ ರಾಷ್ಟ್ರ ರಾಷ್ಟ್ರಗಳ ನಡುವೆ ಉದ್ಭವಿಸುವ, ಅಭಿವೃದ್ಧಿ ಪೈಪೋಟಿಯ ಮಿತಿಮೀರಿದ ಬೆಳವಣಿಗೆಯಿಂದಾಗುತ್ತಿರುವ ವಿಶ್ವ ವ್ಯಾಪ್ತಿ ಸಮಸ್ಯೆಯಾಗಿದೆ. ಹಾಗಾಗಿ ತಾಂತ್ರಿಕ, ಆರ್ಥಿಕ, ಸಾಮಾಜಿಕ, ಸಮತೋಲನವನ್ನು ಕಾಪಾಡಿಕೊಂಡು ಸಾಮರಸ್ಯ ಸೌಹಾರ್ದತೆಯ ತಿಳುವಳಿಕೆಗೆ ಆಹ್ವಾನಿಸುತ್ತಿರುವ ಈ ಪರಿಸರ ಸಮತೋಲನದ ಸಂಕೀರ್ಣ ಸ್ಥಿತಿಯ ಜಟಿಲ ಪ್ರಶ್ನೆಗೆ ಉತ್ತರ ಎಲ್ಲಿದೆ?

ರೇಮಾಂಡ್ ವಿಲಿಯಮ್ಸ್ 'ಪರಿಸರ ರಕ್ಷಣೆ ಮತ್ತು ಸಮಾಜವಾದ' ಎಂಬ ಲೇಖನದಲ್ಲಿ ಅಭಿವೃದ್ಧಿಯತ್ತ ಕಾಲಿಟ್ಟ ಈ ಔದ್ಯಮಿಕರಣವನ್ನು ಕುರಿತು ಚರ್ಚಿಸುತ್ತಾರೆ; ಸಮಾಜವಾದಿಗಳ ಔದ್ಯಮಿಕರಣ ಚಿಂತನೆಯ ಬಗ್ಗೆ ಸಮಾಜವಾದಿಗಳುಃ

> "ಔದ್ಯಮಿಕರಣ ಎಂದರೆ ನಿಸರ್ಗದ ಸಹಜ ಸ್ಥಿತಿ ಮೇಲೆ ನಡೆಸಿದ ಒಂದು ದಾಳಿ. ಎನ್ನುವುದರ ಬಗ್ಗೆ ಸರ್ವಾನುಮತವಿತ್ತು. ಔದ್ಯಮಿಕರಣಕ್ಕಿಂತ ಮೊದಲು ಇದ್ದ ವ್ಯವಸ್ಥೆಯನ್ನು ಒಂದು ಆದರ್ಶ ಸ್ಥಿತಿ ಎಂದು ಭಾವಿಸಿದರು; ಜೊತೆಗೆ ಔದ್ಯಮಿಕರಣಕ್ಕೆ ಮೊದಲು ಪ್ರಾಕೃತಿಕ ಪರಿಸರದ ಮೇಲೆ ಯಾವುದೇ ಗಣನೀಯವಾದ, ವಿನಾಶಕಾರಿಯಾದ ಹಸ್ತಕ್ಷೇಪ ನಡದೇ ಇರಲಿಲ್ಲ. ಎಂದು ನಂಬಿದರು". "74"

ಆದರೆ ರೇಮಾಂಡ್ ವಿಲಿಯಂರವರು ಇದಕ್ಕೆ ಪ್ರತಿಯಾಗಿ ಹೀಗೆ ಹೇಳುತ್ತಾರೆ.

> "ಇದು ಶಿಲಾಯುಗದಿಂದಲೂ ನಡೆದುಕೊಂಡು ಬಂದಿದೆ. ಕೃಷಿಯ ಕೆಲವು ವಿಧಾನಗಳು, ಜಾನುವಾರುಗಳ ಮೇವು, ಅರಣ್ಯನಾಶ ಇವು ಮೊದಲಿನಿಂದಲೂ ತೀವ್ರ ಸ್ವರೂಪದ ಪ್ರಾಕೃತಿಕ ವಿಕೋಪಗಳನ್ನು ಹುಟ್ಟು ಹಾಕಿವೆ. ಜಗತ್ತಿನ ದೊಡ್ಡ ಮರುಭೂಮಿಗಳು ಹುಟ್ಟಿದ್ದು ಮತ್ತು ವಿಸ್ತಾರಗೊಂಡಿದ್ದು. ಹವಾಮಾನದಲ್ಲಿ ವಿಪರೀತ ಏರು ಪೇರುಗಳು ಕಾಣಿಸಿಕೊಂಡದ್ದು ಆ ಕಾಲದಲ್ಲಿಯೇ". "75"

ಇವರು ಪರಿಸರನಾಶವನ್ನು ಶಿಲಾಯುಗಕ್ಕೆ ಕೊಂಡೊಯ್ಯುತ್ತಾರೆ. ಹಾಗಾಗಿ ಆಯಾ ಯುಗದ ಬದುಕಿನ ಕ್ರಿಯಾ ಚಟುವಟಿಕೆಳು ಪ್ರಕೃತಿ ವಿಕೋಪವನ್ನು ಹುಟ್ಟು ಹಾಕಿದೆ. ಎಂಬ ರೇಮಾಂಡರ ಮಾತನ್ನು ಒಪ್ಪುವುದು ಕಷ್ಟ ಯಾಕೆಂದರೆ; ಕೃಷಿ ವಿಧಾನಗಳಿಂದ, ಜಾನುವಾರುಗಳ ಮೇವಿನಿಂದ ಅರಣ್ಯನಾಶ ಸಾಧ್ಯವಿಲ್ಲ. ಇಂತಹ ಕ್ರಿಯೆಗಳಿಂದ ಪ್ರಕೃತಿ ನಾಶವಾಗಲಿ, ಪರಿಸರಮಾಲಿನ್ಯವಾಗಲಿ ಆಗಲಾರದು. ಯಾಕೆಂದರೆ ಜಾನುವಾರುಗಳಿಗಾಗಿ ಅರಣ್ಯ ಕಡಿದರೆ ಆರು ತಿಂಗಳೊಳಗೆ ಅದು ಎಂದಿನಂತೆ ಬೆಳೆಯುತ್ತದೆ. ಕೃಷಿಗಾಗಿ ಕಾಡು ಕಡಿಯುತ್ತಿದ್ದುದನ್ನು ನಾವು ವಿರೋಧಿಸಬಹುದು. ಆದರೆ ಅದರಿಂದ ಅರಣ್ಯನಾಶವಾಗುತ್ತಿರಲಿಲ್ಲ. ಈ ಮಾತಿಗೆ "ಕಾಡು ಕಾಂಕ್ರೀಟ್ ಮತ್ತು ಜಾನಪದ" ಕೃತಿಯ "ಅರಣ್ಯದೊಳಗಿನ ಬುಡಕಟ್ಟುಗಳುಃ ಒಂದು ವಿವೇಚನೆ" ಲೇಖನದ ಮಾತನ್ನು ಉದ್ಧರಿಸಬಹುದುಃ

> "ಬ್ರಿಟಿಷರ ಆಗಮನದ ನಂತರ ಬಂದ ಕಬ್ಬಿಣದ ನೇಗಿಲ 'ಗುಳ' ಎಷ್ಟರಮಟ್ಟಿಗೆ ಕೃಷಿ ಭೂಮಿಯ ವಿಸ್ತರಣೆ ಮಾಡಿತು ಎಂಬುದು ನಮಗೆಲ್ಲ ಗೊತ್ತೆ ಇದೆ. ಯಾವುದೇ ಭೂಮಿಯಲ್ಲಿ ಕಾಡು ಕಡಿದರೂ ಅನಂತರ ಅದರ ಪಾಡಿಗೆ ಅದನ್ನು ಏಳುವರ್ಷ ಬಿಟ್ಟರೆ ಮತ್ತದೆ ಕಾಡು ಆವರಿಸಿಕೊಳ್ಳುತ್ತದೆ. ಇದನ್ನು ತಿಳಿದಿದ್ದ ಈ ಜನರು 'ಖಾಯಂ ಕೃಷಿ' ಭೂಮಿಯ ಬದಲಾಗಿ 'ಕುಮರಿ ಕೃಷಿ' ಯನ್ನು ಅವಲಂಬಿಸಿ ಆ ಮೂಲಕ ಕಾಡಿಗೆ ಯಾವುದೇ ಅಪಾಯವು ಒದಗದಂತೆ ಸಮತೋಲನ ಕಾಪಾಡಿಕೊಂಡು ಬರುತ್ತಿದ್ದರು. ಹೀಗೆ ಇಡೀ ಕಾಡು ತಮ್ಮದು ಎಂಬ ಮನೋವೈಶಾಲ್ಯದಿಂದ ಬಾಳುವ ಮೂಲಕ ಅದರ ಅಸ್ತಿತ್ವಕ್ಕೆ ಧಕ್ಕೆ ಬರದಂತೆ ಬದುಕಿದ ಇವರನ್ನು ಅತಿಕ್ರಮಿಸಿ ಕಾಡು ಮತ್ತು ಭೂಮಿ 'ನನ್ನದು' ಎಂಬ ಅಹಂಕಾರದಿಂದ ನಾಗರಿಕ ಮನುಷ್ಯ ಗುತ್ತಿಗೆ ಹಿಡಿದ". "76"

ಇಂತ ಔದ್ಯೋಗಿಕರಣವನ್ನೆ ಕುರಿತು ಇಂಗ್ಲೆಂಡಿನ ಕೋತ ಬ್ರೂಕ್ ಡೇಲ್ ನಲ್ಲಿ 1830ರ ಸುಮಾರಿಗೆ ನಡೆಯುತ್ತಿದ್ದ ಕಬ್ಬಿಣದ ಉತ್ಪಾದನೆಯ ಬಗ್ಗೆ ಆತ ಬರೆದನು!

> "ಈ ಉದ್ಯಮದ ಹೊಗೆ ಕೊಳವೆಗಳಿಂದ ಹೊರಹೊಮ್ಮುವ ಸಲ್ಫರ್ ನ ಆಮ್ಲ ಮಿಶ್ರಿತ ಹೊಗೆಯಿಂದ ನೆಲದಲ್ಲಿ ಚಿಗುರಿದ ಹುಲ್ಲು ಸುಟ್ಟು ಕರಕಲಾಗಿದೆ. ಯಾವತ್ತೂ ಸಸ್ಯ ಕುಲ ತನ್ನ ಹಸಿರಿನ ಸಮೃದ್ಧಿಯನ್ನು ಕಳೆದುಕೊಂಡು ಅಸಹ್ಯ ಕಂದು ಬಣ್ಣ ತಳೆದಿದೆ. ಅದು ಸಾವಿನ ಸಂಕೇತವೋ ಎಂಬಂತೆ ಕಾಣುತ್ತಿದೆ"."77"

ಒಂದು ಕಡೆ 'ಥಾಮಸ್ ಮೋರ್, ಮಾನವನ ಸಾಕು ಪ್ರಾಣಿಯಾದ ಕುರಿ ಸಾಕಾಣಿಕೆಯನ್ನು ಕುರಿತು ಉಣ್ಣೆ ವ್ಯಾಪಾರದ ಉಛ್ರಾಯದ ಕಾಲವಾದ 16ನೇ ಶತಮಾನದಲ್ಲಿ "ಕುರಿಗಳು ಮನುಷ್ಯ ರನ್ನು ತಿನ್ನುತ್ತಿವೆ" ಎಂದು ಬರೆಯುತ್ತಾನೆ. ಆದರೆ 'ಸಲ್ಫರ್ ನ ಆಮ್ಲ ಮಿಶ್ರಿತ ಹೊಗೆ' ಯ ಹಾಗೆ ಖಂಡಿತ ಅಲ್ಲ. ಹಾಗಾಗಿ ಪರಿಸರದ ಮೇಲೆ ಆಗುವ ಒಟ್ಟು ಪರಿಣಾಮ ಮಾತ್ರ ನಮಗೆ ಮುಖ್ಯ ಆದ್ದರಿಂದ ಜನತೆಯ ಮೇಲೆ ಆಗುವ ದುಷ್ಪರಿಣಾಮಗಳನ್ನು ಕಡೆಗಣಿಸಿ ಕೇವಲ ಲಾಭಗಳಿಕೆಗೋಸ್ಕರ ಪ್ರಾಕೃತಿಕ ಮತ್ತು ಪ್ರಾಣಿ ಪರಿಸರವನ್ನು ಬೇಕಾಬಿಟ್ಟಿಯಾಗಿ ಬಳಸಿಕೊಳ್ಳುವ ಪ್ರವೃತ್ತಿಗೆ ಕಾರಣ ಯಾರು?

ಇಂದು ಸರ್ಕಾರ ಮತ್ತು ಬಂಡವಾಳಶಾಹಿಗಳಿಗೆ ಇರುವ ತಿಳುವಳಿಕೆ ಒಂದೆ. ಭೋಗ ಸಂಸ್ಕೃತಿಯ 'ಅಭಿವೃದ್ಧಿ' ಸಂವೇದನೆ ಇವರಿಗೆ ಈ ಸಮಾಜ ಪರಿಸರದ, ಪ್ರಕೃತಿ ಪರಿಸರದ ಇಲ್ಲವಾಗಿದೆ. ಈ ಏಕಮುಖವಾದ ಅಭಿವೃದ್ಧಿ ತಿಳುವಳಿಕೆಯಿಂದ ಇಂದು ಕಂಪ್ಯೂಟರ್, ಬುಲ್ ಡೋಜರ್ ಸಂಸ್ಕೃತಿಗಳು ತೋರಿಕೆಯ ಭೋಗ ಸಂಸ್ಕೃತಿಯ ಅಸ್ತ್ರಗಳಾಗುತ್ತಿವೆ. ಇದು 'ಉಳ್ಳವರ ಪರ ಅಭಿವೃದ್ಧಿ, ಇಲ್ಲದವರನ್ನು ಕೊನೆಗೂ ಇನ್ನಿಲ್ಲದಂತೆ ಮಾಡುವ ಅಭಿವೃದ್ಧಿ ಹೇಗೆಂದರೆ ಇಂತಹ ಸಂಸ್ಕೃತಿಗಳು ಸಾವಿರಾರು ಜನರ ಅನ್ನಕಿತ್ತು ಕೊಂಡಂತಹ ಕಂಪ್ಯೂಟರ್ , ಬುಲ್ ಡೋಜರ್ ಗಳು ಕೆಳವರ್ಗದ ಮಧ್ಯಮವರ್ಗದ ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡಿ ಬಡವರನ್ನು ಇನ್ನು ಬಡತನದ ಕೂಪಕ್ಕೆ ತಳ್ಳಿಪ್ರಕೃತಿಯನ್ನು ವಿಕೃತಿಯಾಗಿ ಪರಿವರ್ತಿಸಿ ಪರಿಸರ ನಾಶಕ್ಕೆ ಕಾರಣವಾಗುತ್ತಿವೆ. ಇಂದು ಇಂತಹ ಅಭಿವೃದ್ಧಿ ಹೆಸರಿನಲ್ಲಿ ಸ್ಥಾಪನೆಯಾಗುತ್ತಿರುವಂತಹ ಕೈಗಾ, ಕೊಜೆಂಟ್ರಿಕ್ಸ್ ನಂತಹ ವಿದ್ಯುತ್ ಸ್ಥಾವರಗಳಿಗೆ ಕಡಿವಾಣ ಹಾಕಬೇಕು. ಇಂತಹ ವಿದ್ಯುತ್ ಸ್ಥಾವರಗಳು ಯಾರಿಗಾಗಿ? ಯಾಕಾಗಿ? ಎಂಬ ಅರಿವು ಸಹ ಇಲ್ಲದಿರುವ ಮಧ್ಯಮವರ್ಗದ ಅಂಧತ್ವಕ್ಕೆ ವಿಷಾದವೆನಿಸುತ್ತದೆ. ಆದರೆ ಈ ಅರಿವಿದ್ದ ಪರಿಸರವಾದಿಗಳ ಬಾಯಿ ಮುಚ್ಚಿಸುವುದಕ್ಕಾಗಿ ಸರ್ಕಾರ ಪರಿಸರ ರಕ್ಷಣೆ ಕುರಿತ ಅನೇಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತದೆ. ಇಂತಹ ಕಾರ್ಯಕ್ರಮ ಒಂದು ಕಡೆಯಾದರೆ; ಕೈಗಾ ಕೊಜೆಂಟ್ರಿಕ್ಸ್ ನಂತಹ ವಿದ್ಯುತ್ ಸ್ಥಾವರ, ಹಾಗೂ ಪರಿಸರ ನಾಶಕ ಕಾರ್ಖಾನೆಗಳ ಸ್ಥಾಪನೆಗೆ ಪ್ರೋತ್ಸಾಹ, ಮನ್ನಣೆಗೆ ಆದೇಶ ಇನ್ನೊಂದು ಕಡೆ. ಇಂತಹ ಸರ್ಕಾರವುಳ್ಳ ಯಾವ ರಾಷ್ಟ್ರದ ಪರಿಸರ ಸಂರಕ್ಷಣೆ ಯಾದಿತು? ಇಂತಹ ಸರ್ಕಾರವುಳ್ಳ ರಾಷ್ಟ್ರದ ಜನರಿಗೆ ಬದುಕುವ ಮುಂದಿನ ಆರೋಗ್ಯದ ಆಶಾವಾದವಾದರೂ ಎಲ್ಲಿಂದ ಬರಬೇಕು?

ಪ್ರಗತಿಯ ಹೆಸರಿನಲ್ಲಿ ಅಣುಸ್ಥಾವರ, ಕಾರ್ಖಾನೆಗಳು ಸ್ಥಾಪನೆಯಾಗಿ ವಿಷಾನಿಲವನ್ನು ಉಗುಳುತ್ತಿವೆ. ವಿಷ ಪೂರಿತ ಕೀಟನಾಶಕಗಳಿಂದಾಗಿ ಭೂಮಿ ಮೇಲಿನ ಜೀವರಾಶಿಗಳಾದ ಬಾಳೆಗಿಡ, ವೀಳ್ಯದೆಲೆ, ಯಾಲಕ್ಕಿ ಇವಲ್ಲದೆ; ಮಿಣುಕು ಹುಳುಗಳ ಸಂಖ್ಯೆ ಕೂಡ ಕಡಿಮೆಯಾಗಿದೆ. ಹಣ್ಣಡಿಕೆ ಚೇಳು, ಪುಟ್ಟ ಜಾತಿಯ ಇರುವೆಗಳು ಕಣ್ಮರೆಯಾಗಿ, ಪಾತರಗಿತ್ತಿಗಳು ನಾಮವಶೇಷವಾಗುತ್ತಿವೆ.

ಪಾಚಿಯಿಂದ ಆಲದಂತಹ ಗಿಡ-ಮರಗಳನ್ನು , ಹುಳು ಹುಪ್ಪಟೆಯಿಂದ, ಪ್ರಾಣಿ-ಪಕ್ಷಿಗಳನ್ನು ತುಂಬಿಕೊಂಡ ಪಶ್ಚಿಮ ಘಟ್ಟ ಎದುರಿಸುತ್ತಿರುವ ಅಪಾಯಗಳನ್ನು ಕುರಿತು ಮಾರ್ಮಿಕವಾದ ಚರ್ಚೆಯನ್ನು 'ಇರುವುದೊಂದೇ ಭೂಮಿ' ಕೃತಿ ಮಾಡುತ್ತದೆ.

ಈ ಕೃತಿಯಲ್ಲಿ ಪರಿಸರ ನಾಶ ಮತ್ತು ಮಾಲಿನ್ಯದ ಬಗ್ಗೆ ಸಮುದಾಯಗಳು ಪ್ರಶ್ನಿಸುವುದನ್ನು ಲೇಖಕರು ಹುಡುಕುವುದಿಲ್ಲ. ಏಕಮುಖವಾಗಿ ಚರ್ಚಿಸುತ್ತಾರೆ. ಈ ಏಕ ಮುಖ ಚರ್ಚೆಯಲ್ಲಿ ಸಂಘ ಸಂಸ್ಥೆಗಳಂತಹ ಅನೇಕ ಸಮುದಾಯಗಳು, ಜನ ವರ್ಗಗಳು ಪರಿಸರ ನಾಶ ಮತ್ತು ಮಾಲಿನ್ಯದ ಬಗ್ಗೆ ಎತ್ತುವ ಪ್ರಶ್ನೆಗಳ ಚರ್ಚೆ ಇಲ್ಲದ್ದು ಕೊರತೆಯಾಗಿದೆ. ಇಂದು ಪರಿಸರ ರಕ್ಷಣೆಯ ಧ್ವನಿ ಎತ್ತುವವರು ಮಧ್ಯಮ ವರ್ಗದವರಾಗಿದ್ದಾರೆ. ಯಾಕೆ ಎಂಬ ಬಗ್ಗೆ ಸೂಕ್ಷ್ಮವಾದ ಚರ್ಚೆ ಸಾಧ್ಯವಾಗಬೇಕಿದೆ.

350 ವರ್ಷಗಳ ಹಿಂದೆಯೇ "ಅಮೃತದೇವಿ" ಎಂಬ ಮಹಿಳೆ ಚಿಪ್ಕೋ ಚಳುವಳಿಯ ಮೂಲಕ ಮರ ಅಪ್ಪಿ ಅವುಗಳಿಗಾಗಿ ಪ್ರಾಣ ನೀಡಿ, ಪರಿಸರ ರಕ್ಷಣೆಯ ಚಳುವಳಿಗಳಿಗೆ ನಾಂದಿ ಹಾಡಿದಳು. ಮುಂದೆ ಈ ಚಿಪ್ಕೋ ಚಳುವಳಿಯ ಹೆಸರಿನಲ್ಲೆ ನಾನಾ ಪರಿಸರ ಚಳುವಳಿಗಳು ಹುಟ್ಟಿಕೊಂಡವು. ಇಂದು 'ಗ್ರೀನ್ ಪೀಸ್' ನಂತಹ ಅಂತಾರಾಷ್ಟ್ರೀಯ ಸಂಸ್ಥೆಗಳು ಈ ಪರಿಸರ ರಕ್ಷಣೆಯ ಜವಾಬ್ದಾರಿ ಹೊತ್ತು ಮುನ್ನಡೆಯುತ್ತಿವೆ. ಇಂತಹ ಚಳುವಳಿಗಳ ನೇತಾರರಂತೆ ಸುಂದರ ಲಾಲ್ ಬಹುಗುಣರಿದ್ದಾರೆ. ಇವರ ಸಮಾಜ ಮತ್ತು ಪ್ರಕೃತಿ ಪರಿಸರ ಕುರಿತಾದ ತಿಳುವಳಿಕೆ ಅಪೂರ್ವವಾದುದು.

> "ನಿಸರ್ಗದ ತೊಟ್ಟಿಲಲ್ಲಿ ದೇವರು ಮಾನವನ್ನು ಸೃಷ್ಟಿಸಿದ. ಆದರೆ ಈ ಮಾನವ ತೊಟ್ಟಿಲನ್ನೇ ಚಿಂದಿ ಚಿಂದಿ ಮಾಡಿದ. ಉಣಬಡಿಸ ಬಂದ ಪ್ರಕೃತಿ ಮಾತೆಯ ಶೀಲಭಂಗ ಮಾಡಿ. ರಾಡಿ ಮಾಲಿನ್ಯದ ರಕ್ಕಸನನ್ನು ಸೃಷ್ಟಿಸಿದ ... ಈವರೆಗೆ ಆಹಾರ, ಬಟ್ಟೆ ಹಾಗೂ ವಸತಿ ಇವು ಮೂರು ಮಾತ್ರ ಮೂಲಭೂತ ಆವಶ್ಯಕತೆಗಳಾಗಿದ್ದವು. ಈಗ ಇವಕ್ಕೆಲ್ಲ ಮೂಲಾಧಾರವಾದ ನೀರು ಮತ್ತು ಗಾಳಿಗೆ ಅಭಾವ ಉಂಟಾಗಿದೆ. ಜೀವಗೋಲ ಸಮತೋಲವಾಗಿದ್ದಷ್ಟು ದಿನ ನಮಗೆ ಪ್ರಾಣವಾಯು ಅಷ್ಟೊಂದು ಮುಖ್ಯ ಅನಿಸಿರಲಿಲ್ಲ. ಆದರೆ ಈಗ ನಾವು ತಾಂತ್ರಿಕ ಗೋಲದಲ್ಲಿದ್ದೇವೆ. ಇಡೀ ಜೀವರಾಶಿಗೆ ಬೇಕಾದ ಪ್ರಾಣವಾಯುವಿನ ಹದಿನೈದು ಪಟ್ಟು ಹೆಚ್ಚು ವಾಯುವನ್ನು ಕಾರ್ಖಾನೆಗಳೇ ಕಬಳಿಸುತ್ತಿವೆ. ಕಾರ್ಖಾನೆಗಳ ಸಂಖ್ಯೆ ಹೆಚ್ಚುತ್ತಿದೆ. ಶುದ್ಧ ಗಾಳಿಯನ್ನು ಉತ್ಪಾದಿಸುವ ನೈಸರ್ಗಿಕ ಯಂತ್ರ [ವೃಷ]ಗಳ ಸಂಖ್ಯೆ ಕ್ಷೀಣಿಸುತ್ತಿದೆ...."“78”


ಹೀಗೆ ಹೃದಯದಾಳಕ್ಕೆ ಇಳಿಯುವಂತೆ ಮಾತಾಡುತ್ತ ಬಹುಗುಣ ಅಭಿವೃದ್ಧಿಯ ಅರ್ಥಕ್ಕೆ ಕಿಚ್ಚು ಹಚ್ಚುತ್ತಾರೆ.

> "ಪ್ರತಿ ವರ್ಷ ಈ ಭರತಖಂಡದ ಆರು ಕೋಟಿ ಟನ್ ಮೇಲ್ಪದರದ ಮಣ್ಣು ತೊಳೆದು ಹೋಗುತ್ತಿದೆ. ಜನಸ್ತೋಮಕ್ಕೆ ಆಹಾರ ಮತ್ತು ಬಟ್ಟೆ ಒದಗಿಸುವ ಶಕ್ತಿಯೇ ನೆಲದಲ್ಲಿ ಕ್ಷೀಣವಾಗುತ್ತಿದೆ. ಕ್ರಿ.ಶ. 2025ರ ಸುಮಾರಿಗೆ ನಮ್ಮ ದೇಶಕ್ಕೆ ಈಗಿಗಿಂತ ಮೂರು ಪಟ್ಟು ಹೆಚ್ಚು ನೀರು ಬೇಕಾಗುತ್ತದೆ. ಅಣೆಕಟ್ಟು ನಿರ್ಮಿಸಿದ್ದೆಲ್ಲ ವೈಫಲ್ಯಗಳ ಮಡುವಾಗುತ್ತಿವೆ. ಬಿದ್ದ ಮಳೆ ನೀರೆಲ್ಲ ಮಣ್ಣನ್ನು ಬಳಿದುಕೊಂಡು ಸಾಗರ ಸೇರುತ್ತಿದೆ. ಇವೆಲ್ಲ ಅನಿಷ್ಟಗಳನ್ನು ತಡೆಯಬೇಕೆಂದರೆ ಅರಣ್ಯ ಬೆಳೆಸುವುದೇ ಏಕೈಕ ಮಾರ್ಗ. ಅರಣ್ಯವೆಂದರೆ ಆಮ್ಲಜನಕದ ಬ್ಯಾಂಕು. ನದಿಗಳಿಗೆ ಜನ್ಮ ಕೊಡುವ ತಾಯಿ. ಮಣ್ಣನ್ನು ಉತ್ಪಾದಿಸುವ ಯಂತ್ರ...." "79"

ಬಂಜರು ಭೂಮಿ, ಅರಣ್ಯನಾಶದಿಂದ ಪ್ರಾಣಿ-ಪಕ್ಷಿ, ಕ್ರಿಮಿ-ಕೀಟಗಳು ಹೇಳ ಹೆಸರಿಲ್ಲದಂತಾಗಿರುವ ಸಂದರ್ಭದಲ್ಲಿ ಪರಿಸರದ ಪ್ರಜ್ಞೆಯ ಬಹುಗುಣರು 1986 ರಲ್ಲಿ ನ್ಯೂಯಾರ್ಕ್‌ನ ಮೊಹಾಂಕೊ ಪರ್ವತದಲ್ಲಿ ನಡೆದ ಪಶ್ಚಿಮ ಜರ್ಮನಿಯ ಗ್ರೀನ್ ಪಾರ್ಟಿ ಸಮಾವೇಶದಲ್ಲಿ ಹೀಗೆ ಹೇಳುತ್ತಾರೆ.

> "ನಿಸರ್ಗ ಸೃಷ್ಟಿಯ ಕಣ ಕಣದಲ್ಲೂ ಜೀವ ಇದೆ. ನಾವು ಈ ಜೀವಾತ್ಮವನ್ನು ಗೌರವಿಸಬೇಕು. ನಿಸರ್ಗದೊಂದಿಗೆ ನಾವು ಮಾತೆ-ಮಗುವಿನ ತಾದಾತ್ಮ್ಯ ಬೆಳಸಿಕೊಳ್ಳಬೇಕು. ಇಂದಿನ ಅಗತ್ಯಗಳಿಗೆಂದೇ ನಿಸರ್ಗ ಸಂಪತ್ತನ್ನು ಹೀಗೆ ಕೊಚ್ಚಿ ಹಾಕುತ್ತ ಹೋದರೆ ದಾರಿದ್ರ್ಯ ಮಾಲಿನ್ಯ ಹಾಗೂ ಯುದ್ಧ ಮೂರೂ ಒಂದಾಗಿ ಜಗತ್ತನ್ನೇ ಬಲಿ ತೆಗೆದುಕೊಳ್ಳುತ್ತವೆ....." "80"

ಬಹುಗುಣರಂತಹ ಪರಿಸರವಾದಿಗಳಿರುವ ತಿಳುವಳಿಕೆ, ನಮ್ಮನ್ನಾಳುವ ವರ್ಗದವರಲ್ಲಿ ಇದ್ದೂ ಇಲ್ಲದಂತಾಗಿದೆ. ಯಾಕೆಂದರೆ ಇಂತಹ ಪರಿಸರವಾದಿಗಳ ಪರಿಸರ ಚಳುವಳಿಗಳ ಧ್ವನಿ ಅಂತರಾಷ್ಟ್ರೀಯ ರಾಜಕಾರಣಕ್ಕೆ ಹಣಕಾಸುನಿಧಿಗಳಿಗೆ, ಬಂಡವಾಳಶಾಹಿಗಳಿಗೆ ಕೇಳಿಸದಾಗಿದೆ. ಈ ಪರಿಸರ ಇಂತಹ ಚಕ್ರವ್ಯೂಹದೊಳಗೆ ಸಿಕ್ಕಿಕೊಂಡಿದೆ.



ಈ ಚಕ್ರವ್ಯೂಹದಲ್ಲಿ ಬುಡಕಟ್ಟು, ಸಮುದಾಯ, ಪರಿಸರವಾದಿ ಮಧ್ಯಮವರ್ಗ, ಸರ್ಕಾರ, ಬಂಡವಾಳ ಶಾಹಿ ಮತ್ತು ಅಂತರಾಷ್ಟ್ರೀಯ ರಾಜಕೀಯ, ಹಣಕಾಸು ನಿಧಿಗಳಂತಹ ಆರು ಗುಂಪುಗಳಿವೆ. ಇವು ಈ ನಿಸರ್ಗ ಪರಿಸರವನ್ನು ಸುತ್ತುವರಿದಿವೆ. ಇವುಗಳಿಂದ ನಿಸರ್ಗ ಪರಿಸರ ನಿಬಂಧಿತವಾಗಿದೆ.

ಇಲ್ಲಿಯ ವೃತ್ತಗಳಲ್ಲಿ ಬರುವ ಬುಡಕಟ್ಟು ಮತ್ತು ಸಮುದಾಯಗಳು ನಿಸರ್ಗಾಶ್ರಯ ಜೀವಿಗಳು ಮತ್ತು ನಿಸರ್ಗದ ಪ್ರೀತಿ ತಿಳುವಳಿಕೆಯುಳ್ಳವರು. ಇವರಿಗೆ ಈ ಪರಿಸರವನ್ನುಳಿದು ಇನ್ನಿತರ ಸರ್ಕಾರ, ಬಂಡವಾಳ ಶಾಹಿ ಅಂತರಾಷ್ಟ್ರೀಯ ರಾಜಕಾರಣ ಹಣಕಾಸು ನಿಧಿಗಳ ರೀತಿ, ನೀತಿ, ಧೋರಣೆಯ ತಿಳುವಳಿಕೆ ಇಲ್ಲ. ಪರಿಸರವಾದಿ ಮಧ್ಯಮವರ್ಗ, 'ಮಧ್ಯಗುಂಪು ' ಇವರಿಗೆ ತನ್ನ ಅಕ್ಕಪಕ್ಕ ಗುಂಪಿನ ಅವರ ಗ್ರಹಿಕೆ, ವರ್ತನೆಗಳ ತಿಳುವಳಿಕೆಯುಳ್ಳವರಾಗಿದ್ದು ; ಇದು ಸಂಕೀರ್ಣ ಸ್ಥಿತಿಯ ಗುಂಪಾಗಿದೆ. ಅಂತರಾಷ್ಟ್ರೀಯ ರಾಜಕಾರಣ, ಹಣಕಾಸು ನಿಧಿಗಳ ಗುಂಪಿಗೆ ಬುಡಕಟ್ಟು , ಸಮುದಾಯ, ಮಧ್ಯಮವರ್ಗ ಗುಂಪುಗಳ ದುರ್ಬಲತೆಯ ಅರಿವಿನಿಂದ ಅವರನ್ನು ತುಷ್ಟಿಕರಿಸಿ ಸಂಪೂರ್ಣ ತಮ್ಮ ಮುಷ್ಠಿಯಲ್ಲಿಟ್ಟಿವೆ. ಅಂತಾರಾಷ್ಟ್ರೀಯ ರಾಜಕಾರಣ, ಬಂಡವಾಳ ಶಾಹಿ, ಸರ್ಕಾರಗಳ ಪ್ರತಿಯೊಂದರ ಕೈ ಮತ್ತೊಂದರ ಜೋಬಿನಲ್ಲಿರುವುದನ್ನು ಕಾಣುತ್ತೇವೆ.

ಇಂತಹ ನಿಯಂತ್ರಣ, ಹಿಡಿತಗಳನ್ನೊಳಗೊಂಡ ಈ ಗುಂಪುಗಳನ್ನುಳ್ಳ ಈ ನಕ್ಷೆಯನ್ನು ಹೀಗೆ ವಿವರಿಸಬಹುದುಃ ಈ ನಕ್ಷೆಯ ಆರನೇ ವೃತ್ತದ ಅಂತರಾಷ್ಟ್ರೀಯ ರಾಜಕಾರಣ, ಹಣಕಾಸುನಿಧಿಗಳು, ಬಂಡವಾಳ ಶಾಹಿಗಳು, ಸರ್ಕಾರಗಳ ನಿಯಂತ್ರಿಸುತ್ತವೆ ಮತ್ತು ತಮ್ಮ ಹಿಡಿತದಲ್ಲಿಟ್ಟುಕೊಳ್ಳುತ್ತವೆ. ಐದನೆ ವೃತ್ತದ ಬಂಡವಾಳ ಶಾಹಿಗಳು ತಮ್ಮ ಸ್ವಾಯತ್ತತೆಗಾಗಿ ಸರ್ಕಾರವನ್ನೆ ತಮ್ಮ ಹಿಡಿತದಿಂದ ನಿಯಂತ್ರಿಸುತ್ತದೆ. ಆದರೆ ಸರ್ಕಾರ ಈ ಎರಡು ಗುಂಪುಗಳ ಹಿಡಿತಕ್ಕೆ ಸಿಕ್ಕಿ ತನ್ನ ಹಿಡಿತದಲ್ಲಿರುವ ಮಧ್ಯಮವರ್ಗ, ಸಮುದಾಯ, ಬುಡಕಟ್ಟು, ಗುಂಪುಗಳ ಮೇಲೆ ಅಂತರಾಷ್ಟ್ರೀಯ ರಾಜಕಾರಣ, ಹಣಕಾಸುನಿಧಿಗಳ,

ಬಂಡವಾಳಶಾಹಿಗಳ ಪ್ರಭಾವವನ್ನು ಪರೋಕ್ಷವಾಗಿ ಪರಿಣಾಮಬೀರುತ್ತದೆ. ಈ ರೀತಿಯಲ್ಲಿ ಇಲ್ಲಿರುವ ಎಲ್ಲ ಪ್ರಭುತ್ವ ಗುಂಪುಗಳು ದುರ್ಬಲಗುಂಪುಗಳನ್ನು ದುಸ್ಥಿತಿಗೊಳಪಡಿಸುತ್ತವೆ. ಇಂತಹ ಪರಿಸ್ಥಿತಿಯಿಂದ ಅಂತಿಮ ಪರಿಣಾಮ ನಿಸರ್ಗ ಪರಿಸರದ ಮೇಲಾಗಿ ಅದು ಸರ್ವನಾಶವಾಗುತ್ತಿದೆ.

ಸರ್ಕಾರದ ಇಬ್ಬಂದಿತನದ ನೀತಿ 'ಮನೆಗೆ ಮಾರಿ ಹೆರರಿಗೆ ಉಪಕಾರಿ' ಎಂಬಂತಿದೆ. ಇದನ್ನು ಮನಗಂಡ ಪರಿಸರವಾದಿ ಮಧ್ಯಮವರ್ಗ, ಸಮುದಾಯ, ಬುಡಕಟ್ಟುಗಳು ಹಾಕುತ್ತಿರುವ ಪ್ರಶ್ನೆಗಳು ಸರ್ಕಾರ, ಬಂಡವಾಳಶಾಹಿ, ಅಂತಾರಾಷ್ಟ್ರೀಯ ರಾಜಕಾರಣ ಹಣಕಾಸು ನಿಧಿಗಳ ವ್ಯೂಹವನ್ನು ತಾಕುತ್ತಿಲ್ಲ. ಹಾಗಾಗಿ ಮಧ್ಯಮವರ್ಗ, ಮತ್ತು ಬುಡಕಟ್ಟು ಗುಂಪುಗಳು ತುಂಬ ಅಸಹಾಯಕ ಸ್ಥಿತಿಯ ಗುಂಪುಗಳಾಗಿವೆ. ಈ ವರ್ಗಗಳ ತಳಮಳ ಸರ್ಕಾರಕ್ಕೆ ಅರಿವಾದರೂ ಅರಿಯದಂತೆ ಕಾನೂನು ನಿಯಮಗಳನ್ನು ಮಾಡಿದೆ. ಇದರಿಂದ ಬುಡಕಟ್ಟುಗಳು ತಮ್ಮನ್ನು ತಮ್ಮ ತಾಣಗಳಿಂದ ಎತ್ತಂಗಡಿ ಮಾಡುತ್ತಿರುವ ಸರ್ಕಾರದ ನೀತಿ ನಿಯಮಗಳಿಂದ ಕಂಗಾಲಾಗಿವೆ. ಪರಿಸರವಾದಿ ಮಧ್ಯಮವರ್ಗ ಈ ನಕ್ಷೆಯ ಎಲ್ಲ ಗುಂಪುಗಳ ನಡುವೆ ಸಿಕ್ಕಿಕೊಂಡಿದೆ. ಇವುಗಳ ವಿರುದ್ಧ ಧ್ವನಿ ಎತ್ತುವ ಪರಿಸರವಾದಿ ಮಧ್ಯಮವರ್ಗಗಳೊಡನೆ ಸಮುದಾಯ, ಬುಡಕಟ್ಟುಗಳಂತಹ ಇತರ ಗುಂಪುಗಳು ಕೈಜೋಡಿಸಿ ಭೂಮಿಯ ಪರಿಸರ ರಕ್ಷಣೆಗೆ ಪ್ರತ್ಯಕ್ಷ ಪರೋಕ್ಷ ಹೋರಾಟಕ್ಕೆ ಭಾಗಿಯಾಗುವ ದೃಢ ನಿಶ್ಚಯ ಒಂದೆ ಪರಿಸರಕ್ಕೆ ಶ್ರೀ ರಕ್ಷೆಯಾಗಿವೆ.

ಇದಕ್ಕಾಗಿ ಸರ್ಕಾರ, ಬಂಡವಾಳಶಾಹಿ, ಅಂತಾರಾಷ್ಟ್ರೀಯ ಹಣಕಾಸು ನಿಧಿ ರಾಜಕಾರಣಗಳ ಚಕ್ರವ್ಯೂಹವನ್ನು ಭೇದಿಸುವ ಪರಿಸರ ತಿಳುವಳಿಕೆ ಅತ್ಯಗತ್ಯವಾಗಿದೆ. ಇದರ ನಿರೀಕ್ಷಣೆಯೇ 'ಬಂತು 29ನೇ ದಿನ' ಲೇಖನದ 29ನೇ ದಿನ. ಈ 29 ದಿನಗಳವರೆಗೆ ನಡೆದ ಚಟುವಟಿಕೆಗಳೇ ಇದುವರೆಗೆ ಚರ್ಚಿಸಿದ ವಿಷಯಗಳು. ಈ ಲೇಖನವು ಮೊದಲೆ ಎತ್ತಿದ " ನಮ್ಮ ಸೌಕರ್ಯಗಳು ಹೆಚ್ಚುತ್ತ ಹೋಗಬೇಕೆ? ಅಥವಾ ಪ್ರಗತಿಯಾದದ್ದೆ ಸಾಕೆಂದು ಏಳಿಗೆಯನ್ನು ಸ್ಥಗಿತಗೊಳಿಸಬೇಕೆ?" ಎಂಬ ಪ್ರಶ್ನೆಗಳಲ್ಲಿ ಇಂದು ನಮ್ಮದು ಸೌಕರ್ಯದ ಹೆಚ್ಚಳವಾಗಲಿ, ಏಳಿಗೆಯ ಸ್ಥಗಿತವಾಗಲಿ ಬೇಕಾಗಿಲ್ಲ. ಇವೆರಡನ್ನು ಸರಿದೂಗಿಸಿ ಸಮತೋಲನ ಸ್ಥಿತಿಯನ್ನು ಕಾಪಾಡಿಕೊಂಡು ಹೋಗುವ ಪರಿಸರ ವ್ಯವಸ್ಥೆ ಎನ್ನೋಣವೇ? ಸ್ವಾತಂತ್ರ್ಯ ಸಮಾನತೆ, ಮಾನವೀಯತೆಗಳಿಂದ ಸರ್ವ ಜೀವರಾಶಿಗಳೊಡನೆ ಸಹಬಾಳ್ವೆಗೆ ಸಾಧ್ಯವಾಗುವ ಪರಿಸರ ಸೃಷ್ಟಿಗೆ ಯಾರು ಹೊಣೆ?

ಇರುವುದೊಂದೇ ಭೂಮಿ ಕೃತಿಯು ಇಂತಹ ನಾನಾ ಪ್ರಶ್ನೆಗಳನ್ನೆತ್ತಿ ಈ ಸಮಾಜದ- ಓದುಗ, ವರ್ಗದ ತೀರ್ಮಾನಕ್ಕೆ ಬಿಟ್ಟಿದೆ. ಈ ಕೃತಿ ಅಭಿವ್ಯಕ್ತಿಯಲ್ಲಿ ವಿಜ್ಞಾನದ ಅಂಶಗಳನ್ನು ಕನ್ನಡದಲ್ಲಿ ಹೃದಯ ಸ್ಪರ್ಶಿಯಾಗಿ ಬಳಸಿಕೊಂಡಿದೆ.

ಸಮಾರೋಪ

ಈ ಅಧ್ಯಯನ ಸಂದರ್ಭದಲ್ಲಿ ಬಂದ ತೊಡಕುಗಳು , ಎದ್ದ ಪ್ರಶ್ನೆಗಳು ಇನ್ನು ಅನೇಕ ರೀತಿಯಲ್ಲಿ ಕಾಡತೊಡಗಿವೆ. ಇಲ್ಲಿನ ಕೃತಿಗಳ ಅಧ್ಯಯನ ಮಾಡುವಾಗ ಅವುಗಳ ಲೇಖಕರು ಆಯ್ದುಕೊಂಡ ವಸ್ತು, ಅವರ ಶೈಲಿ, ನಿಲುವುಗಳನ್ನು ಕುರಿತು ಇಲ್ಲಿ ಚರ್ಚಿಸಬಹುದು. ಪೂರ್ಣ ಚಂದ್ರ ತೇಜಸ್ವಿ ಡಾ|| ಚಂದ್ರಶೇಖರ ಕಂಬಾರ, ಎಚ್.ಎಸ್.ಶಿವಪ್ರಕಾಶ, ನಾಗೇಶ ಹೆಗ್ಗಡೆ, ಹಿ.ಚಿ. ಬೋರಲಿಂಗಯ್ಯ ಮೊದಲಾದವರು ಇಲ್ಲಿಯ ಲೇಖಕರು. ಇವರು ತಮ್ಮ ಸಂವೇದನೆಯನ್ನು ಅಭಿವ್ಯಕ್ತಿಸಲು ಆಯ್ಕೆ ಮಾಡಿಕೊಂಡ ಪ್ರಕಾರಗಳು ಹಾಗೂ ವಸ್ತುಗಳು ತುಂಬ ವಿಭಿನ್ನವಾದವು. ಕಂಬಾರರು ಇಂದಿನ ಸಮಸ್ಯೆಗಳನ್ನು ಜಾನಪದ ವಸ್ತುವಿನ ಒಳಗೇ ನಿರ್ವಹಿಸಲು ಯತ್ನಿಸುತ್ತಾರೆ. ಕುಟುಂಬ ಸಂಬಂಧಗಳ ನೆಲೆಯಲ್ಲಿ ಬೆಳೆಯುವ 'ಪುಷ್ಪರಾಣಿ' ಯಂತಹ ಕಲಾಕೃತಿಯನ್ನು ಕಟ್ಟುವುದು ನೋಡಿದರೆ ಇವರ ಸೃಜನಶೀಲತೆ ಬೆಳೆದು ಬಂದ ಜಾನಪದದ ಜಾಯಮಾನ ಸ್ಪಷ್ಟವಾಗುತ್ತದೆ. ಇದಕ್ಕೆ 'ಪುಷ್ಪರಾಣಿ' ನಾಟಕದ ಭಾಷೆ, ನಿರೂಪಣಶೈಲಿ ಇವುಗಳೂ ಸಾಕ್ಷಿಯಾಗಿವೆ. ಆದರೆ ತೇಜಸ್ವಿಯವರ ಸೃಜನಶೀಲ ಜಾಯಮಾನ ವೇ ಬೇರೆ. ಇವರು ತಮ್ಮ ಕಲಾಕೃತಿಗೆ ಪ್ರಸ್ತುತ ಕಾಲದ ವಿಷಯ, ವಸ್ತು, ಅನುಭವಗಳನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಇವರ ಹೆಚ್ಚಿನ ಕೃತಿಗಳು ತರುಣರ ಹಾಗೂ ಮಕ್ಕಳ ದೃಷ್ಟಿಕೋನದ ನೆಲೆಯಲ್ಲಿ ರಚನೆಗೊಂಡಿವೆ. ಉದಾಃ 'ಜುಗಾರಿ ಕ್ರಾಸ್', 'ಪರಿಸರದ ಕಥೆ', 'ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು' ತೇಜಸ್ವಿಯವರಿಗೆ ಪರಿಸರದಲ್ಲಿ ಆಗುತ್ತಿರುವ ಬದಲಾವಣೆ ಬಗ್ಗೆ ಬೌದ್ಧಿಕ ತಿಳುವಳಿಕೆ ಇದೆ. ವರ್ತಮಾನ ಬದುಕಿನಲ್ಲಿ ನಡೆಯುವ ಚಟುವಟಿಕೆಗಳ ಅರಿವಿದೆ ಮತ್ತು ಲೇಖಕನಾಗಿ ಪಡೆದ ಅನುಭವ ಜಗತ್ತು ಇದೆ. ಅವರು ಇವೆರಡನ್ನು ಸೇರಿಸಿ ಬರೆಯುತ್ತಾರೆ. 'ತಿಳುವಳಿಕೆ' ಮತ್ತು 'ಅನುಭವ' ಇವೆರಡನ್ನು ಸಂಯೋಗಗೊಳಿಸುತ್ತಾರೆ. ಅನುಭವ ಮೂಖದಿಂದ ಸೃಷ್ಟಿಯಾದ ಕತೆಗಳೆಂದರೆ 'ಚೀಂಕ್ರ ಮೇಸ್ತ್ರಿ' , 'ಅಕ್ಕಮ್ಮ ಹೇಳಿದ ಕಥೆ' ಇತ್ಯಾದಿ. ಅನುಭವ ಕಲ್ಪಕತೆಗಳ ಜತೆ ಬೌದ್ಧಿಕ ನೆಲೆ ಸೇರಿ ಸೃಷ್ಟಿಯಾದು ಕೃತಿಯೆಂದರೆ 'ಕರ್ವಾಲೊ' ಆದರೆ ಬೌದ್ಧಿಕತೆ ಜಾಸ್ತಿಯಾದಾಗ ಅನುಭವ ಪ್ರಮಾಣ ಕಡಿಮೆಯಾಗಿ 'ಜುಗಾರಿ ಕ್ರಾಸಿ' ನಂತಹ ಕೃತಿ ಹುಟ್ಟುತ್ತದೆ ಎನಿಸುತ್ತದೆ. ಒಟ್ಟಾರೆ ಬೌದ್ಧಿಕ, ಅನುಭವಿಕ ಜಗತ್ತುಗಳೆಂಬ ಎರಡು ಶಕ್ತಿಗಳ ಚಕಮಕಿಯಲ್ಲಿ ಹಾಗೂ ಹುಟ್ಟುವ ಅವರ ಶೈಲಿ ವಿಶಿಷ್ಟವಾದುದಾಗಿ ಓದುಗರನ್ನು ಮುಟ್ಟುವುದು.

ನಾಗೇಶ ಹೆಗ್ಗಡೆಯವರ 'ಇರುವುದೊಂದೇ ಭೂಮಿ' ಕೃತಿಯ ಲೇಖನಗಳಲ್ಲಿ ಸೃಜನ ಶೀಲ ಲೇಖಕನಿಗಿರುವ ಆರ್ದ್ರತೆ, ಆಪ್ತತೆ ಇದೆ. ಇವು ಕೇವಲ ಒಬ್ಬ ವಿಜ್ಞಾನಿ ಬರೆದ ಬುದ್ಧಿಪೂರ್ವಕ ರಚನೆಗಳಲ್ಲ. ಒಬ್ಬ ಕ್ರಿಯಾಶೀಲ ಲೇಖಕನ ರಚನೆಗಳು. ವಿಜ್ಞಾನಾಂಶಗಳನ್ನು ಕನ್ನಡ ಬರವಣಿಗೆಯಲ್ಲಿ ಪಕ್ವಗೊಳಿಸಿ ಹಿಡಿದಿಟ್ಟು ಕನ್ನಡ ಭಾಷೆಯ ವೈಶಿಷ್ಟ್ಯವನ್ನು ಮೆರೆಯುವ ಬರಹಗಳು. ಇವರ ಲೇಖನಗಳನ್ನು ವಿಜ್ಞಾನವು ಮಾನವೀಕರಣಗೊಂಡ ಬರಹಗಳು ಎನ್ನಬಹುದು. ಆದರೆ ಈ ಲೇಖನಗಳು ಕರ್ವಾಲೊ, ಮಲೆಗಳಲ್ಲಿ ಮದುಮಗಳು, ಜುಗಾರಿ ಕ್ರಾಸ್ ನಂತಹ ಕೃತಿಗಳ ಸ್ವರೂಪವಲ್ಲವಷ್ಟೆ. ಕಾರಣ ಸೃಜನಶೀಲ ಕೃತಿಗಳಿಗಿರುವ ನಾನಾ ಹಲವು ಆಯಾಮಗಳು ಈ ಲೇಖನಗಳಿಗಿರುವುದಿಲ್ಲ. ಆದರೆ ಈ ಪರಿಸರ ಪರಿಕಲ್ಪನೆಯನ್ನು ಹೆಚ್ಚು ಜನರಿಗೆ ಈ ಲೇಖನಗಳು ಜರೂರಾಗಿ ಮುಟ್ಟಿಸುತ್ತವೆ. ಜನರಿಗೆ ಬಹುಬೇಗ ತಿಳುವಳಿಕೆ ಮೂಡಿಸುವ ಸಾಹಿತ್ಯವೆಂದರೆ ಈ ವೈಚಾರಿಕ ಲೇಖನಗಳು.

'ಕಾಡು ಕಾಂಕ್ರೀಟ್ ಮತ್ತು ಜಾನಪದ', 'ಗಿರಿಜನ ನಾಡಿಗೆ ಪಯಣ' ದಂತಹ ಕೃತಿಗಳು ಗಿರಿಜನರ ಅನುಭವ ಬದುಕುಗಳನ್ನು ದಾಖಲಿಸುತ್ತವೆ. ಆದರೆ ಇವು ಅಂತರಾಷ್ಟ್ರೀಯ ರಾಜಕಾರಣ, ಆರ್ಥಿಕತೆಗಳ ನೆಲೆಯಲ್ಲಿ ಪರಿಸರ ಹಾಳಾಗುತ್ತಿರುವಂತಹವುದರ ಮೇಲೆ ಗಮನ ಹರಿಸುವುದಿಲ್ಲ. ಈ ಕ್ರಿಯೆಯನ್ನು ತೇಜಸ್ವಿಯವರು ತಮ್ಮ 'ಜುಗಾರಿ ಕ್ರಾಸ್' ಕಾದಂಬರಿಯಲ್ಲಿ ಮಾಡುತ್ತಾರೆ. ಯಾವುದೋ ಒಂದು ಫೋನ್ ತಂತಿ ಕಂಬಕ್ಕೆ ಸಿಕ್ಕಿಕೊಂಡಿದ್ದಕ್ಕೆ ಒಬ್ಬ ಇಡೀ ಊರನ್ನೆ ಬಿಟ್ಟು ಹೋಗುವುದನ್ನು ಇಲ್ಲಿ ನೆನೆಯಬಹುದು.

ಇನ್ನೊಂದು ನೆಲೆಯಲ್ಲಿ ಈ ಪ್ರಯತ್ನವನ್ನು ಬಂಜಗೆರೆ ಜಯ ಪ್ರಕಾಶರು ತಮ್ಮ 'ಮಹೂವಾ' ಪದ್ಯದಲ್ಲಿ ಮಾಡಿರುವುದನ್ನು ಕಾಣಬಹುದು. ಹಿ.ಚಿ. ಬೋರಲಿಂಗಯ್ಯ ಅವರ ಬುಡಕಟ್ಟು ಜನರ ಅನುಭವ ತಿಳುವಳಿಕೆ ನಿಜವಾದರೂ ಅಲ್ಲಿ ಅಂತಾರಾಷ್ಟ್ರೀಯ ಸಮಸ್ಯೆಗೆ ತಳುಕುಗೊಂಡಿರುವ ಪರಿಸರದ ಸಮಸ್ಯೆಗಳ ಸಂಕೀರ್ಣತೆ ಇಲ್ಲದಿರುವುದರಿಂದ ಅವರ ಕೃತಿಯ ರಾಜಕೀಯ ಆಯಾಮ ಊನವೆನಿಸುತ್ತದೆ.

ಅಂತಾರಾಷ್ಟ್ರೀಯ ರಾಜಕಾರಣದ ತಿಳುವಳಿಕೆಯೆಂದರೆ ನವವಸಾಹತು ಶಾಹಿ ಆಗಮನ ಉದಾರಿಕರಣ ನೀತಿ, ಅಮೇರಿಕದ ನೀತಿ, ಭಾರತದ ಆಳುವವರ್ಗ ಅನುಸರಿಸುವ ನೀತಿ ಇವುಗಳೆಲ್ಲದರ ಗಾಢಸಂವೇದನೆಯಾಗಿದೆ ಎಚ್.ಎಸ್. ಶಿವಪ್ರಕಾಶ ಅವರಲ್ಲಿ ಈ ತಿಳುವಳಿಕೆ ಗಾಢವಾಗಿದೆ. ಇದಕ್ಕೆ ಸಾಕ್ಷಿ ಅವರ 'ಮಂಟೇಸ್ವಾಮಿ ಕಥಾ ಪ್ರಸಂಗ', 'ಮಾದಾರಿ ಮಾದಯ್ಯ' ಕೃತಿಗಳು. ಆದರೆ ಇವರು ಈ ತಿಳುವಳಿಕೆಯನ್ನು ಈ ಕೃತಿಗಳ ಒಂದು ಬಗೆಯಲ್ಲಿ ಮೇಲೆ ಹೇರುವುದರಿಂದ ಈ ಕೃತಿಗಳು ಆ ಭಾರವನ್ನು ಹೊರಲಾರದೆ ನಲುಗುತ್ತವೆ ಎನಿಸುತ್ತದೆ. ಇಲ್ಲಿ ನಾಟಕಕಾರನಿಗಿಂತ ಇವನ ತಿಳುವಳಿಕೆಯ ಜಗತ್ತೇ ಗೆದ್ದು ಬಿಡುತ್ತದೆ ಎನಿಸುತ್ತದೆ. ಈ ಇದೇ ಈ ಕೃತಿಗಳ ಕೊರತೆಗೆ ಕಾರಣ ಈ ಕೃತಿಗಳು ಲೇಖನಗಳಂತೆ ತಿಳುವಳಿಕೆಯ ಕೃತಿಗಳೂ ಆಗದೆ; ಸೃಜನಶೀಲ ಕೃತಿಗಳೂ ಆಗದೆ ಮಧ್ಯಂತರದಲ್ಲಿ ಹೊಯ್ದಾಡುತ್ತಿರುವುದು. ಕೇವಲ ತಿಳುವಳಿಕೆಯುಳ್ಳ ಕೃತಿಗಳಾಗಿ ತಮ್ಮ ಕಲಾಕೃತಿ ಮೌಲ್ಯವನ್ನು ಕಳೆದುಕೊಂಡು ಬಿಡುವುದು. ಹಾಗಾಗಿ ಇಂತಹ ಬೌದ್ಧಿಕ ತಿಳುವಳಿಕೆಯು ಸೃಜನಶೀಲಗೊಂಡು 'ಕರ್ವಾಲೊ' ಅಂತಹ ಕೃತಿಯಾಗಿ ಮಾಡುವುದು ಹೆಚ್ಚು ಮುಖ್ಯವಾದುದು. ಪರಿಸರ ಸಂವೇದನೆ ವೈಚಾರಿಕ ಲೇಖನಗಳಾಗಿ, ಪತ್ರಿಕಾ ಬರಹಗಳಾಗಿ ಬಂದಾಗ ಎದುರಾಗದ ಪ್ರಶ್ನೆಗಳು ಇಲ್ಲಿ ಎದುರಾಗುತ್ತವೆ. ಪ್ರಾಣಿ, ಪಕ್ಷಿ, ಸಸ್ಯಗಳ ಬಾಳಿನ ಕಥವನ್ನು ಕುರಿತು ಬರೆಯುವ ತೇಜಸ್ವಿಯವರ ಸಾಹಿತ್ಯ ಕೃತಿಗಳು ಕನ್ನಡದಲ್ಲಿ ಪರಿಸರ ಶಾಸ್ತ್ರ ಮಾನವೀಕರಣಗೊಂಡು ಜೀವನ ದರ್ಶನವಾಗಿ ಹೊರಹೊಮ್ಮುವ ರೀತಿ ಅಪೂರ್ವವಾದುದು.

ಅನುಭವ, ತಿಳುವಳಿಕೆಗಳು ಮುಪ್ಪುರಿಗೊಂಡು ಬರುವ ಲೇಖನಗಳು ಹೆಚ್ಚು ತೀವ್ರತೆಯುಳ್ಳವು. ಆದರೆ ಇದೇ ಅನುಭವ ತಿಳುವಳಿಕೆಗಳನ್ನು ಬೆರೆಸದ ಕೃತಿಗಳು ಸಮತೋಲನವನ್ನು ಕಾಪಾಡಿಕೊಳ್ಳಲಾರವು. ಇವುಗಳ ಅರ್ಥಗ್ರಹಿಕೆಗಳೂ ಸ್ಪಷ್ಟವಾಗಿರುವುದಿಲ್ಲ. ಇಂದು ಪರಿಸರ ಪರಿಕಲ್ಪನೆಯಲ್ಲಿ ಬರೆಯುತ್ತಿರುವ ತೇಜಸ್ವಿಯವರ ಕಾಲದ 'ಪರಿಸರ' ಕಲ್ಪನೆ; ಕುವೆಂಪು ಕಾಲದ ಕಾದಂಬರಿಗಳ ಪರಿಸರ ಪರಿಕಲ್ಪನೆ ಭಿನ್ನವಾಗಿದೆ. ಇದೇ ರೀತಿ ತೇಜಸ್ವಿ ಜುಗಾರಿ ಕ್ರಾಸ್ ಮುನ್ನುಡಿಯಲ್ಲಿ ಈ ಪರಿಸರದ ಅಸಮತೋಲನದ ಕಾರಣಗಳನ್ನು ನೀಡಿ ಪರಿಸರ ಕುರಿತಾದ ಸಾಹಿತ್ಯದ ಸಂಕೀರ್ಣ ಸವಾಲುಗಳನ್ನು ತೇಜಸ್ವಿ ವಿವರಿಸಿದ್ದಾರೆ. ನಿಸರ್ಗದ ಅಸಮತೋಲನಕ್ಕೆ ಕಾರಣವಾಗಿರುವ ಸಂಗತಿಗಳನ್ನು ಕಾನೂನು ನ್ಯಾಯಲಯಗಳೆ ಭೇದಿಸದಾಗಿವೆ. ಇದನ್ನು ಭೇದಿಸಲು ಎಲ್ಲ ಜನರು ಪ್ರತ್ಯಕ್ಷ ಪರೋಕ್ಷವಾಗಿ ಧ್ವನಿಗುಡಿಸಬೇಕು ಎಂದು ಲೇಖಕರು ಪರೋಕ್ಷವಾಗಿ ಹೇಳುತ್ತಾರೆ ಅನ್ನಿಸುತ್ತದೆ. ಆದರೆ ಹೀಗೆನ್ನುವ ಲೇಖಕರೆ, ಪರಿಸರದಂತಹ ಚಳುವಳಿಗಳಲ್ಲಿ ಸಕ್ರಿಯ ಪಾಲುದಾರರಾಗದೆ, ಕೇವಲ ಸಾಹಿತ್ಯಕೃತಿಗಳ ರಚನೆಯಲ್ಲಿ ತಮ್ಮ ಕ್ರಿಯಾಶೀಲತೆ ತೋರುವಲ್ಲಿ ನಿಂತುಬಿಟ್ಟಿದ್ದಾರೆ. ಆದರೆ ಶಿವರಾಮ ಕಾರಂತರ ಪರಿಸರ ಕುರಿತ ಚಿಂತನೆಗಳು ಪರಿಸರ ಚಳುವಳಿಗಳಲ್ಲಿ ಸಕ್ರಿಯವಾಗಿ ಪ್ರಸರಿಸುತ್ತಿವೆ. ಆದರೆ ಇಂತಹ ಚಳುವಳಿಗಳಲ್ಲಿ ಹರಡಿಕೊಂಡಿರುವ ಇವರ ಆಲೋಚನೆ ಚಿಂತನೆಗಳು ಸಾಹಿತ್ಯ ಕೃತಿಯ ರೂಪದಲ್ಲಿ ಮೈದಾಳುತ್ತಿಲ್ಲ. ಒಂದೆ ಪರಿಕಲ್ಪನೆಯಿಂದ ಏಕಕಾಲಕ್ಕೆ ಎರಡು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಾಗದ ಈ ಸ್ಥಿತಿಯನ್ನು ಹೇಗೆ ಅರ್ಥೈಸಿಕೊಳ್ಳುವುದು?

ತೇಜಸ್ವಿಯವರು ಮೊದಲಿನಿಂದಲೂ 'ವ್ಯಕ್ತಿ ವಿಶಿಷ್ಟತೆಯ ' ಬಗ್ಗೆ ಧ್ಯಾನಿಸಿದವರು. ಇವರು ಇನ್ನೂ, ತಮ್ಮ ಈ ಮೌಲ್ಯಕಲ್ಪನೆಯ ಹುಡುಕಾಟದ ಸ್ಥಿತಿಯಲ್ಲಿಯೇ ಇದ್ದಾರೆಯೇ? ಯಾಕೆಂದರೆ 'ಪರಿಸರ' ಸಂವೇದನೆಯ ಕೃತಿಯೆನ್ನಲಾಗುವ ಜುಗಾರಿಕ್ರಾಸ್, ಕರ್ವಾಲೊ, ಗಳಲ್ಲಿ ಕೂಡ ಸುರೇಶ-ಗೌರಿ, ಮಂಜಣ್ಣ ಕರ್ವಾಲೊ ರಂತಹ ಪ್ರಕೃತಿಯೊಳಗೆ ಬದುಕಿ ಸಮುದಾಯ ಪ್ರಜ್ಞೆಗೆ ಜಿಗಿಯಲು ಚಡಪಡಿಸುದವರು. ತಮ್ಮ ಸ್ವಂತ ನಿಲುವಿನ ಹುಡುಕಾಟದಲ್ಲಿ ತೊಡಗುವವರು. ಇಂತಹ ಕೃತಿಗಳು ಇಂದಿಗೂ

ಸೃಷ್ಟಿಯಾಗುತ್ತಿರುವುದಕ್ಕೆ ಏನು ಕಾರಣ? ತೇಜಸ್ವಿ ಇನ್ನೂ ವ್ಯಕ್ತಿ ವಿಶಿಷ್ಟತೆಯಿಂದ ಯಾವ ಆಯಾಮಗಳ ಶೋದನೆಯಲ್ಲಿದ್ದಾರೆ?

ಕಾವ್ಯ ಕಥೆ, ನಾಟಕ, ಕಾದಂಬರಿ, ವೈಚಾರಿಕ ಲೇಖನ ಇತರ ಕೃತಿಗಳ ಅಧ್ಯಯನದಲ್ಲಿ ಕಂಡು ಬಂದದ್ದೆಂದರೆ ಪ್ರತಿಯೊಂದೂ ಪ್ರಕಾರವೂ ತನ್ನದೆ ಆದ ವಿಷಯ, ವಸ್ತು ಶೈಲಿಯನ್ನೊಳಗೊಂಡಿದೆ. ಇವುಗಳಲ್ಲಿ ಒಂದರ ಸಮಸ್ಯೆ ಒಂದಕ್ಕಿಲ್ಲ. ಇವೆಲ್ಲವು ತಮ್ಮದೆ ಆದ ಚೌಕಟ್ಟನ್ನುಳ್ಳ ಕೃತಿಗಳಾಗಿವೆ. ಹಾಗಾಗಿ ಈ 'ಪರಿಸರ' ಪರಿಕಲ್ಪನೆಯ ಒಂದು ಪರಿಮಿತ ಅರ್ಥಗ್ರಹಿಕೆಯಲ್ಲಿ ಸ್ಪಷ್ಟವಾಗುವುದಿಲ್ಲ ಈ ಪರಿಕಲ್ಪನೆಯ ಅನನ್ಯತೆಯನ್ನು, ಸಂಕೀರ್ಣತೆಯನ್ನು ಒಂದು ಚೌಕಟ್ಟಿನಲ್ಲಿ ಹಿಡಿದಿಟ್ಟು ವಿಶ್ಲೇಷಿಸುವುದು ಕಷ್ಟ ಸಾಧ್ಯವಾಗಿದೆ. ಯಾಕೆಂದರೆ ಸಮಾಜ ಪರಿಸರ ನಿಸರ್ಗ ಪರಿಸರ ಇವೆರಡು ಒಂದನ್ನೊಂದು ಸೇರದೇ ಇರಲಾರವು. ಸೇರಿದರೆ ಅಲ್ಲಿ ಮತ್ತೊಂದು ಸಂಕರ ಪರಿಸರ ಸೃಷ್ಟಿಯಾಗುತ್ತದೆ. ಹಾಗಾಗಿ ಈ ಪರಿಕಲ್ಪನೆಯ ಗ್ರಹಿಕೆ ಸ್ವಲ್ಪ ತೊಡಕಾಗಿದೆ. ಮಾನವ ನಿಸರ್ಗವನ್ನು ಬಳಸಿದಿದ್ದರೆ ನಿಸರ್ಗಕ್ಕೆ ಮೌಲ್ಯವಿಲ್ಲ. ನಿಸರ್ಗ ಪರಿಸರವಿಲ್ಲದೆ ಮಾನವ ಬದುಕಿಗೆ ಅರ್ಥವಿಲ್ಲ. ಆದರೆ ಮಾನವನಿಂದ ಬಳಸಲ್ಪಟ್ಟ ನಿಸರ್ಗ ತನ್ನ ಅಸ್ತಿತ್ವವನ್ನೆ ಕಳೆದುಕೊಳ್ಳಲಾರಂಭಿಸಿದೆ. ಈ ಸಂಬಂಧಗಳ ಸಂಕೀರ್ಣತೆಯನ್ನು ಬಿಡಿಸಲು ಕಷ್ಟವಾಗಿದೆ. ಅದನ್ನು ಈ ಕೃತಿಗಳು ಶೋಧಿಸಲು ಉದ್ದೇಶಿಸಿವೆ.

ಪರಿಸರದ ನಾನಾ ಸಮಸ್ಯೆಗಳಿದ್ದರೂ ಕನ್ನಡದ ಸ್ತ್ರೀವಾದಿಗಳು ಈ ಪರಿಸರ ಪರಿಕಲ್ಪನೆಗೆ ಯಾಕೆ ಸ್ಪಂದಿಸುತ್ತಿಲ್ಲ. ಸ್ತ್ರೀವಾದಿ ಚಳುವಳಿ, ದಲಿತ ಬಂಡಾಯ ಸಾಹಿತ್ಯ ಚಳುವಳಿಗಳಿಗೆ ಯಾಕೆ ಈ ಪರಿಸರ ಪರಿಕಲ್ಪನೆಯ ಸಮಸ್ಯೆ ಯಾಕೆ ಕಾಡಿಲ್ಲ? ತಿಳಿಯದು. ಸಮುದಾಯ ಪರ ಅನಿಸಿಕೊಂಡಿರುವ ಲೇಖಕರು ಚಳುವಳಿಗಳು ಕ್ರಿಯಾಶೀಲವಾಗಿ ಬೆರೆತು ಪರಿಸರ ಚಳುವಳಿಗಳಿಗೆ ಧ್ವನಿಗೂಡಿಸಿ ಪರಿಸರ ಸಂವೇದನೆಯ ಕೃತಿಗಳನ್ನು ಸಮಾಜವಾದಿ ಸಮಾನತೆಯ ಆಶಯದಲ್ಲಿ ಕಟ್ಟುವ ಕ್ರಿಯೆಯಲ್ಲಿ ಯಾಕೆ ಮುಂದಾಗುತ್ತಿಲ್ಲ? ಇದು ತಿಳಿಯದಾಗಿದೆ. ಇಂಥ ಸ್ಥಿತಿಯಲ್ಲೇ ಕನ್ನಡದಲ್ಲಿ ತೇಜಸ್ವಿಯಂಥವರ ಕೃತಿಗಳ ಮಹತ್ವವು ತಿಳಿಯುವುದು.

ಅನುಬಂಧ

ಗ್ರಂಥ ಸೂಚಿ

1.ಸೃಜನ ಶೀಲ ಕೃತಿಗಳುಃ

1. ಕರಿಗೌಡ ಬೀಚನಹಳ್ಳಿ, **ನೆನಪಲ್ಲಿ ವಾಸ್ತವ;** ಕಲ್ಯಾಣಿ ಪ್ರಕಾಶನ, ಬೆಂಗಳೂರು 1991
2. ಕುವೆಂಪು, **ಕಾನೂರು ಹೆಗ್ಗಡತಿ;** ಪುಸ್ತಕ ಪ್ರಕಾಶನ, ಮೈಸೂರು, 1992 (ಆವೃತ್ತಿ)
3. ಕುವೆಂಪು, **ಮಲೆಗಳು ಮದುಮಗಳು,** ಉದಯರವಿ ಪ್ರಕಾಶನ, ಮೈಸೂರು 1974 (ಆವೃತ್ತಿ)
4. ಕುವೆಂಪು, **ಮಲೆನಾಡಿನ ಚಿತ್ರಗಳು;** ಉದಯರವಿ ಪ್ರಕಾಶನ, ಮೈಸೂರು ,
5. ಕುಂವಿ **ಭಗವತಿ ಕಾಡು,** ಕಲ್ಯಾಣಿ ಪ್ರಕಾಶನ, ಬೆಂಗಳೂರು, 1990
6. ಚಂದ್ರಶೇಖರ ಕಂಬಾರ **ಪುಷ್ಪರಾಶಿ** , ಅಕ್ಷರ ಪ್ರಕಾಶನ, ಹೆಗ್ಗೋಡು, 1993.
7. ಚಂದ್ರಶೇಖರ ತಾಳ್ಯ , **ಸುಡುವ ಭೂಮಿ;** ಯುವ ಹಿರಿಯ ವಿದ್ಯಾರ್ಥಿ ಸಂಘ ಎಂ.ಬಸವಯ್ಯ ವಸತಿ ಮಹಾವಿದ್ಯಾಲಯ, ಸಿರಿಗೆರೆ, 1994.
8. ಪುಟ್ಟಣ್ಣ **ನಾಕಂಡ ಮಲೆನಾಡು,** ಶಿವಮೊಗ್ಗ 1991
9. ಪೂರ್ಣ ಚಂದ್ರ ತೇಜಸ್ವಿ, **ಪರಿಸರದ ಕಥೆ,** ಪುಸ್ತಕ ಪ್ರಕಾಶನ, ಮೈಸೂರು 1991.
10. ಪೂ.ಚ.ತೇಜಸ್ವಿ, **ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು,** ಪುಸ್ತಕ ಪ್ರಕಾಶನ, ಮೈಸೂರು 1993.
11. ಪೂರ್ಣ ಚಂದ್ರ ತೇಜಸ್ವಿ **ಮಿಸ್ಸಿಂಗ್ ಲಿಂಕ್,** ಪುಸ್ತಕ ಪ್ರಕಾಶನ, ಮೈಸೂರು, 1995.
12. ಪೂರ್ಣ ಚಂದ್ರ ತೇಜಸ್ವಿ **ಚಿದಂಬರ ರಾಹಸ್ಯ** ಪುಸ್ತಕ ಪ್ರಕಾಶನ, ಮೈಸೂರು, 1991.
13. ಪೂರ್ಣ ಚಂದ್ರ ತೇಜಸ್ವಿ **ಕಿರಗೂರಿನ ಗಯ್ಯಾಳಿಗಳು,** ಪುಸ್ತಕ ಪ್ರಕಾಶನ, ಮೈಸೂರು, 1991
14. ಪೂರ್ಣ ಚಂದ್ರ ತೇಜಸ್ವಿ **ಕರ್ವಾಲೊ,** ಪುಸ್ತಕ ಪ್ರಕಾಶನ, ಮೈಸೂರು, 1992 (3ನೇ ಆವೃತ್ತಿ)
15. ಪೂರ್ಣ ಚಂದ್ರ ತೇಜಸ್ವಿ **ಜುಗಾರಿ ಕ್ರಾಸ್** ಪುಸ್ತಕ ಪ್ರಕಾಶನ, ಮೈಸೂರು 1994
16. ಪೂರ್ಣ ಚಂದ್ರ ತೇಜಸ್ವಿ **ವಿಸ್ಮಯ (೧)** ಪುಸ್ತಕ ಪ್ರಕಾಶನ, ಮೈಸೂರು, 1993
17. ಪೂರ್ಣ ಚಂದ್ರ ತೇಜಸ್ವಿ **ವಿಸ್ಮಯ (೨)** ಪುಸ್ತಕ ಪ್ರಕಾಶನ, ಮೈಸೂರು, 1993
18. ಪೂರ್ಣ ಚಂದ್ರ ತೇಜಸ್ವಿ **ವಿಸ್ಮಯ (೩)** ಪುಸ್ತಕ ಪ್ರಕಾಶನ, ಮೈಸೂರು, 1994
19. ಬಂಜಗೆರೆ ಜಯಪ್ರಕಾಶ, **ಮಹೂವಾ,** ಚರ ಪ್ರಕಾಶನ, ಹಾರೊಹಳ್ಳಿ, 1992
20. ರಾಘವೇಂದ್ರ ಪಾಟೀಲ, **ದೇಸಗತಿ,** ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, 1995
21. ವೇರಿಯರ್ ಎಲ್ವಿನ್ , **ಗಿರಿಜನ ಪ್ರಪಂಚ,** ಅನುಃ ಎಚ್.ಎಲ್. ನಾಗೇಗೌಡ, ಸಾಹಿತ್ಯ ಸ್ವದನ, ಬೆಂಗಳೂರು, 1967ರ ಆವೃತ್ತಿ.
22. ಶಿವರಾಮ ಕಾರಂತ, **ಮರಳಿ ಮಣ್ಣಿಗೆ** ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್ , ಬೆಂಗಳೂರು, 1990
23. ಶಿವ ಪ್ರಕಾಶ ಎಚ್.ಎಸ್. **ಮಾದಾರಿ ಮಾದಯ್ಯ** ಸಮುದಾಯ ಪ್ರಕಾಶನ, ಬೆಂಗಳೂರು, 1992
24. ಶಿವ ಪ್ರಕಾಶ ಎಚ್.ಎಸ್. **ಮಂಟೇಸ್ವಾಮಿ ಕಥಾ ಪ್ರಸಂಗ,** ಬೆಳ್ಳಿಚುಕ್ಕಿಟ್ರಸ್ಟ್, ಮೈಸೂರು 1995 (2ನೇ ಆವೃತ್ತಿ)
25. ಶಿವಪ್ರಕಾಶ ಎಚ್.ಎಸ್. **ಮಹಾಚೈತ್ರ,** ನವ ಕರ್ನಾಟಕ , ಪ್ರಕಾಶನ , ಬೆಂಗಳೂರು 1995
26. ಸ್ವಾಮಿ ಬಿ.ಜಿ.ಎಲ್. **ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕ;** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1991.
27. ಸ್ವಾಮಿ ಬಿ.ಜಿ.ಎಲ್. **ಹಸುರು ಹೊನ್ನು,** ಕಾವ್ಯಾಲಯ ಪ್ರಕಾಶಕರು, ಮೈಸೂರು 1991

2. ಸೃಜನ ಶೀಲ ಕೃತಿಗಳು (ಸಂಪಾದಿತ)

1. ಪರಮೇಶ್ವರ ಭಟ್ಟ ಸಂಃ **ಕನ್ನಡ ಅಭಿಜ್ಞಾನ ಶಾಕುಂತಳ,** ಶಾರದ ಮಂದಿರ, ಮೈಸೂರು, 1983.
2. ಪಾಂಡುರಂಗ ಸಂಃ **ಮಹಾಕವಿ ಕಾಳಿದಾಸ ವಿರಚಿತ ಅಭಿಜ್ಞಾನ ಶಾಕುಂತಲಮ್** , ಪ್ರಸಾರಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು , 1978.

3. **ಸಂಶೋಧನೆ , ವಿಚಾರ ಕೃತಿಗಳು**

1. ಅನಂತ ಮೂರ್ತಿ ಯು.ಆರ್. **ಪ್ರಜ್ಞೆ ಮತ್ತು ಪರಿಸರ;** ಅಕ್ಷರ ಪ್ರಕಾಶನ, ಸಾಗರ, ?
2. ಕಾರ್ಲ್ ಮಾರ್ಕ್ಸ್ ಮತ್ತು ಎಂಗಲ್ಸ್ , ಕಮ್ಯುನಿಸ್ಟ್ ಪಕ್ಷ ಪ್ರಣಾಳಿಕೆ; ಪ್ರಗತಿ ಪ್ರಕಾಶನ, ಮಾಸ್ಕೋ 1978.
3. ನಾಗೇಶ ಹೆಗ್ಗಡೆ, **ಇರುವುದೊಂದೇ ಭೂಮಿ;** ಅಕ್ಷರ ಪ್ರಕಾಶನ, ಹೆಗ್ಗೋಡು, 1989
4. ಬೋರಲಿಂಗಯ್ಯ ಹಿ.ಚಿ. **ಗಿರಿಜನ ನಾಡಿಗೆ ಪಯಣ;** ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು, 1991.
5. ಬೋರಲಿಂಗಯ್ಯ ಹಿ.ಚಿ. **ಕಾಡು, ಕಾಂಕ್ರೀಟ್ ಮತ್ತು ಜಾನಪದ;** ಅಕ್ಷರ ಪ್ರಕಾಶನ, ಹೆಗ್ಗೋಡು, 1995
6. ರೇಮಾಂಡ್ ವಿಲಿಯಮ್ಸ್ **ಪರಿಸರ ರಕ್ಷಣೆ ಮತ್ತು ಸಮಾಜವಾದ;** ಅನುಃ ಜಿ.ರಾಜಶೇಖರ, ಅಕ್ಷರ ಪ್ರಕಾಶನ, ಸಾಗರ, 1993
7. ಲಂಕೇಶ್, **ಟೀಕೆ ಟಿಪ್ಪಣಿ, ಸಂಪುಟ 1,** ಪತ್ರಿಕೆ ಪ್ರಕಾಶನ, ಬೆಂಗಳೂರು, 1991
8. ವಾಸುಕಿ. ಕೆ.ಜಿ. (ಸಂ) **ಕನ್ನಡ ಅಧ್ಯಯನ, ಕರ್ನಾಟಕದ ಪರಿಸರ;** ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1995
9. ಶಿವರಾಮ ಕಾರಂತ, **ಭಾರತದ ಪರಿಸರದ ಪರಿಸ್ಥಿತಿ;** ಅಕ್ಷರ ಪ್ರಕಾಶನ, ಸಾಗರ, 1984
10. ಶಿವರಾಮಯ್ಯ , **ಸಾಹಿತ್ಯ ಪರಿಸರ,** ವೈಚಾರಿಕ ಪುಸ್ತಕ ಮಾಲೆ, ಅನುವನಹಳ್ಳಿ, 1993.

4. **ಲೇಖನಗಳು**

1. ಕರ್ನಾಟಕ ವಿಮೋಚನ ರಂಗ, **ಕೊಜೆಂಟ್ರಿಕ್ಸ್ ವಿದ್ಯುತ್ ಉತ್ಪಾದನೆಯ ವಿಪತ್ತು;** ಬೆಳ್ಳಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು, ಆಗಸ್ಟ್ 1995
2. ಪ್ರಭುಸ್ವಾಮಿ ಮಠ, **ಪರಿಸರ ಪ್ರಜ್ಞೆ ಮತ್ತು ಬಸವಣ್ಣ;** ಸಂಕ್ರಮಣ ಸಂಚಿಕೆ 1 ಸಂಪುಟ 25 ಜನವರಿ 1990
3. ವಸಂತ ಬನ್ನಾಡಿ, **ಬಂಡವಾಳಶಾಹಿ ಪರಿಸರ;** ಅರಿವು ಬರಹ -5 ಸಂಗ್ರಹ ಮಂಗಳಗಂಗೋತ್ರಿ 1993.

೨ · ಕೊನೆ ಟಿಪ್ಪಣಿಗಳು

1. ಜುಗಾರಿ ಕ್ರಾಸ್ (ಮುನ್ನುಡಿ)
2. ಅರಿವು ಬರಹ, ಪು. 78
3. ಪರಿಸರ ರಕ್ಷಣೆ ಮತ್ತು ಸಮಾಜವಾದ, ಪು. 13
4. ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, (ಮುನ್ನುಡಿ)
5. ಸಂಕ್ರಮಣ, ೨೧೯ ಪು. 35
6. ಸುಡುವ ಭೂಮಿ, ಪು. 18 [ಪ, ನದಿ ಇಲ್ಲ... ನಂ. 6-9]
[illegible]
8. ಅದೇ, ಪು. 5 [ಪ, ವಸಂತ ವರ್ಣನೆ ನಂ. 10-12]
9. ಅದೇ, ಪು. 61 } [ಪ. ಕೊನೆ ಹಾಡು, ನಂ 13-16]
10. ಅದೇ, ಪು. 62
[illegible]
17. [illegible], ಪು. - 75
18. ಅದೇ, ಪು. - 75
20. ಅದೇ, ಪು. 75
21. ಅದೇ, ಪು. 75
22. ಅದೇ, ಪು. 76
23. ಅದೇ, ಪು. 76
24. ಪರಿಸರದ ಕಥೆ, ಪು. 136
25. ಅದೇ, ಪು. 138
26. ಅದೇ, ಪು. 137-138
27. ಅದೇ, ಪು. 47
28. ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು, ಪು.69
29. ಅದೇ, ಪು. 65-66
30. ಅದೇ, ಪು. 67
31. ದೇಸಗತಿ, ಪು. 83
32. ಅದೇ, ಪು. 89
33. ಅದೇ, ಪು. 90
34. ಅದೇ, ಪು. 103
35. ಜುಗಾರಿ ಕ್ರಾಸ್, ಪು. 10
36. ಕಾನೂರು ಹೆಗ್ಗಡತಿ, ಪು. 184-185
37. ಜುಗಾರಿ ಕ್ರಾಸ್, ಪು. 53
38. ಅದೇ, ಪು. 117
39. ಅದೇ, ಪು. 149-150
40. ಜುಗಾರಿ ಕ್ರಾಸ್, ಪು. 161
41. ಅದೇ, ಪು. 163
42. ಅದೇ, ಪು. 178-179
43. ಅದೇ, ಪು. 184
44. ಮಂಟೇಸ್ವಾಮಿ ಕಥಾ ಪ್ರಸಂಗ, ಪು. 21-22
45. ಮಾದಾರಿ ಮಾದಯ್ಯ ಪು. 1

46. ಮಂಟೇಸ್ವಾಮಿ ಕಥಾಪ್ರಸಂಗ, ಪು. 33
47. ಅದೇ, ಪು. 30
48. ಮಾದಾರಿ ಮಾದಯ್ಯ, ಪು. 55-56
49. ಮಂಟೇಸ್ವಾಮಿ ಕಥಾಪ್ರಸಂಗ, ಪು. 55-56
50. ಅದೇ. ಪು. 63
51. ಮಂಟೇಸ್ವಾಮಿ ಕಥಾಪ್ರಸಂಗ, ಪು. 64
52. ಮಾದಾರಿ ಮಾದಯ್ಯ , ಪು. 57
53. ಪುಷ್ಪರಾಣಿ, ಪು. 6-7
54. ಅದೇ, ಪು. 13
55. ಅದೇ, ಪು. 17-18
56. ಅದೇ, ಪು. 18
57. ಕನ್ನಡ ಅಭಿಜ್ಞಾನ ಶಾಕುಂತಳ, ಪು. 53
58. ಪುಷ್ಪರಾಣಿ, ಪು. 20
59. ಅದೇ, ಪು. 35
60. ಅದೇ, ಪು. 46-47
61. ಅದೇ, ಪು. 52
62. ಅದೇ, ಪು. 54
63. ಅದೇ, ಪು. 60-61
64. ಗಿರಿಜನ ನಾಡಿಗೆ ಪಯಣ, ಪು. 9
65. ಅದೇ, ಪು. 27
66. ಅದೇ, ಪು.63-64
67. ಅದೇ, ಪು.91
68. ಅದೇ, ಪು.92
69. ಅದೇ, ಪು.93
70. ಇರುವುದೊಂದೇ ಭೂಮಿ, ಪು.5
71. ಅದೇ, ಪು. 7
72. ಅದೇ, ಪು. 10
73. ಕಾಡು ಕಾಂಕ್ರೀಟ್ ಮತ್ತು ಜಾನಪದ, ಪು. 32
74. ಪರಿಸರ ರಕ್ಷಣೆ ಮತ್ತು ಸಮಾಜವಾದ, ಪು. 7
75. ಅದೇ, ಪು. 9
76. ಕಾಡು ಕ್ರಾಂತಿ ಮತ್ತು ಜಾನಪದ ಪು. 32
77. ಇರುವು ಒಂದೇ ಭೂಮಿ ಪು. 61-62
78. ಅದೇ, ಪು. 62
79. ಅದೇ, ಪು. 65-66